
ಪ್ರಚೋದನೆ

ಲಂಕೇಶ್


ಜೂನ್ 20, 2012 ಪುಟ 20 ರೂ. 14/-

ಕಕ್ಕಿಲ್ಲಾಯ ಲಾಲ್ ಸಲಾಮ್



ನಿತ್ಯಾನಂದನ ಗೋಪಿಕಾ ಸ್ತ್ರೀ ಕಣ್ಮರೆ

ಪವಿತ್ರ ಗ್ರಂಥ ರಕ್ಷಿಸಿದ್ದು ಮಾಂಸಾಹಾರಿ



ಂಗಳೂರು: ಪೋಲೀಸ್ ಪರದೆಯಲ್ಲಿ ಕೇಸರಿ ಕವಾಯತು!

ತ್ರದುರ್ಗ: ರುದ್ರಾಣಿಯ ರಾದ್ಧಾಂತದ ಹಿಂದೆ ಬಸವರಾಜನ್

ೀಸ್ ಕೋರ್ಸ್‌ನಲ್ಲಿ ೀತಗಾರಿಕೆ



ಮಹಾಂತೇಶ್ ಕೊಲೆ ಗೃಹಮಂತ್ರಿಯ ಬುಡಕ್ಕೇ ಅನುಮಾನದ ಹುತ್ತ

'ಗೋಲ್‌ಮಾಲ್' ಇನ್ವೆಸ್ಟರ್ ಮೀಟ್ (GIM)-ದೃಶ್ಯ-2

"ಇದೇ ಜೂನ್ 8 ರಿಂದ 'ಜಾಗತಿಕ ಬಂಡವಾಳ ಹೂಡಿಕೆದಾರರ' ಎರಡನೇ ಸಮಾವೇಶ ಪ್ರಾರಂಭವಾಗುತ್ತಿದೆ. ತನ್ನ ಬ್ರಹ್ಮಾಂಡ ಭ್ರಷ್ಟಾಚಾರ ಮತ್ತು ಹೀನಾತಿಹೀನ ಒಳಜಗಳಗಳಿಂದ ತನ್ನದೇ ಪಕ್ಷದ ಬೆಂಬಲಿಗರಿಂದ ಹಿಡಿದೂ ಇಡೀ ಕರ್ನಾಟಕದಿಂದ ಛೀಮಾರಿಗೊಳಗಾಗಿದ್ದ ಬಿಜೆಪಿ ಪಕ್ಷ ಈ 'ಬಂಡ್ವಾಳವಿಲ್ಲದ ಬಡಾಯಿ'ಯ ಎರಡನೇ 'ಬೊಂಬಾಯ್ ಸಿನಿಮಾ' ತೋರಿಸಿ ಜನರನ್ನು ಮರುಳುಗೊಳಿಸುತ್ತಿದೆ.

ಈ ಸಮಾವೇಶದಲ್ಲಿ ಜಗತ್ತಿನ ಹಲವಾರು ದೇಶಗಳಿಂದ ಮತ್ತು ದೇಶದ 25 ರಾಜ್ಯಗಳಿಂದ 700ಕ್ಕೂ ಹೆಚ್ಚು ಬಂಡವಾಳ ಹೂಡಿಕೆದಾರರು ಭಾಗವಹಿಸುತ್ತಿದ್ದಾರೆಂದೂ, ಇದರಿಂದ ಏನಿಲ್ಲವೆಂದರೂ ಕನಿಷ್ಠ ಪಕ್ಷ 6 ಲಕ್ಷ ಕೋಟಿ ಹೂಡಿಕೆಯನ್ನೂ ಮತ್ತು 10 ಲಕ್ಷ ಉದ್ಯೋಗ ಸೃಷ್ಟಿಯನ್ನೂ ನಿರೀಕ್ಷಿಸಬಹುದೆಂದೂ ಸರ್ಕಾರ ಬಡಾ ಬುರುಡೆ ಬಿಡುತ್ತಿದೆ. ಆದರೆ 2010ರಲ್ಲಿ ಯಡಿಯೂರಪ್ಪನವರ ನೇತೃತ್ವದಲ್ಲಿ ನಡೆದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನದ ಬಗ್ಗೆಯೂ ಇದೇ ಬಗೆಯ ಕಾಗಕ್ಕ ಗುಬ್ಬಕ್ಕ ಕಥೆಗಳನ್ನು ಹರಿದು ಬಿಡಲಾಗಿತ್ತು. ಕನಿಷ್ಠ 4.5 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮತ್ತು 8.5 ಲಕ್ಷ ಉದ್ಯೋಗ ಸೃಷ್ಟಿಯ ಬಣ್ಣದ ಬಲೂನನ್ನು ಹಾರಿಬಿಡಲಾಗಿತ್ತು. ಈಗ ಆ ಸಮಾವೇಶ ನಡೆದು ಎರಡು ವರ್ಷಗಳ ನಂತರ ಹೂಡಿಕೆದಾರರ ಸಮಾವೇಶದ ಅಸಲೀ ಸ್ವರೂಪವೇನೆಂದು ನೋಡಿದರೆ ಈಗ ನಡೆಯಲಿರುವ ಸಮಾವೇಶದ ಕರಾಮತ್ತೇನೆಂಬುದು ಗೊತ್ತಾಗುತ್ತದೆ.

2010ರಲ್ಲಿ ನಡೆದ ಹೂಡಿಕೆದಾರರ ಸಮಾವೇಶದಿಂದ ಈವರೆಗೆ ಎಷ್ಟು ಕೋಟಿ ಹಣ ಹರಿದು ಬಂದಿದೆ? ಇದರಲ್ಲಿ ಜಾಗತಿಕ ಬಂಡವಾಳವೆಷ್ಟು? ಇದರಿಂದ ಹೊಸದಾಗಿ ಸೃಷ್ಟಿಯಾದ ಉದ್ಯಮಗಳೆಷ್ಟು? ಈ ಸಮಾವೇಶ ಘೋಷಿಸಿದ ಸರ್ಕಾರೀ ಲಾಭಗಳನ್ನು ಪಡೆದುಕೊಳ್ಳಲು ಹಳೆ ಉದ್ಯಮಗಳೇ ಹಾಕಿದ ಹೊಸ ಸ್ಕೆಚ್ಚುಗಳೆಷ್ಟು? ಕೈಗಾರಿಕೋದ್ಯಮದ ಹೆಸರಲ್ಲಿ ವಶಪಡಿಸಿಕೊಳ್ಳಲಾದ ರೈತರ ಭೂಮಿಯೆಷ್ಟು? ಅದರಲ್ಲಿ ರಿಯಲ್ ಎಸ್ಟೇಟ್ ಪಾಲಾದದ್ದೆಷ್ಟು? ಈ ಉದ್ದಿಮೆಗಳು ಸೃಷ್ಟಿಸಿದ ಉದ್ಯೋಗಗಳೆಷ್ಟು? ಕಬಳಿಸಿದ ಉದ್ಯೋಗಗಳೆಷ್ಟು?

2010ರ ಸಮಾವೇಶದಿಂದ ಅಸಲು ಬಂದ ಬಂಡವಾಳವೆಷ್ಟು ಮತ್ತು ಏಕೆ?

2010ರ ಸಮಾವೇಶದಿಂದ 4.5 ಲಕ್ಷ ಕೋಟಿ ಬಂಡವಾಳ ಹರಿದು ಬಂದಿದೆಯೆಂದು ನಿನ್ನೆಯ ತನಕ ಬೊಗಳೆ ಬಿಡುತ್ತಿದ್ದ ನಿರಾಣಿ ಮತ್ತು ಸದಾನಂದ ಗೌಡರು ಈಗ ತಾವು ಎಂದೂ ಹಾಗೆ ಹೇಳಿಯೇ ಇರಲಿಲ್ಲವೆಂದು ಹೇಳುತ್ತಿದ್ದಾರೆ. ಸರ್ಕಾರ ಈಗ ಹೇಳುತ್ತಿರುವುದು "4.5 ಲಕ್ಷ ಕೋಟಿ ರೂ.ಗಳ ಭರವಸೆ ಇತ್ತು. ಅದರಲ್ಲಿ ಶೇ.62 ರಷ್ಟು ಹೂಡಿಕೆಯಾಗಿದೆ. ಹೀಗಾಗಿ 3 ಲಕ್ಷ ಕೋಟಿ ಬಂಡವಾಳ ಬಂದಿದೆ ಮತ್ತು ಅದು ಕೈಗಾರಿಕೆಯಾಗಿ ಪರಿವರ್ತಿತವಾಗುವ ವಿವಿಧ ಹಂತದಲ್ಲಿದೆ. ಇದರಲ್ಲಿ ಕೇವಲ 40 ಉದ್ಯಮಗಳು ಮಾತ್ರ ಅನುಷ್ಠಾನಗೊಂಡು ಚಾಲ್ತಿಯಲ್ಲಿವೆ."

ಉಳಿದ ಭರವಸೆ ಕೊಟ್ಟ 300ಕ್ಕೂ ಹೆಚ್ಚು ಉದ್ಯಮಗಳು ಯಾಕೆ ಬರಲಿಲ್ಲ?

ವಾಸ್ತವವಾಗಿ ಜಿಮ್ ಸಮಾವೇಶದಿಂದ ಹೊಸದಾಗಿ ಬಂದ ಬಂಡವಾಳದ ಪ್ರಮಾಣ ಕೇವಲ 5,000 ಕೋಟಿ ಮಾತ್ರ. ಉಳಿದವು ಇನ್ನೂ ಪೇಪರ್ ನಿಂದ ಕೆಳಗಿಳಿದಿಲ್ಲ. ಈ ಬಂಡವಾಳವು ಸಹ

ಚಾರ್ವಾಕ



• ಶಿವಸುಂದರ್

ಅಸ್ತಿತ್ವದಲ್ಲಿರುವ ಕಾರ್ಖಾನೆಗಳ ವಿಸ್ತರಣೆಗಾಗಿ ಬಳಕೆಯಾದವೇ ವಿನಃ ಹೊಸ ಹೂಡಿಕೆಯೆನ್ನಲಾಗುವುದಿಲ್ಲ. ಉದಾಹರಣೆಗೆ ನಿರಾಣಿಯವರ ಬಾಗಲಕೋಟೆಯಲ್ಲಿ ಜಿಮ್‌ನಿಂದಾಗಿ ಜಾರಿಗೆ ಬಂದಿರುವ ಏಕೈಕ ಯೋಜನೆ ಅವರ ನಿರಾಣಿ ಶುಗರ್ಸ್ ಕಂಪನಿಯ ವಿಸ್ತರಣೆ. ಜಿಮ್‌ಗೆ ಮುಂಚೆ ದಿನಕ್ಕೆ 10,000 ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದ್ದ ನಿರಾಣಿ ಕಾರ್ಖಾನೆ ಜಿಮ್‌ನಿಂದಾಗಿ ಸಿಕ್ಕ ಯಂತ್ರ ಆಮದು ಸುಂಕ ವಿನಾಯತಿ, ಇನ್ನಿತ್ಯಾದಿ ವಿನಾಯತಿ ಹಾಗೂ ರಿಯಾಯಿತಿ ಸೌಲಭ್ಯಗಳನ್ನು ಬಳಸಿಕೊಂಡು ತನ್ನ ಸಾಮರ್ಥ್ಯವನ್ನು ದಿನಕ್ಕೆ 1,50,000 ಟನ್ನಿಗೆ ವಿಸ್ತರಿಸಿಕೊಂಡಿದೆ. ಅದು ಬಿಟ್ಟು ಬಾಗಲಕೋಟೆಗೆ ಹರಿದು ಬರಲಾಗುತ್ತದೆ ಎಂದು ನಿರೀಕ್ಷಿಸಲಾಗಿದ್ದ 29,248 ಕೋಟಿ ಮೌಲ್ಯದ 7 ದೊಡ್ಡ ಹೂಡಿಕೆ ಪ್ರಸ್ತಾಪಗಳನ್ನು ಆ ಹೂಡಿಕೆದಾರರು ಕೈಬಿಟ್ಟಿದ್ದಾರೆ. ಬಾಗಲಕೋಟೆ ಜಿಲ್ಲೆಗೆ ಸಂಬಂಧಪಟ್ಟಂತೆ ಮಾಡಿಕೊಳ್ಳಲಾಗಿದ್ದ 59 ಒಡಂಬಡಿಕಾ ಪತ್ರಗಳಲ್ಲಿ ಇನ್ನೂ ಪೇಪರ್ ಮಟ್ಟದಲ್ಲಿ ಯಾದರೂ ಜೀವ ಉಳಿಸಿಕೊಂಡಿರುವುದು ಕೇವಲ ಐದು.

ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ಸಮಗ್ರ ಚಿತ್ರವನ್ನೇ ಬದಲಿಸುವ ರೀತಿಯಲ್ಲಿ 2010ರ ಜಿಮ್‌ನಲ್ಲಿ ಬೀದರ್ ಜಿಲ್ಲೆಗೆ 1318 ಕೋಟಿ ರೂಪಾಯಿಗಳ 19 ಯೋಜನೆಗಳು ಬರುತ್ತವೆಂಬ ಬಲೂನನ್ನು ಬಿಡಲಾಗಿತ್ತು. ಆದರೆ ಎರಡು ವರ್ಷಗಳ ನಂತರ ಅಲ್ಲಿಗೆ ಬಂದದ್ದು ಕೇವಲ 2 ಯೋಜನೆಗಳು ಮಾತ್ರ. ದೊಡ್ಡ ಹೂಡಿಕೆಯ ಭರವಸೆ ನೀಡಿದ್ದ 5 ಉದ್ದಿಮೆಗಳು ವಾಪಾಸ್ ಹೋಗಿವೆ.

ಕಾರವಾರ ಜಿಲ್ಲೆಗೆ ಭರವಸೆ ನೀಡಲಾಗಿದ್ದ 8296 ಕೋಟಿ ರೂ. ಹೂಡಿಕೆಯ ಯೋಜನೆಗಳಲ್ಲಿ ಈವರೆಗೆ ಒಂದೂ ಕಾರವಾರದ ಗಡಿಗೂ ಕಾಲಿರಿಸಿಲ್ಲ. ಬೆಳಗಾಂ ವಿಭಾಗದಲ್ಲಿ ಭರವಸೆ ನೀಡಲಾಗಿದ್ದರಲ್ಲಿ ಶೇ.10 ರಷ್ಟೂ ಬಂದಿಲ್ಲ ಮತ್ತು ವಿಸ್ತರಣಾ ಯೋಜನೆಗಳು ಒಂದೂ ಮುಂದೆ ಹೋಗಿಲ್ಲ.

ಕಳೆದ ಜಿಮ್ ಸಮಾವೇಶದಲ್ಲಿ ಅತಿಹೆಚ್ಚು ಬಂಡವಾಳ ಹೂಡಿಕೆಯ ಭರವಸೆ ಬಂದದ್ದು ಬಳ್ಳಾರಿ ಜಿಲ್ಲೆಗೆ. ಅಲ್ಲಿ ಜಗತ್ತಿನ ನಂ.1 ಸ್ಟೀಲ್ ಉದ್ಯಮಿ ಮಿತ್ತಲ್ 30,000 ಕೋಟಿ ಬಂಡವಾಳ ಹೂಡಿಕೆಯ 60 ಲಕ್ಷ ಟನ್ ಸ್ಟೀಲ್ ಉತ್ಪಾದನಾ ಘಟಕವನ್ನು ಸ್ಥಾಪಿಸುವುದಾಗಿ ಭರವಸೆ ಇತ್ತಿದ್ದ. ಅದೇ ರೀತಿ ಒರಿಸ್ಸಾದಲ್ಲಿ ಅತಿ ದೊಡ್ಡ ಪ್ರತಿರೋಧ ಎದುರಿಸುತ್ತಿರುವ ಪೋಸ್ಕೊ ಸ್ಟೀಲ್ ಕಂಪನಿ ಸಹ ಬಳ್ಳಾರಿಯಲ್ಲಿ 25,000 ಕೋಟಿ, ರೆಡ್ಡಿಯ ಬ್ರಾಹ್ಮಣಿ ಸ್ಟೀಲ್ಸ್ 30,000 ಕೋಟಿ, ಭೂಷಣ್ ಸ್ಟೀಲ್ಸ್ 30,000 ಕೋಟಿ ಹೂಡಿಕೆ ಮಾಡುವುದಾಗಿಯೂ 2010ರಲ್ಲಿ ಭರವಸೆ ನೀಡಿದ್ದವು. ಅಂದರೆ ಒಟ್ಟಾರೆ ಬಂಡವಾಳ ಹೂಡಿಕೆಯ ಭರವಸೆಯ ಶೇ.30ಕ್ಕೂ ಹೆಚ್ಚಿನ ಪಾಲು ಸ್ಟೀಲ್ ಉದ್ಯಮಿಗಳಿಂದ ಬಳ್ಳಾರಿ ಜಿಲ್ಲೆಗೆ ಬಂದಿತ್ತು. ಆದರೆ ಎರಡು ವರ್ಷಗಳ ನಂತರ ಮಿತ್ತಲ್ ಕಂಪನಿ ತಾನು ಹೂಡಿಕೆ ಮಾಡುವುದಿಲ್ಲ ಎಂದು ಹೇಳಿದೆ. ಪೋಸ್ಕೊ ಕಂಪನಿ ತನಗೆ ಕನಿಷ್ಠ 1000 ಎಕರೆ ಅದಿರು ಗಣಿಗಾರಿಕೆಗೆ ಅವಕಾಶ ಮಾಡಿಕೊಡದ ಹೊರತು ಹೂಡಿಕೆ ಮಾಡುವುದಿಲ್ಲ ಎಂದಿದೆ. ಬ್ರಾಹ್ಮಣಿ ಕಂಪನಿ ಬರ್ಬಾದ್ ಆಗಿ ದಿವಾಳಿ ಎದ್ದಿದೆ. ಭೂಷಣ್ ಕಂಪನಿ ಅಡ್ರೆಸ್ಸಿಗಿಲ್ಲವಾಗಿದೆ.

ಹೀಗೆ ಇಡೀ ಜಿಮ್ ಸಮಾವೇಶದ ಭರವಸೆಗಳು ಜನರೆದುರು ಆಡಿದ ನಾಟಕದಂತೆ ಕಾಣುತ್ತಿರುವಾಗ ಈಗ ಇನ್ನೊಂದು ನಾಟಕ ಪ್ರಾರಂಭಿಸಿದ್ದಾರೆ.

ಉದಾಹರಣೆಗೆ 2009ರ ಪ್ರಾರಂಭದಲ್ಲಿ ಅವುಗಳು ಒ[...] ಟನ್ ಅದಿರಿಗೆ 50 ಡಾಲರ್ ವಿಧಿಸುತ್ತಿದ್ದು 200[...] ಅಂತ್ಯದ ವೇಳೆಗೆ ದರವನ್ನು 120 ಡಾಲರ್‌ಗೆ ಏರಿಸಿದ[...] ಹೀಗಾಗಿ ಪ್ರಪಂಚದ ಸ್ಟೀಲ್ ಕಂಪನಿಗಳಿಗೆ ಭಾರತದ[...] ಕಡೆಗಳಲ್ಲಿ ಫ್ಯಾಕ್ಟರಿ ಸ್ಥಾಪಿಸಲು ಪುಕ್ಕಟೆ ಜಮೀ[...] ಮಾತ್ರವಲ್ಲದೆ ಈ ನೆಲವನ್ನು ಬಗೆದು ವಿಶ್ವ ಅದಿ[...] ಮಾರುಕಟ್ಟೆಯಲ್ಲಿ ಮಾರುವುದರಲ್ಲೇ ಹೆಚ್ಚು ಲಾಭವೆಂ[...] ಅರಿವಾಗಿದೆ. ಹೀಗಾಗಿ ಸ್ಟೀಲ್ ಆಸೆ ತೋರಿಸಿ ಅದಿ[...] ಗಣಿಗಾರಿಕೆ ಮಾಡಿ ಕೊಳ್ಳೆ ಹೊಡೆಯಲು ಪರವಾ[...] ಕೇಳುತ್ತಿವೆ. ದೇಶದ್ರೋಹಿ-ಜನದ್ರೋಹಿ ಬಿಜೆಪಿ ಅದಕ[...] ಒಪ್ಪಿಕೊಂಡಿದೆ. ಅವನ್ನು ಸಮಾವೇಶಕ್ಕೆ ಆಹ್ವಾನಿಸಿತ್ತು. ಅ[...] ಆನಂತರ ಈ ರೀತಿ ಅದಿರು ಪರವಾನಗಿ ನೀಡುವು[...] ಸುಪ್ರೀಂ ಕೋರ್ಟಿನಿಂದ ಅಡೆತಡೆ ಬಂದಾಗ ಅವು "[...] ಹಣ ಹೂಡಲು ಹಿಂದೇಟು ಹಾಕುತ್ತಿವೆ.

ಹಾಗೆಯೇ ಬೆಳಗಾಂ ಜಿಲ್ಲೆಯಲ್ಲಿ ಭಾರತ್ ಫೋ[...] ಕಂಪನಿ ನೈಸರ್ಗಿಕ ಅನಿಲ ಆಧರಿಸಿ 665 ಮೆಗಾವಾ[...]



ಅಸಲಿ ಪ್ರಶ್ನೆ: ಏಕೆ ಬಂಡವಾಳ ಹೂಡಿಕೆದಾರರು ಬಂಡವಾಳ ಹೂಡಲಿಲ್ಲ? ಇದಕ್ಕೆ ಒಂದೇ ಒಂದು ಉದಾಹರಣೆ ನೋಡಬಹುದು. ಕಳೆದ ಬಾರಿ ಹೂಡಿಕೆಯಲ್ಲಿ ಅತಿ ಹೆಚ್ಚು ಒತ್ತು ನೀಡಲಾಗಿದ್ದು ಸ್ಟೀಲ್ ಉದ್ಯಮಕ್ಕೆ. ಇಂದು ಸ್ಟೀಲ್ ಉದ್ಯಮಗಳಿಗೆ ಭಾರತದಂಥ ದೇಶಗಳಲ್ಲಿ ಬೇಕಾಗಿರುವುದು ಕೇವಲ ಸ್ಟೀಲ್ ಕಾರ್ಖಾನೆಯ ಸ್ಥಾಪನೆಯ ಪರವಾನಗಿಯಲ್ಲ. ಅದರಲ್ಲಿ ಹೆಚ್ಚು ಲಾಭವಿಲ್ಲ. ಅವರಿಗೆ ಬೇಕಾಗಿರುವುದು ತಮ್ಮದೇ ಆದ ಕ್ಯಾಪ್ಟಿವ್ ಗಣಿಗಾರಿಕೆ. ಆದ್ದರಿಂದಲೇ 60 ಲಕ್ಷ ಟನ್ ಸ್ಟೀಲ್ ಉತ್ಪಾದನೆ ಮಾಡಲು ಹೆಚ್ಚೆಂದರೆ 1,000-1,500 ಎಕರೆ ಜಮೀನು ಸಾಕಾಗುತ್ತದಾದರೂ ಅವು ಕನಿಷ್ಠ 5-6000 ಎಕರೆ ಜಮೀನು ಕೇಳುತ್ತಿವೆ. ಅದನ್ನು ಖಾತರಿ ಮಾಡದೆ ಅವು ಕರ್ನಾಟಕಕ್ಕೆ ಕಾಲಿಡುವುದಿಲ್ಲ.

ಪ್ರಪಂಚದ ಅದಿರು ಉದ್ಯಮವನ್ನು ಈಗ ಬಿಹೆಚ್‌ಪಿ-ಬಿನ್ನಿಟನ್, ರಿಯೊ ಟಿಂತೋ ಮತ್ತು ವೇಲ್ ಎಂಬ ಕಂಪನಿಗಳು ನಿಯಂತ್ರಿಸುತ್ತಿದ್ದು ಅವು ತಮ್ಮ ದರವನ್ನು ಈಗ ಪ್ರತಿ ಮೂರು ತಿಂಗಳಿಗೊಮ್ಮೆ ಏರಿಸುತ್ತಿವೆ.

ವಿದ್ಯುತ್ ಉತ್ಪಾದನಾ ಸ್ಥಾವರದ ಭರವಸೆ ನೀಡಿತ್ತು. ಆ[...] ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ನೈಸರ್ಗಿಕ ಅನಿಲ[...] ದರ ಏರುತ್ತಿದ್ದಂತೆ ತನ್ನ ಲಾಭದ ದರ ಕಡಿಮೆಯಾ[...] ವುದೆಂದು ಆ ಕಂಪನಿ ಹೂಡಿಕೆ ಮಾಡಲು ಹಿಂದೆಮು[...] ನೋಡುತ್ತಿದೆ.


ಲಾಭದ ಖಾತರಿ ಇದ್ದರೆ ಮಾತ್ರ ಹೂಡಿಕೆ[...]

ಈ ಎಲ್ಲಾ ಕಂಪನಿಗಳು ತಮಗೆ ಅಂತರರಾಷ್ಟ್ರೀ[...] ಮಾರುಕಟ್ಟೆಯಲ್ಲಿ ಉಂಟಾಗಬಹುದಾದ ನಷ್ಟಗಳ[...] ಎದುರಿಸಲು ಬೇಕಾದ ಲಾಭದ ಖಾತರಿಯನ್ನು ಕರ್ನಾ[...] ಸರ್ಕಾರ ನೀಡಿದರೆ ಮಾತ್ರ ಇಲ್ಲಿ ಹೂಡಿಕೆ ಮಾಡ[...] ತಯಾರಿರುತ್ತವೆ. ಅಂದರೆ ಅವುಗಳ ಉತ್ಪಾದನಾ ವೆಚ್ಚವ[...] ಕಡಿಮೆ ಮಾಡುವಂತೆ ಪುಕ್ಕಟೆ ದರದಲ್ಲಿ ನೆಲ, ನೀ[...] ವಿದ್ಯುತ್ ಕೊಟ್ಟು, ಖಾತರಿ ಮಾರುಕಟ್ಟೆ ಕೊಟ್ಟು, ಹತ್ತ[...] ವರ್ಷ ತೆರಿಗೆ ರಿಯಾಯಿತಿ ಕೊಟ್ಟರೆ ಮಾತ್ರ ಅವು [...] ಹೂಡಿಕೆ ಮಾಡುತ್ತವೆ. ಬಿಜೆಪಿ ಸರ್ಕಾರ ಅದಕ[...] ತಯಾರಾಗಿದೆ. ಉದಾಹರಣೆಗೆ ತುಂಗಭದ್ರಾ ಡ್ಯಾಂ ನೀರ[...]

▶4

ನೋ ಕಾಮೆಂಟ್ಸ್

"ಜಾತಿ, ಕಂದಾಚಾರ ಮತ್ತು ಧಾರ್ಮಿಕ ಶೋಷಣೆಗಳ ವಿರುದ್ಧ ಮೊಳಗಿದ ವೈಚಾರಿಕತೆಯನ್ನು ಮೈಗೂಡಿಸಿಕೊಂಡು ನಿರಂಕುಶಮತಿಗಳಾಗಿ, ವಿಶ್ವಮಾನವರಾಗಿ ಎಂಬ ಸಂದೇಶವಿತ್ತವರು ಕವಿ ಕುವೆಂಪು. ತಮ್ಮ ಸಂದೇಶಗಳನ್ನು ಪ್ರತಿಪಾದಿಸಿ ಬದುಕಿನಲ್ಲಿ ಆಚರಿಸಿದ ವ್ಯಕ್ತಿತ್ವ ಅವರದು. ಮೊನ್ನೆಯ ಒಕ್ಕಲಿಗರ ಸಮಾವೇಶದ ಭಿತ್ತಿಪತ್ರಗಳಲ್ಲಿ ಕುವೆಂಪು ಭಾವಚಿತ್ರವನ್ನು ಕಂಡು ನೊಂದೆವು. ಕುವೆಂಪು ಅವರ ಉದಾತ್ತ ಚಿಂತನೆಗಳನ್ನೆಲ್ಲಾ ಜಾತಿಯ ಚೌಕಟ್ಟಿನಲ್ಲಿ ಬಂಧಿಸಿದಂತೆ ಕಂಡಿತು. ಅವರ ಭಾವಚಿತ್ರವನ್ನು ಹೀಗೆ ಬಳಸುವುದು ಅಪರಾಧವಷ್ಟೆ ಅಲ್ಲ, ಅವರಿಗೆ ಮಾಡಿದ ಘೋರ ಅವಮಾನವೂ ಹೌದು. 80ರ ದಶಕದ ಒಂದು ಸಣ್ಣ ಘಟನೆ. 'ಉದಯ ರವಿ'ಗೆ ಹಿರಿಯ ಮಠಾಧೀಶರೊಬ್ಬರು ಆಗಮಿಸಿದ್ದರು. ಬಾಗಿಲಲ್ಲೇ ನಿಂತು ಅವರನ್ನು ಮಾತಾಡಿಸಿದ ಕುವೆಂಪು ವಿಶ್ವಮಾನವ ಸಂದೇಶದ ಪ್ರತಿಗಳನ್ನು ನೀಡಿ ಕಳಿಸಿಕೊಟ್ಟರು. ಇನ್ನು ಮುಂದೆ ಜಾತಿ ಸಂಘಟನೆಗಳಾಗಲಿ, ವಿಶಾಲ ಮನೋಧರ್ಮವಿಲ್ಲದ ಸಂಘಸಂಸ್ಥೆಗಳಾಗಲಿ ಕುವೆಂಪು ಅವರ ಭಾವಚಿತ್ರವನ್ನು ದಯವಿಟ್ಟು ಬಳಸಬೇಡಿ. ಹೀಗೆ ಗೌರವಾನ್ವಿತ ವ್ಯಕ್ತಿಯೊಬ್ಬರನ್ನು ಅವಮಾನಿಸುವುದು ಸಜ್ಜನಿಕೆಯಲ್ಲ."



-ಕ್ಷಾಕರ-ಸೇನಾನಿ

"ದಿನಕ್ಕೆ 28 ರೂಪಾಯಿ ಆದಾಯ ಮೀರಿದವರು ಬಡವರಲ್ಲ ಎಂದು ರೇಖೆ ಎಳೆದು ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಯೋಜನಾ ಆಯೋಗ, ಕೇವಲ ಎರಡು ಶೌಚಾಲಯಗಳ ನವೀಕರಣಕ್ಕೆ ರೂ. 30 ಲಕ್ಷ ಖರ್ಚು ಮಾಡಿದೆ. ಅಲ್ಲದೆ 2011 ಮೇ-ಅಕ್ಟೋಬರ್ ಅವಧಿಯಲ್ಲಿ ಆಯೋಗದ ಉಪಾಧ್ಯಕ್ಷ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಅವರ ವಿದೇಶಿ ಪ್ರವಾಸಕ್ಕೆ ದಿನವೊಂದಕ್ಕೆ 2.02 ಲಕ್ಷ ರೂಪಾಯಿ ಖರ್ಚು ಮಾಡಿದೆ."

-ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಮೇಡಂ ಜೊತೆ ಚರ್ಚೆ ತೃಪ್ತಿ ತಂದಿದೆ. ರಾಜ್ಯದ ಬಗೆಗೆ ಅವರಿಗೆ ಎಲ್ಲಾ ಗೊತ್ತಿದೆ. ಸಿದ್ದರಾಮಯ್ಯ ನಡೆಸಿದ ಬಳ್ಳಾರಿ ಪಾದಯಾತ್ರೆ, ವಿಧಾನ ಸಭೆ ವಿರೋಧ ಪಕ್ಷದ ನಾಯಕನಾಗಿ ನಿರ್ವಹಿಸುತ್ತಿರುವ ಪಾತ್ರ ಸೇರಿದಂತೆ ಪ್ರತಿಯೊಂದು ಬೆಳವಣಿಗೆಗಳ ಬಗ್ಗೆ ಅರಿವಿದೆ."



-ಸಿದ್ದರಾಮಯ್ಯನವರ ಆಪ್ತ ಬಳಗ

ಇದು ಸರಿಯಲ್ಲ

"ಮುಸ್ಲಿಂ ಜನಾಂಗದ 15 ವರ್ಷದ ಹುಡುಗಿ ಪ್ರೌಢಾವಸ್ಥೆ ತಲುಪಿದ್ದರೆ ಆಕೆಗೆ ಇಷ್ಟವಾದ ಯುವಕನೊಂದಿಗೆ ವಿವಾಹವಾಗಲು ಅಡ್ಡಿಯಿಲ್ಲ."

-ದೆಹಲಿ ಉಚ್ಚ ನ್ಯಾಯಾಲಯ


ನಿರಾಣಿ ಇರುವತನಕ ನಿರಾಳವಿಲ್ಲ, ಯುದ್ಧವಿನ್ನೂ ಮುಗಿದಿಲ್ಲ

"ರಾಜ್ಯಾದ್ಯಂತ ಭಾರೀ ಸುದ್ದಿಯಲ್ಲಿರುವ ಪೋಸ್ಕೋ ಅನುಷ್ಠಾನಗೊಳ್ಳುವುದರಲ್ಲಿ ಯಾವುದೇ ಅನುಮಾನ ಬೇಡ. ರೈತರು ಜಾಗ ಬಿಟ್ಟುಕೊಡಲು ಸಿದ್ಧರಿದ್ದರು. ಆದರೆ ರಾಜಕೀಯ ವ್ಯಕ್ತಿಗಳು ಇದನ್ನು ವಿವಾದ ಮಾಡಿದರು. ಆದರೆ ನಾವು ಈ ಯೋಜನೆಯನ್ನು ಸುಲಭಕ್ಕೆ ಬಿಡುವುದಿಲ್ಲ. ರಾಯಚೂರು, ಯಾದಗಿರಿ, ಬಿಜಾಪುರ ಅಥವಾ ಬಾಗಲಕೋಟೆಗೆ ಬನ್ನಿ ಎಂದು ಪೋಸ್ಕೋದವರನ್ನು ಆಹ್ವಾನಿಸಿದ್ದೇವೆ. ಅವರು ಕೊಪ್ಪಳ ಅಥವಾ ಬಳ್ಳಾರಿಯ[...] ಜಾಗ ಕೇಳುತ್ತಿದ್ದಾರೆ. ಇನ್ನೂ ಮಾತುಕತೆ ನಡೆಯುತ್ತಿದೆ..."

-ಮುರುಗೇಶ್ ನಿರಾಣಿ

ನೊಂದಾಗ ನೋಯದವರ ನಗೆಯೂ ಅಪ್ರಾಮಾಣಿಕ

"ಕನ್ನಡ ಭಾಷಿಕ ಸಮುದಾಯದ ನೂರಾರು ದನಿಗಳು ಈಗ ಕಾವ್ಯದ[...] ಕೇಳುತ್ತಿವೆ. ಈ ಹೊಸ ಪೀಳಿಗೆಯ ತುಡಿತ ಮಾನವೀಯ ಸಮಾಜದ[...] ನಿರ್ಮಾಣದೆಡೆಗೆಯೇ. ಸ್ವರ-ಲಯ-ನುಡಿಗಟ್ಟು-ಪ್ರತಿಮಾಲೋಕ[...] ಬೇರೆಯಾಗಿದ್ದರೂ ಒಟ್ಟಾರೆ ಇಂದಿನದು ದಲಿತ ಬಂಡಾಯ ಚಳವಳಿ ಬಿಡುಗ[...] ಮಾಡಿದ ಶಕ್ತಿಗಳ ಮುಂದುವರಿಕೆಯೇ ಆಗಿದೆ. ಈಗಿನ[...] ಕವನಗಳಲ್ಲಿ ಕವಿ ಎಲ್ಲಿದ್ದಾನೆ ಅಂತ ಹುಡುಕುವುದ[...] ತ್ರಾಸಿನ ಕೆಲಸ. ಅಖಂಡ ತಾತ್ವಿಕತೆಯ ಅನ್ವೇಷಣೆ[...] ಯಿಂದಾಗಿ ಆಯಾ ಕವಿಯ ಆಯಾ ವಯೋಮಾನ[...] ಸಹಜವಾದ ತವಕ ತಲ್ಲಣಗಳೇ ಕಾಣದಂತಾಗಿ ಎಲ್ಲರೂ ಸಾಮೂಹಿಕವಾಗಿ ಇಡೀ ಮನುಕುಲದ ದುರಂ[...] ಗೀತೆಯನ್ನು ಏಕತಾನದಲ್ಲಿ ಹಾಡುತ್ತಿರುವಂತೆ ಇದೆ."



-ಚಂಪಾ

ಕಕ್ಕಿಲ್ಲಾಯ ಅವರಿಗೆ ಲಾಲ್ ಸಲಾಮ್!

ಕಂಡಹಾಗೆ



• ಗೌರಿ ಲಂಕೇಶ್

ಕರ್ನಾಟಕ ರಾಜ್ಯದ ಹಿರಿಯ ರಾಜಕೀಯ ನಾಯಕ ...ಗಿದ್ದ ಬಿ.ವಿ.ಕಕ್ಕಿಲ್ಲಾಯ ಅವರನ್ನು ನಾನೆಂದೂ ಮುಖತಃ ...ಟಿ ಆಗಿರಲಿಲ್ಲ. ಆದರೆ ಅವರು ನನ್ನೊಂದಿಗೆ ಮಾತ್ರವಲ್ಲ ...ಮ್ಮ ಪತ್ರಿಕೆಯ ತಂಡದೊಂದಿಗೆ ಮತ್ತು ಓದುಗರೊಂದಿಗೆ ...ಂತರವಾದ ಸಂಪರ್ಕವನ್ನು ಹೊಂದಿದ್ದರು ಎಂಬುದನ್ನು ...ವೆಲ್ಲರೂ ಬಲ್ಲೆವು. ಅಂತಹ ಕಕ್ಕಿಲ್ಲಾಯ ಅವರು ಇತ್ತೀಚೆಗೆ ...ನ ಹೊಂದಿದ್ದು ನಮ್ಮ ರಾಜ್ಯಕ್ಕೇ ಆದ ದೊಡ್ಡ ನಷ್ಟ ...ಂದರೆ ಅದು ಖಂಡಿತವಾಗಿಯೂ ಉತ್ಪ್ರೇಕ್ಷೆ ಅಲ್ಲ.

ಕಕ್ಕಿಲ್ಲಾಯ ಅವರನ್ನು ಕುರಿತು ಸಿಪಿಐ ಪಕ್ಷದ ...ಯಕರಾದ ಮತ್ತು ಪತ್ರಿಕೆಯ ಮಿತ್ರರಾದ ಕಾಮ್ರೆಡ್ ...ದ್ದನಗೌಡ ಪಾಟೀಲರು ಇದೇ ಸಂಚಿಕೆಯಲ್ಲಿ ಒಂದು ...ಖನವನ್ನು ಬರೆದಿದ್ದಾರೆ. ಆದ್ದರಿಂದ ಇಲ್ಲಿ ಕಕ್ಕಿಲ್ಲಾಯ ...ವರನ್ನು ಕುರಿತಂತೆ ನನ್ನ ಸ್ವಂತ ಅನುಭವಗಳನ್ನು ...ಚಿಕೊಳ್ಳುತ್ತೇನೆ.

ಕಕ್ಕಿಲ್ಲಾಯ ಅವರು ಯಾವಾಗ ನಮ್ಮ ಪತ್ರಿಕೆಯನ್ನು ...ದಲಾರಂಭಿಸಿದರೋ ನನಗೆ ಗೊತ್ತಿಲ್ಲ. ಆದರೆ ನನಗೆ ...ಪಿರುವಂತೆ ಏಳು ವರ್ಷಗಳ ಹಿಂದೆ ...ವರು ನನಗೆ ಒಂದು ಈಮೇಲ್ ಕಳುಹಿಸಿ ...ಮ್ಮ ಈ ಪತ್ರಿಕೆಯ ಚಂದಾದಾರರಾದರು. ...ಷ್ಟೇ ಅಲ್ಲ, ರಾಜ್ಯದ ಮತ್ತು ದೇಶದ ...ಗುಹೋಗುಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ...ಳುಹಿಸಲಾರಂಭಿಸಿದರು. ಅವರಿಗೆ ಅಷ್ಟು ...ಹೊತ್ತಿಗಾಗಲೇ ತುಂಬಾ ವಯಸ್ಸಾಗಿತ್ತು, ...ಕಣ್ಣಿನ ದೃಷ್ಟಿ ಕುಗ್ಗಿತ್ತು, ಕಿವಿ ಮಂದವಾಗಿತ್ತು. ...ದರೂ ತಮ್ಮ ಸಹಾಯಕರ ನೆರವಿನೊಂದಿಗೆ ...ಮ್ಮ ಅಭಿಪ್ರಾಯಗಳನ್ನು ನುಡಿ ತಂತ್ರಾಂಶ ...ಲ್ಲಿ ಕಂಪೋಸ್ ಮಾಡಿಸಿ ಈಮೇಲ್ ...ಮಾಡುತ್ತಿದ್ದರು. ಅವರು ಪತ್ರಿಕೆಗೆ ಬರೆದ ಎಲ್ಲಾ ಪತ್ರಗಳನ್ನು ...ದಿಷ್ಟೂ ಎಡಿಟ್ ಮಾಡದೆ ಪ್ರಕಟಿಸಿದ್ದೇವೆ.

ಕಳೆದ ಮಾರ್ಚ್ ತಿಂಗಳಲ್ಲಿ ಪತ್ರಿಕೆಯ ವಾರ್ಷಿಕೋತ್ಸವವನ್ನು ಮಂಗಳೂರಿನಲ್ಲಿ ಏರ್ಪಡಿಸಿದಾಗ ಆ ಸಮಾರಂಭಕ್ಕೆ ಕಕ್ಕಿಲ್ಲಾಯ ಅವರನ್ನು ಆಹ್ವಾನಿಸುವ ಆಶೆ ನಮ್ಮದಾಗಿತ್ತು. ಆಗ ತೀವ್ರ ಅನಾರೋಗ್ಯ ಅವರನ್ನು ಕಾಡುತ್ತಿದ್ದರಿಂದ ಅವರಿಗೆ ಅನಾನುಕೂಲ ಮಾಡಕೂಡದೆಂಬ ಕಾರಣದಿಂದ ಸುಮ್ಮನಾಗಿದ್ದೆವು. ಆದರೆ ಕಕ್ಕಿಲ್ಲಾಯ ಅವರು ಸುಮ್ಮನಿರಲಿಲ್ಲ! ಅವರು ತಮ್ಮ ಮಿತ್ರರೊಬ್ಬರ ಮೂಲಕ ಮಂಗಳೂರಿನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದ ಸ್ಥಳಕ್ಕೇ ನನಗೆ ಒಂದು ಪತ್ರವನ್ನು ಕಳುಹಿಸಿದರು. ಆ ಪತ್ರದಲ್ಲಿ ಕಕ್ಕಿಲ್ಲಾಯ ಅವರು ಹೀಗೆ ಬರೆದಿದ್ದರು:

"ಗೌರವಾನ್ವಿತ ಗೌರಿ ಲಂಕೇಶ್‌ರವರಿಗೆ ಬಿ.ವಿ. ಕಕ್ಕಿಲ್ಲಾಯನ ವಂದನೆಗಳು ಮತ್ತು ಶುಭಾಶಯಗಳು.

ತಾವು ದಿನಾಂಕ **11.3.2012** ರಂದು ಆಯೋಜಿಸಿರುವ 'ಲಂಕೇಶ್ 77' ಕಾರ್ಯಕ್ರಮದಲ್ಲಿ ಭಾಗವಹಿಸುವ ಅಭಿಲಾಶೆ ನನಗಿದೆಯಾದರೂ ನನ್ನ ಅನಾರೋಗ್ಯದ ಕಾರಣದಿಂದಾಗಿ ಭಾಗವಹಿಸಲು ಅಶಕ್ತನಾಗಿದ್ದೇನೆ. ನೀವು ಹಮ್ಮಿಕೊಂಡಿರುವ ಕಾರ್ಯಕ್ರಮವು ಯಶಸ್ವಿಯಾಗಲಿ ಮತ್ತು ದಿವಂಗತ ಲಂಕೇಶ್‌ರವರ ಆದರ್ಶಗಳು ಮತ್ತು ಯೋಚನೆಗಳು ಪತ್ರಿಕಾರಂಗಕ್ಕೆ ಮಾರ್ಗದರ್ಶಕವಾಗಲಿ ಮತ್ತು ಆ ದಿಸೆಯಲ್ಲಿ ನಿಮ್ಮ ಪ್ರಯತ್ನಗಳು ಸಫಲವಾಗಲಿ ಎಂದು ಹಾರೈಸುತ್ತೇನೆ."



ಕಳೆದ ಮೇ ತಿಂಗಳಲ್ಲೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಕ್ಕಿಲ್ಲಾಯ

ಅವರ ಪತ್ರವನ್ನು ಮತ್ತು ಅದರಲ್ಲಿದ್ದ ಕಾಳಜಿಯನ್ನು ನೋಡಿ ನನಗೆಷ್ಟು ಆನಂದವಾಗಿತ್ತೆಂದರೆ ಅದನ್ನು ಜೋಪಾನವಾಗಿ ಇಟ್ಟುಕೊಂಡಿದ್ದೆ.

ಸದಾ ಜನಪರವಾಗಿ ಯೋಚಿಸುತ್ತಿದ್ದ ಕಕ್ಕಿಲ್ಲಾಯ ಅವರು ಮೊನ್ನೆಮೊನ್ನೆಯ ತನಕ ತಮ್ಮ ಚಿಂತನೆಗಳನ್ನು, ಕಾಳಜಿಗಳನ್ನು, ಅಸಮಾಧಾನವನ್ನು ನಮಗೆ ಕಳುಹಿಸುತ್ತಿದ್ದ ಪತ್ರಗಳಲ್ಲಿ ತೀಕ್ಷ್ಣವಾಗಿ ವ್ಯಕ್ತಪಡಿಸುತ್ತಿದ್ದರು. ನಮ್ಮ ಪ್ರಗತಿಪರ ಚಿಂತಕರಲ್ಲಿ ಒಬ್ಬರಾದ ಪಟ್ಟಾಭಿರಾಮ ಸೋಮಯಾಜಿ ಅವರ ಮೇಲೆ ಭಜರಂಗ ದಳದ ಸದಸ್ಯನೊಬ್ಬ ಸಗಣಿ ಮೆತ್ತಿದಾಗ ಕಕ್ಕಿಲ್ಲಾಯ ಅವರು ಕೋಮುವಾದಿ ಹಿಂದೂತ್ವವಾದಿಗಳ ಬಗ್ಗೆ ತಮ್ಮ ಆಕ್ರೋಶವನ್ನು ತಮ್ಮ ಪತ್ರದ ಮೂಲಕ ವ್ಯಕ್ತಪಡಿಸಿದ್ದರು. ಹಾಗೆಯೇ ಆದಿವಾಸಿಗಳ ಹಕ್ಕುಗಳನ್ನು ಕುರಿತಂತೆ ತನ್ನ ಸಮುದಾಯದ ಜನರಲ್ಲಿ ಅರಿವು ಮೂಡಿಸುತ್ತಿರುವ ಯುವಕ ವಿಠಲ ಮಲೆಕುಡಿಯ ಎಂಬ ವಿದ್ಯಾರ್ಥಿಯನ್ನು ನಕ್ಸಲ್ ಬೆಂಬಲಿಗ ಎಂಬ ಆರೋಪದ ಮೇಲೆ ಬಂಧಿಸಿರುವ ದಕ್ಷಿಣ ಕನ್ನಡ ಜಿಲ್ಲೆಯ ಪೊಲೀಸರು ಆತನಿಗೆ ಕೈಕೋಳ ಹಾಕಿ ಪರೀಕ್ಷಾ ಹಾಲಿಗೆ ಕರೆದುಕೊಂಡು ಹೋಗಿದ್ದರ ವಿರುದ್ಧವೂ ಕಕ್ಕಿಲ್ಲಾಯ ಪತ್ರಿಕೆಗಳಿಗೆ ಬರೆದಿದ್ದರಲ್ಲದೆ ಸ್ವತಃ ಮುಖ್ಯಮಂತ್ರಿ ಸದಾನಂದ ಗೌಡರ ವಿರುದ್ಧವೂ ಮಾನವ ಹಕ್ಕುಗಳ ಆಯೋಗಕ್ಕೆ ದೂರನ್ನು ದಾಖಲಿಸಿದ್ದರು.

ಪತ್ರಿಕೆಯ ಬಗ್ಗೆ ಹಲವು ಕಮ್ಯುನಿಸ್ಟರು ಇಲ್ಲ ಸಲ್ಲದ ಆರೋಪಗಳನ್ನು ಮಾಡಿದ್ದಾರೆ, ಪೂರ್ವಾಗ್ರಹಗಳನ್ನು ಹೊಂದಿದ್ದಾರೆ. ಆದರೆ ನಿಜವಾಗಿಯೂ ಜನಪರವಾಗಿ ಯೋಚಿಸುತ್ತಿದ್ದ ಕಕ್ಕಿಲ್ಲಾಯ ಅವರು ಈ ಪತ್ರಿಕೆಯೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿದ್ದರು ಎಂದರೆ ನಿಮ್ಮ ಈ ಪತ್ರಿಕೆ ನಿಜಕ್ಕೂ ಜನಪರವಾಗಿದೆ ಎಂಬುದಕ್ಕೆ ಸಾಕ್ಷಿ ನೀಡುತ್ತದೆ. ಕಕ್ಕಿಲ್ಲಾಯ ಅವರನ್ನು ಈ ಲೇಖನದ ಆರಂಭದಲ್ಲಿ ಕರ್ನಾಟಕ ರಾಜಕೀಯದ ಹಿರಿಯ ನಾಯಕರು ಎಂದು ಬಣ್ಣಿಸಿದೆ. ಅದನ್ನು ನೋಡಿ ಈ ರಾಜ್ಯದಲ್ಲಿ ಎಂದೂ ಅಧಿಕಾರವನ್ನು ಹಿಡಿಯದಿರುವ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದ ಕಕ್ಕಿಲ್ಲಾಯ ಅವರು ಅದು ಹೇಗೆ ರಾಜ್ಯದ ನಾಯಕರಾದರು ಎಂದು ಕೆಲವರಿಗೆ ಅನ್ನಿಸಿರಬಹುದು. ಆದರೆ ಅಧಿಕಾರ ಹಿಡಿದ ಮಾತ್ರಕ್ಕೇ ಯಾರೂ ರಾಜ್ಯದ ಹಿರಿಯ ನಾಯಕರಾಗುವುದಿಲ್ಲ. ಬದಲಾಗಿ ಬದುಕಿದ್ದಷ್ಟೂ ದಿನ ಸದಾ ನಾಡಿನ ಬಗ್ಗೆ ಚಿಂತಿಸಿದ, ಶೋಷಿತರ ಪರವಾಗಿ ಹೋರಾಡಿದ, ಸಾರ್ವಜನಿಕ ಹಿತಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದ ಕಕ್ಕಿಲ್ಲಾಯ ತರಹದವರು ನಿಜ ಅರ್ಥದಲ್ಲಿ ಜನರ ಮತ್ತು ರಾಜ್ಯದ ಪ್ರಮುಖ ನಾಯಕರಾಗುತ್ತಾರೆ.


94 ವರ್ಷಗಳ ಕಾಲ ಬದುಕಿದ್ದು, ಆ ಬದುಕಿನ ಪ್ರತಿಕ್ಷಣ ನೊಂದವರಿಗಾಗಿ, ನ್ಯಾಯಕ್ಕಾಗಿ ಪಟ್ಟು ಬಿಡದೆ ಸೆಣಸಾಡಿದ, ಎಂದೂ ಅಧಿಕಾರದೊಂದಿಗೆ ರಾಜಿ ಕಬೂಲಿ ಮಾಡಿಕೊಳ್ಳದ ಕಕ್ಕಿಲ್ಲಾಯರ ಪ್ರಾಂಜಲ ಬದುಕು, ಬರಹ, ರಾಜಕಾರಣ ಮತ್ತು ಹೋರಾಟಕ್ಕೆ ಪತ್ರಿಕೆಯ ಲಾಲ್ ಸಲಾಮ್!

ಸಿದ್ದರಾಮಯ್ಯ ಹಾದಿಯಲ್ಲಿನ ಮುಳ್ಳುಗಳು!!

"ಕಾಂಗ್ರೆಸ್‌ಗೆ ಕಾಂಗ್ರೆಸ್ಸೇ ಮುಳ್ಳು". ಈ ಮಾತನ್ನಾಡಿದವರು ಬೇರೆ ...ಯಾರೋ ಅಲ್ಲ, ಇತ್ತೀಚೆಗೆ ಕರ್ನಾಟಕಕ್ಕೆ ಬಂದಿದ್ದ ಕಾಂಗ್ರೆಸ್‌ನ ಯುವರಾಜ ...ರಾಹುಲ್ ಗಾಂಧಿ ಕಾಂಗ್ರೆಸ್‌ಗೆ ಉಪಯೋಗವಾಗುವಂಥ ಇಂಥಾ ಒಂದು ...ನುಡಿಮುತ್ತನ್ನಾಡಿದ್ದು. ಆಗತಾನೇ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕ ...ಸ್ಥಾನಕ್ಕೆ ರಾಜೀನಾಮೆ ನೀಡಿದ ಪ್ರಕರಣ ನಡೆದಿತ್ತು. ಈ ಎಲ್ಲಾ ಬೆಳವಣಿಗೆಗಳಿಂದ ...ಬೇಸತ್ತ ಯುವರಾಜ ಕಾಂಗ್ರೆಸ್ಸಿಗರಿಗೆ ಕೆಲ ಹಿತವಚನ ಹೇಳಿಹೋದರು. ...ಇಷ್ಟು ಮಾತ್ರವಲ್ಲ, ಹೆಲಿಪ್ಯಾಡ್‌ನಲ್ಲಿ ಸಿದ್ದು ಜೊತೆ ಪ್ರತ್ಯೇಕವಾಗಿ ಕೆಲ ನಿಮಿಷಗಳ ...ಮಾತುಕತೆ ನಡೆಸಿ, ಸಮಸ್ಯೆಯನ್ನು ಕೂಲಂಕಶವಾಗಿ ಚರ್ಚಿಸಲು ದೆಹಲಿಗೆ ...ಬರಬೇಕೆಂದೂ ಸೋನಿಯಾಜಿ ಜೊತೆ ಚರ್ಚೆಗೆ ವ್ಯವಸ್ಥೆ ಮಾಡುವುದಾಗಿಯೂ ...ವಿಶೇಷ ಆಹ್ವಾನ ನೀಡಿದ್ದರು. ಆಗಲೇ ಆತಂಕದಲ್ಲಿದ್ದ ಸಿದ್ದು ಅಭಿಮಾನಿಗಳಿಗೆ ...ಒಂದಷ್ಟು ಆಶಾಭಾವ ಮೂಡಿದ್ದು.

ಯುವರಾಜನ ಆಹ್ವಾನದ ಮೇರೆಗೆ ಸಿದ್ದು ಅಂಡ್ ಟೀಮ್ ದೆಹಲಿ ...ಯಾತ್ರೆ ಮುಗಿಸಿ ವಾಪಸ್ ಬಂದಿದೆ. ದೆಹಲಿಯ ಭೇಟಿ ಫಲಪ್ರದವಾಗಿತ್ತೆಂದು ...ಅವರ ಆಪ್ತವಲಯದಲ್ಲಿ ಗುಸುಗುಸು ಕೇಳಿ ಬರುತ್ತಿದೆ. ನಮಗೆ ಅವ್ಯಾವೂ ...ಅಷ್ಟು ಮುಖ್ಯವಲ್ಲ. ಆದರೂ ಇಲ್ಲಿ ನಮಗೆ ಮುಖ್ಯವಾಗುವ ಒಂದು ...ವಿಷಯವಿದೆ. ಕರ್ನಾಟಕದ ರಾಜಕೀಯದಲ್ಲಿ ಪ್ರಮುಖ ಪಾತ್ರಧಾರಿಯಾಗಿರುವ ...ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಇಲ್ಲಿನ ಪ್ರಮುಖ ಆಗುಹೋಗುಗಳ ಬಗ್ಗೆ ...ಕನಿಷ್ಠ ಮಟ್ಟದ ಜ್ಞಾನವೂ ಇಲ್ಲದ ದುಸ್ಥಿತಿ. ಹಾಗಾಗಿ ಹೈಕಮಾಂಡನ್ನು ...ಸುತ್ತುವರೆದಿರುವ ಕೆಲವರ ಮಾತುಗಳಿಗಷ್ಟೇ ಕಿವಿಗೊಟ್ಟು, ಪ್ರಮುಖ ...ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದು, ಎತ್ತು ಈಯ್ತು ಅಂದ್ರೆ ಕೊಟ್ಟಿಗೆಗೆ ...ಕಟ್ಟು ಎಂಬ ನಿರ್ಣಯಗಳೇ ಜಾರಿಯಾಗುತ್ತವೆ.

ಉತ್ತರ ಪ್ರದೇಶ, ಪಂಜಾಬ್‌ಗಳ ಚುನಾವಣಾ ಫಲಿತಾಂಶದಿಂದ ಕೆಲವು ...ಪಾಠಗಳನ್ನಾದರೂ ಹೈಕಮಾಂಡ್ ಕಲಿತಿರಬಹುದು. ಸಿದ್ದರಾಮಯ್ಯನ ಜೊತೆ ...ನಡೆದ ಚರ್ಚೆಯ ಸಾರಾಂಶವೇ ಅದಕ್ಕೆ ಸಾಕ್ಷಿ. ಅಂದು ದೆಹಲಿಯಲ್ಲಿ ...ಯುವರಾಜನೊಂದಿಗೆ ಪ್ರತ್ಯೇಕವಾಗಿ ಒಂದು ತಾಸು, ಹಾಗೇ ಸೋನಿಯಾ ...ಜೊತೆ ಪ್ರತ್ಯೇಕ ಒಂದು ತಾಸು ಚರ್ಚೆ ನಡೆಸಿದ ಸಿದ್ದರಾಮಯ್ಯ ರಾಜ್ಯದ ...ರಾಜಕೀಯದ ಒಳಸುಳಿಗಳನ್ನು ಮತ್ತು ತಮ್ಮದೇ ಪಕ್ಷದ ಹಾದಿಯಲ್ಲಿರುವ ...ಮುಳ್ಳುಗಳ ಬಗ್ಗೆ ವಿವರವಾಗಿ ಮಾತಾಡಿದ್ದಾರೆ. ಇಂದಿನ ಬಿಜೆಪಿಯ ಹೀನಾಯ ...ಸ್ಥಿತಿ, ಜೆಡಿಎಸ್‌ನ ಅತಂತ್ರದ ಪರಿಸ್ಥಿತಿ ಹಾಗೇ ಕಾಂಗ್ರೆಸ್‌ನ ಕಪ್ಪೆಗಳ ಪರಸ್ಪರರ ...ಕಾಲೆಳೆದಾಟ, ಪಕ್ಷದ ರಾಜ್ಯಾಧ್ಯಕ್ಷನ ಅದಕ್ಷತೆ ಹೀಗೆ ಎಲ್ಲವನ್ನೂ ವಿವರವಾಗಿ ಬಿಚ್ಚಿಟ್ಟಿದ್ದಾರಂತೆ. ಇಂಥಾ ಸಂದರ್ಭದಲ್ಲಿ ತಾವು ನಡೆಸಿದ ಬಳ್ಳಾರಿ ಪಾದಯಾತ್ರೆಯ ಪ್ರಾಮುಖ್ಯತೆ ಹಾಗೂ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಅಹಿಂದ ಮತಬ್ಯಾಂಕ್‌ನ ಅನಿವಾರ್ಯತೆ ಎಲ್ಲವೂ ಅಂದು ಚರ್ಚೆಗೆ ಬಂದಿವೆಯಂತೆ. ಎಲ್ಲವನ್ನೂ ಸಾವಧಾನದಿಂದ ಆಲಿಸಿದ ಹೈಕಮಾಂಡ್ ವಿಧಾನ ಪರಿಷತ್ ಚುನಾವಣೆಯ ನಂತರ ಎಲ್ಲಾ ಪ್ರಮುಖ ನಾಯಕರನ್ನು ಸಭೆ ಕರೆದು ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಭರವಸೆ ನೀಡಿದ್ದಾರೆ ಎಂಬ ಸುದ್ದಿಯಿಂದ ಸಿದ್ದು ಬೆಂಬಲಿಗರು ಮಾತ್ರವಲ್ಲದೆ, ಸದಾ ತೂಕಡಿಕೆಯಲ್ಲಿರುವಂತ ರಾಜ್ಯಾಧ್ಯಕ್ಷನಿಂದ ಬೇಸತ್ತಿರುವ ಕಾಂಗ್ರೆಸ್‌ನ ಹಲವು ನಿಷ್ಠಾವಂತ ಕಾರ್ಯಕರ್ತರಲ್ಲೂ ಹೊಸ ಹುಮ್ಮಸ್ಸು ಮೂಡಿಸಿದೆಯಂತೆ.



ವಿಶ್ವಸನೀಯ ಮೂಲಗಳ ಪ್ರಕಾರ ಸಿದ್ದು ತನ್ನ ರಾಜೀನಾಮೆಯನ್ನು ವಾಪಸ್ ಪಡೆಯಲು ಒಪ್ಪಿಲ್ಲ, ಅದೇನಿದ್ದರೂ ಹೈಕಮಾಂಡ್‌ನ ಮುಂದಿನ ನಿರ್ಧಾರಗಳ ಮೇಲೆ ಆಧಾರವಾಗಿರುತ್ತದಂತೆ. ಅಂದಹಾಗೆ ಸಿದ್ದು ಹೈಕಮಾಂಡ್ ಮುಂದೆ ಕೆಲವು ಪ್ರಸ್ತಾಪಗಳನ್ನು ಇಟ್ಟಿದ್ದಾರೆ. ಅವುಗಳಲ್ಲಿ ರಾಜ್ಯ ನಾಯಕತ್ವ ಬದಲಾವಣೆಯ ಪ್ರಸ್ತಾಪವೂ ಒಂದು. ಪರಮೇಶ್ವರರ ನಾಯಕತ್ವದಲ್ಲೇನಾದರೂ ಚುನಾವಣೆ ಎದುರಿಸುವುದಾದರೆ ಕಾಂಗ್ರೆಸ್ ನೆಲಕಚ್ಚುವುದು ಗ್ಯಾರಂಟಿ ಎಂಬುದು ಸಿದ್ದು ಬಣದ ವಾದ. ಬದಲಿಗೆ ದಲಿತ ಜನಾಂಗದ ಪ್ರತಿನಿಧಿಯಾಗಿ ಖರ್ಗೆಯವರನ್ನಾಗಲಿ, ಲಿಂಗಾಯತ ಕೋಮಿನವರಿಗೆ ಆದ್ಯತೆ ಕೊಡುವುದಾದರೆ ಶಾಮನೂರರನ್ನಾಗಲಿ ಇಲ್ಲವೇ ಯಾವುದೇ ಹಗರಣಗಳಲ್ಲಿ ಸಿಲುಕದೆ ಸಚ್ಚಾರಿತ್ರ್ಯವನ್ನು ಕಾಪಾಡಿಕೊಂಡಿರುವ, ಮೇಲಾಗಿ ಅಹಿಂದ ಇಮೇಜನ್ನು ಹೊಂದಿರುವ ತನಗಾಗಲಿ ಅಧ್ಯಕ್ಷ ಸ್ಥಾನ ನೀಡಬೇಕೆಂಬ ಪ್ರಸ್ತಾಪವನ್ನು ಸಿದ್ದು ಮುಂದಿಟ್ಟಿದ್ದಾರೆಂದು ದೆಹಲಿಯಿಂದ ಸೋರಿಕೆಯಾದ ಸುದ್ದಿಗಳು ಹೇಳುತ್ತಿವೆ.

ಈ ಎಲ್ಲಾ ಬೆಳವಣಿಗೆಗಳಿಂದ ಸಿದ್ದುವನ್ನು ಮೂಲೆಗುಂಪು ಮಾಡಲು ಹಗಲಿರುಳು ಷಡ್ಯಂತ್ರ ಹೆಣೆದು ಸೋನಿಯಾ ಚಿಕಿತ್ಸೆಗೆ ಹೋದ ಸಂದರ್ಭ ಬಳಸಿಕೊಂಡು ತಮ್ಮದೇ ದಾಳಗಳನ್ನು ಉರುಳಿಬಿಟ್ಟಿದ್ದ ಪರಮೇಶ್ವರ್ ಹಾಗೂ ಎಸ್‌ಎಂ ಕೃಷ್ಣನ ಗುಂಪು ಬೇಸ್ತು ಬಿದ್ದಿರುವುದಂತೂ ನಿಜ. ತಮ್ಮ ಬಾಣವೇ ತಮಗೆ ತಿರುಗು ಬಾಣವಾಗುತ್ತದೆಂದು ಈ ಚಾಣಾಕ್ಷರು ಎಣಿಸಿರಲೇ ಇಲ್ಲ.

ಇತ್ತಕಡೆ ರಾಜ್ಯದ ರಾಜಕೀಯ ಮೂರಾಬಟ್ಟೆಯಾಗಿ ಮೂರಾದಾರಿಯಲ್ಲಿ ಕುಳಿತಂತಾಗಿ ಹೋಗಿದೆ. ಆಡಳಿತ ಹಾಗೂ ವಿರೋಧ ಪಕ್ಷದ ಪ್ರಮುಖರೆಲ್ಲಾ ಜೈಲ್ ಹಾಗೂ ಬೇಯ್ಲ್‌ಗಳ ಮಧ್ಯೆ ಸಿಲುಕಿ ಹೈರಾಣಾಗಿ ಹೋಗಿದ್ದಾರೆ. ಇಂಥಾ ಸ್ಥಿತಿಯಲ್ಲಿ ಅವುಗಳಿಂದ ಹೊರತಾಗಿರುವ ಕೆಲವೇ ವ್ಯಕ್ತಿಗಳಲ್ಲಿ ಸಿದ್ದರಾಮಯ್ಯ ಪ್ರಮುಖರು. ಮೇಲಾಗಿ ಸಿದ್ದು ಒಬ್ಬ ಮಾಸ್‌ಲೀಡರ್. ಗೂಂಡಾಗಿರಿ ಅಥವಾ ಜಾತಿವಾದವೇ ಮೌಲ್ಯವಾಗಿರುವ ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಗೆ ಉಳಿದಿರುವ ಆಶಾವಾದವೇ ಸಿದ್ದರಾಮಯ್ಯ ಎಂಬುದು ಕಾಂಗ್ರೆಸ್‌ನ ಮೊಗಸಾಲೆಗಳಲ್ಲೇ ಕೇಳಿಬರುವ ಮಾತು.

ಅಂತೂ ಇಂತೂ ಕಾಂಗ್ರೆಸ್‌ನ ಹೈ ಕಮಾಂಡ್‌ಗೆ ತನ್ನ ಕಾಲಬುಡದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಸಿದ್ದು ಭೇಟಿ ಕಲ್ಪಿಸಿಕೊಟ್ಟಿದೆ. ಈಗಲೂ ಅವರು ತಮ್ಮ ಚಾಳಿ ಬಿಡದೇ ಹೋದರೆ ಕಾಂಗ್ರೆಸ್ಸನ್ನು ಕಾಪಾಡಲು ಆ ಬ್ರಹ್ಮನಿಂದಲೂ ಸಾಧ್ಯವಿಲ್ಲ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಮುದ್ರಣ ಅಚಾತುರ್ಯಕ್ಕೆ ಕ್ಷಮೆ ಇರಲಿ

ಕಳೆದ ವಾರ ನಿಮ್ಮ ಈ ಲಂಕೇಶ್ ವಾರ ಪತ್ರಿಕೆಯ ಪುಟ **12**ರಿಂದ **19**ರ ವರೆಗಿನ ಪುಟಗಳಲ್ಲಿ ...ದಕ್ಕೂ ಹಿಂದಿನ ವಾರದ ಸಂಚಿಕೆಯ ಪುಟಗಳು ಪುನರಾವರ್ತನೆಯಾಗಿ ಮುದ್ರಣಗೊಂಡಿದ್ದವು. ನಾವು ...ಸಿದ್ಧಮಾಡಿ ನಮ್ಮ ಕಚೇರಿಯಿಂದ ಪ್ರಿಂಟಿಂಗ್ ಪ್ರೆಸ್ಸಿಗೆ ಈ-ಮೇಲ್ ಮಾಡಿದ್ದ ಪುಟಗಳು ಅದ್ಯಾವುದೋ ...ತಾಂತ್ರಿಕ ದೋಷದಿಂದಾಗಿ ಅಲ್ಲಿಗೆ ತಲುಪದೆ ಪ್ರೆಸ್ಸಿನವರು ತಮಗೆ ಅರಿವಿಲ್ಲದಂತೆ ಹಿಂದಿನ ಸಂಚಿಕೆಯ ...ಪುಟಗಳನ್ನು ಮುದ್ರಿಸಿದ್ದರಿಂದ ಈ ತಪ್ಪು ನಡೆಯಿತು. ಈ ಅಚಾತುರ್ಯವು ಓದುಗರಂತೆಯೇ ನಮ್ಮ ...ತಂಡಕ್ಕೂ ಬಹಳ ಬೇಸರ ಹಾಗೂ ಬೇಸರ ಮೂಡಿಸಿದೆ.

ಇನ್ನೊಮ್ಮೆ ಹೀಗಾಗದು.

ಎಲ್ಲರ ಕ್ಷಮೆ ಇರಲಿ.

-ಸಂ


ಇವರೀಗ ನಮ್ಮ ಬಳಗದಲ್ಲಿ ಇಲ್ಲ...



ಲಂಕೇಶ್ ಪತ್ರಿಕಾ ಬಳಗದಲ್ಲಿ ಡಿಸೈನರ್ ಆಗಿದ್ದ ಜಿ. ಅರುಣ್ ಕುಮಾರ್ ಮತ್ತು ಆರ್ಟಿಸ್ಟ್ ಆಗಿದ್ದ ಮಂಜುನಾಥ ನೀಲಸೋಗೆ ಈಗ ನಮ್ಮ ಸಂಸ್ಥೆಯಲ್ಲಿಲ್ಲ.

ಲಂಕೇಶ್ ಹಾಗು ಗೈಡ್ ಪತ್ರಿಕೆಗಳ ಡಿಸೈನರ್ ಆಗಿ ಕೆಲಸ ಮಾಡಿದ ಅರುಣ್ ಪತ್ರಿಕೆಯ ಸಿನಿಮಾ ಪುಟಗಳಿಗೂ ಬರೆಯುತ್ತಿದ್ದರು. ಕೆಲ ವರ್ಷಗಳ ಕಾಲ ನಮ್ಮ ತಂಡದೊಂದಿಗಿದ್ದ ಅರುಣ್‌ಗೆ ಧನ್ಯವಾದಗಳು. ಅರುಣ್ ಮುಂದೆ ಉತ್ತಮ ಅವಕಾಶಗಳನ್ನು ಪಡೆಯಲಿ ಎಂದು ಆಶಿಸುತ್ತೇವೆ.

-ಸಂ



ದಣಿವರಿಯದ ಹೋರಾಟಗಾರನ ನಿರ್ಗಮನ

ಹಿರಿಯ ಕಮ್ಯುನಿಸ್ಟ್ ನಾಯಕ ಸ್ವಾತಂತ್ರ್ಯ ಹೋರಾಟಗಾರ ಕಾಮ್ರೇಡ್ ಬಿ.ವಿ. ಕಕ್ಕಿಲ್ಲಾಯ ಈ ತಿಂಗಳು 4 ರಂದು ನಮ್ಮನ್ನಗಲಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ದೇಶಕ್ಕೆ ಸ್ವಾತಂತ್ರ್ಯ ಪಡೆಯಲು, ಸ್ವಾತಂತ್ರ್ಯಾನಂತರ ಪಡೆದ ಸ್ವಾತಂತ್ರ್ಯವನ್ನು ಈ ದೇಶದ ಜನಸಾಮಾನ್ಯರಿಗೆ ತಲುಪಿಸಲು ತಮ್ಮ ಬದುಕನ್ನೇ ಮುಡಿಪಾಗಿಟ್ಟು ಕೆಲವೇ ಜನರಲ್ಲಿ ಬಿ.ವಿ. ಕಕ್ಕಿಲ್ಲಾಯ ಒಬ್ಬರು. ಕೊನೆ ಉಸಿರಿನತನಕ ಹೋರಾಟವೆಂದರೆ ಹೀಗೇ. ಕಕ್ಕಿಲ್ಲಾಯರು ಕಳೆದ ಹತ್ತು ದಿನಗಳಿಂದ ತೀವ್ರ ಅನಾರೋಗ್ಯಕ್ಕೊಳಗಾದರು. ಮೆದುಳಿನಲ್ಲಿ ರಕ್ತಸ್ರಾವವಾಗಿ ಮಂಗಳೂರಿನ ಆಸ್ಪತ್ರೆಗೆ ಸೇರಿಸಲ್ಪಟ್ಟರು. ಆದರೆ ಅವರ ಆರೋಗ್ಯ ಕೈಕೊಡುವ ಕೇವಲ ಐದು ದಿನದ ಮುಂಚೆ ನಕ್ಸಲ್‌ವಾದಿ ಎಂದು ಆರೋಪಿಸಿ ಬಂಧಿಸಲ್ಪಟ್ಟ ವಿಠ್ಠಲ್ ಮಲೆಕುಡಿಯನ ಬಿಡುಗಡೆಗಾಗಿ ಕಕ್ಕಿಲ್ಲಾಯರು ಬೀದಿಗಿಳಿದು ಹೋರಾಟ ಮಾಡಿದರು. ಅವರಿಗೆ 94 ವರ್ಷ. ಈ ವಯಸ್ಸಿನಲ್ಲೂ ಸರ್ಕಾರದ ವಿರುದ್ಧ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ವಿಠ್ಠಲ ಒಬ್ಬ ವಿದ್ಯಾರ್ಥಿ ಅವನ ವಿದ್ಯಾಭ್ಯಾಸದ ಹಕ್ಕನ್ನು ಕಸಿಯುವುದು ಅಪರಾಧ. ಸರ್ಕಾರ ಈಗ ಅವನನ್ನು ವಿಚಾರಣೆಯ ನೆಪದಲ್ಲಿ ಜೈಲಿಗೆ ತಳ್ಳಿದೆ. ನಾಳೆ ದಿನ ಅವನು ನಿರಪರಾಧಿ ಅಂತಾದರೆ ಅವನಿಗಾದ ನಷ್ಟವನ್ನು ಸರ್ಕಾರ ತುಂಬಿಕೊಡುತ್ತದೆಯೋ ಎಂದು ಆಕ್ರೋಶಭರಿತರಾಗಿ ಮಾತನಾಡಿದರು. ಅವರ ಯೌವ್ವನದ ದಿನಗಳಲ್ಲಿದ್ದ ಅದೇ ಧ್ವನಿ, ಅದೇ ಸ್ಪಷ್ಟತೆ, ವ್ಯವಸ್ಥೆಯ ವಿರುದ್ಧವಿದ್ದ ಅದೇ ರೋಷ ಅಂದು ಅವರ ಮಾತುಗಳಲ್ಲಿತ್ತು, ಪರಿಣಾಮ ಮಾರನೇ ದಿನವೇ ವಿಠ್ಠಲ ಮಲೆಕುಡಿಯ ಅವರಿಗೆ ಪರೀಕ್ಷೆ ಬರೆಯಲು ಅನುಮತಿ ದೊರೆಯಿತು. ಇದು ಬದುಕಿನ ಕೊನೆದಿನಗಳಲ್ಲಿ ಕಕ್ಕಿಲ್ಲಾಯ ಅವರು ನಡೆಸಿದ ಹೋರಾಟ.

1940ರಲ್ಲಿ ಅವರು ವಿದ್ಯಾರ್ಥಿಯಾಗಿದ್ದಾಗಲೇ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದ ಕಕ್ಕಿಲ್ಲಾಯರವರು 1942 ರ ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರದಿಂದ ಬಂಧನಕ್ಕೊಳಗಾದರು. ಅಂದಿನಿಂದ ಅವರ ಹೋರಾಟದ ಬದುಕು ನಿರಂತರ ಎಪ್ಪತ್ತು ವರ್ಷಗಳ ಕಾಲ ಮುಂದುವರೆಯಿತು. ಒಬ್ಬ ವ್ಯಕ್ತಿ ನಿಧನರಾದಾಗ ಆಲೋಚಿಸಬೇಕಾದದ್ದು ಅವನು ಹೇಗೆ ಬದುಕಿದ್ದ ಎಂದು. ಕಕ್ಕಿಲ್ಲಾಯರು ಹೋರಾಟ, ಚಳವಳಿ, ರಾಜಕಾರಣ, ವೈಚಾರಿಕತೆ, ಪತ್ರಿಕೋದ್ಯಮ, ಪ್ರಕಾಶಕ, ಸಂಘಟಕ, ಕಾರ್ಯಕರ್ತ, ನಾಯಕ-ಹೀಗೆ ಎಲ್ಲ ರಂಗಗಳಲ್ಲಿ ಸಮರ್ಥವಾಗಿ ಕೆಲಸ ಮಾಡಿ ಒಂದು ಮಾದರಿಯನ್ನು ನಮ್ಮ ಮುಂದೆ ಇಟ್ಟುಹೋಗಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ಅವರ ದೃಷ್ಟಿ ಮಂದವಾಯಿತು. ಕಿವಿ ಮಂದವಾಯಿತು. ಡಯಾಬಿಟಿಸ್‌ನಿಂದಾಗಿ ಶಕ್ತಿ ಕುಂದಿತು. ಆದರೆ ಅವರ ಅದಮ್ಯವಾದ ಚೈತನ್ಯ ಪ್ರಖರವಾಗಿತ್ತು, ಪತ್ರಿಕೆಗಳನ್ನು, ಹೊಸ ಪುಸ್ತಕಗಳನ್ನು, ಪಕ್ಷದ ಸುತ್ತೋಲೆಗಳನ್ನು ಮತ್ತೊಬ್ಬರಿಂದ ಗಟ್ಟಿ ಧ್ವನಿಯಲ್ಲಿ ಓದಿಸಿ ಕೇಳಿಸಿಕೊಳ್ಳುತ್ತಿದ್ದರು. ಆ ಮೂಲಕ ಪ್ರಸ್ತುತ ವಿದ್ಯಮಾನಗಳನ್ನು ತಿಳಿದುಕೊಳ್ಳುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿಯೇ ಅವರು ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ಕುರಿತು ತಮ್ಮ ಪ್ರತಿಕ್ರಿಯೆಯನ್ನು ಹೇಳಿಬರೆಯಿಸಿ ವ್ಯಕ್ತಪಡಿಸುತ್ತಿದ್ದರು. ಹೀಗೆ ಇನ್ನೊಬ್ಬರಿಂದ ಓದಿಸಿ ಕೇಳಿಸಿಕೊಂಡು ಹಲವಾರು ಲೇಖನಗಳನ್ನು ಬರೆದಿದ್ದಾರೆ. ಇನ್ನೂ ಆಶ್ಚರ್ಯವೆಂದರೆ ಭಾರತ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿ ಪ್ರಕಟಿಸಿದ ದಲಿತ ಸಮಸ್ಯೆ ಹಾಗೂ ಸಾಚಾರ ವರದಿ ಕುರಿತ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಪಕ್ಷದ ಸಂವಿಧಾನವನ್ನು ಅನುವಾದ ಮಾಡಿ ತಾವೇ ದುಡ್ಡು ಕೊಟ್ಟು ಮುದ್ರಿಸಿ ಪಕ್ಷದ ಎಲ್ಲ ಸದಸ್ಯರಿಗೂ ಕೊಡಬೇಕೆಂದು ಪಕ್ಷದ ರಾಜ್ಯ ಮಂಡಲಿಗೆ ಕಳಿಸಿದರು. ಅವರು ನಿಧನರಾಗುವ ಕೇವಲ ಹದಿನೈದು ದಿನದ ಮೊದಲು 'ದೇಶದ ಪ್ರಥಮ ಪಾರ್ಲಿಮೆಂಟಿನ ಸದಸ್ಯರಾಗಿ, ನನ್ನ ಅನುಭವ' ಎಂಬ ಲೇಖನ ಬರೆದು ಹೊಸತು ಪತ್ರಿಕೆಗೆ ಕಳಿಸಿದ್ದಾರೆ. ಲಂಕೇಶ್ ಪತ್ರಿಕೆಗೆ ಲೇಖನ ಬರೆದು ಕಳಿಸಿದ್ದಾರೆ. ಇವೆಲ್ಲ ನಡೆದದ್ದು ಅವರ ಕಣ್ಣು ಕಿವಿ ಮಂದವಾದ ಮೇಲೆ. ಕೈ ತನ್ನ ಶಕ್ತಿಯನ್ನು ಕಳೆದುಕೊಂಡ ಮೇಲೆ. ಆದಕ್ಕೇ ಕಕ್ಕಿಲ್ಲಾಯರನ್ನು ಕೊನೆಯುಸಿರಿನವರೆಗೂ ಹೋರಾಡಿದ ದಣಿವರಿಯದ ಹೋರಾಟಗಾರ ಎನ್ನುವುದು.

ಅಂದಿನ ದಕ್ಷಿಣ ಕನ್ನಡವನ್ನು ಒಳಗೊಂಡಿದ್ದ ಮದ್ರಾಸ್ ಪ್ರಾಂತದಿಂದ 1952 ರಲ್ಲಿ ಪಾರ್ಲಿಮೆಂಟ್‌ಗೆ ಆಯ್ಕೆಯಾಗಿ ರಾಜ್ಯಸಭೆಯಲ್ಲಿ ಕರ್ನಾಟಕದ ಏಕೀಕರಣದ ಬಗ್ಗೆ ಮಾತಾಡಿದ ಮೊದಲ ಸದಸ್ಯ ಈ ಕಮ್ಯುನಿಸ್ಟ್ ಕಕ್ಕಿಲ್ಲಾಯ. ಅಂದು ನೆಹರೂ ಅವರಿಗೆ ಹೆದರಿ ಕಾಂಗ್ರೆಸ್ ಸದಸ್ಯರು ಏಕೀಕರಣ ವಿಷಯ ಪ್ರಸ್ತಾಪಿಸಲು ಹಿಂಜರಿಯುತ್ತಿದ್ದರು. ಕೇವಲ ರಾಜ್ಯಸಭೆಯಲ್ಲಿ ಮಾತನಾಡಿದ್ದು ಮಾತ್ರವಲ್ಲ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿ ರಾಜ್ಯವೆಲ್ಲ ಸುತ್ತಿ ಪ್ರತಿಭಟನೆ ನಡೆಸಿದ್ದರು. 1972 ಹಾಗೂ 1978 ರಲ್ಲಿ ಎರಡು ಬಾರಿ ಕರ್ನಾಟಕ ವಿಧಾನಸಭಾ ಸದಸ್ಯರಾಗಿ ಒಬ್ಬ ಜನರ ಪರವಾದ ಶಾಸಕ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದ್ದಾರೆ. ಕರ್ನಾಟಕದ ಭೂಸುಧಾರಣಾ ಶಾಸನ ರೂಪಿಸಲು ಅವರು ಶಾಸನಸಭೆಯಲ್ಲಿ ನಡೆಸಿದ ಹೋರಾಟಗಳ ದಾಖಲೆಗಳು ನಮ್ಮ ವಿಧಾನಸಭೆಯ ಕಲಾಪಗಳಲ್ಲಿ ಇಂದಿಗೂ ಇವೆ. ಮಂಗಳೂರಿನಲ್ಲಿ ಮೊದಲು ಬೀಡಿ, ಹೆಂಚು, ಗೇರುಬೀಜ ಕ್ಷೇತ್ರಗಳಲ್ಲಿ ಕಾರ್ಮಿಕ ಸಂಘಟನೆ ಮಾಡಿ ನಂತರ ರೈತ ಚಳವಳಿಯನ್ನು ಕಟ್ಟಿ ಬೆಳೆಸಿ ಗೇಣಿದಾರರ ಪರ ಹೋರಾಡಿದರು. ಗೋವಾ ವಿಮೋಚನಾ ಚಳವಳಿಯಲ್ಲಿ ತೊಡಗಲು ಕಾಂಗ್ರೆಸ್ ಪಕ್ಷ ನಿರಾಕರಿಸಿದಾಗ ಕಮ್ಯುನಿಸ್ಟ್ ಪಕ್ಷ ಹೋರಾಟಕ್ಕೆ ಕರೆ ನೀಡಿತು. ಆಗ ಮಂಗಳೂರಿನಿಂದ ಒಂದು ತಂಡ ರೂಪಿಸಿಕೊಂಡು ಅದರ ನಾಯಕರಾಗಿ ಕಕ್ಕಿಲ್ಲಾಯ ಅವರು ಗೋವಾಗಡಿಗೆ ಹೋದರು. 1955 ಆಗಸ್ಟ್ 15 ರಂದು ಗೋವಾ ಗಡಿ ಪ್ರವೇಶಿಸಿದರು. ಆಗಸ್ಟ್ 1 ರಂದು ಅಲ್ಲಿಗೆ ಹೋಗಿದ್ದ ಇನ್ನೊಂದು ತಂಡದ ಮೇಲೆ ಗೋಲಿಬಾರ್ ನಡೆದು ಸಾವುಗಳಾಗಿದ್ದವು. ಅದು ಗೊತ್ತಿದ್ದೂ ಪಕ್ಷದ ಆದೇಶದಂತೆ ಕಕ್ಕಿಲ್ಲಾಯರು ತಮ್ಮ ತಂಡದೊಂದಿಗೆ ಹೋದರು. ಹೀಗೆ ತಮ್ಮ ಜೀವಕ್ಕಿಂತ ಪಕ್ಷದ ಆದೇಶ ಮತ್ತು ಜನರ ಸ್ವಾತಂತ್ರ್ಯ ಮುಖ್ಯವೆಂದು ಭಾವಿಸಿದವರು.



ಗೋವಾ ವಿಮೋಚನಾ ಸತ್ಯಾಗ್ರಹಿಗಳು
(ಮುಂದುಗಡೆ ಎರಡನೇ ಸಾಲಿನಲ್ಲಿ ಎಡಗಡೆಯಿಂದ 4ನೆಯವರು ಬಿ.ವಿ.ಕೆ.) (1955)

ನವಲಗುಂದ, ನರಗುಂದ ರೈತರ ಜಾಥಾ ಸಂದರ್ಭದಲ್ಲಿ ಕಕ್ಕಿಲ್ಲಾಯರದು ಮಹತ್ವದ ಪಾತ್ರ. ರಾಜ್ಯದ ರಾಜಕಾರಣದಲ್ಲಿ ಬದಲಾವಣೆಗೆ ಕಾರಣವಾದ ಆ ರೈತ ಹೋರಾಟಕ್ಕೆ ಒಂದು ತಾತ್ವಿಕ ರೂಪ ಕೊಡಲು ಶ್ರಮಿಸಿದರು. ಆದರೆ ಅಂದು ರೈತ ಹೋರಾಟದಿಂದ ದೂರವಿದ್ದವರು ನಂತರದ ದಿನಗಳಲ್ಲಿ ರಾಜಕೀಯ ಲಾಭ ಪಡೆದರು. ಅವಕಾಶಗಳಿಲ್ಲದಾಗ ಪ್ರಾಮಾಣಿಕತೆ, ಬದ್ಧತೆಗಳ ಬಗ್ಗೆ ಮಾತನಾಡುವ ಬಹಳಷ್ಟು ಜನ ಅವಕಾಶ, ಅಧಿಕಾರ ದೊರೆತಾಗ ತದ್ವಿರುದ್ಧವಾಗಿ ಬದುಕುತ್ತಾರೆ. ಆದರೆ ಒಂದು ಬಾರಿ ಪಾರ್ಲಿಮೆಂಟ್ (ರಾಜ್ಯಸಭಾ) ಸದಸ್ಯರಾಗಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿದ್ದ ಕಕ್ಕಿಲ್ಲಾಯರು ಎಂದೂ ತಮ್ಮ ತತ್ವ, ಸಿದ್ಧಾಂತ, ಕಮ್ಯುನಿಸ್ಟ್ ಪಕ್ಷದ ನಿರ್ದೇಶನವನ್ನು ಬಿಟ್ಟು ನಡೆಯಲಿಲ್ಲ. ಇಂದಿನ ಪರಿಸ್ಥಿತಿಯ ಬಗ್ಗೆ ಸಂದರ್ಶನವೊಂದರಲ್ಲಿ "ಇಂದು ಜನರಿಗೆ ಸ್ವಾತಂತ್ರ್ಯ ಎಂದರೆ ಲೂಟಿ ಮಾಡಲು ಸ್ವಾತಂತ್ರ್ಯ ಅಷ್ಟೆ. ಯಾವುದೇ ಸರ್ಕಾರ ತನ್ನ ಆರ್ಥಿಕ ಸಾಧನೆ ಬಗ್ಗೆ ಮಾತನಾಡುತ್ತದೆ. ರೈತರ, ಕಾರ್ಮಿಕರ ಬಗ್ಗೆ ಮಾತನಾಡುವುದಿಲ್ಲ. ಜೀವನದ ರೀತಿ ಕೆಟ್ಟಿದೆ. ದೂರದರ್ಶನ ಚಾನೆಲ್‌ಗಳು ನಮ್ಮ ಬದುಕಿನ ಶೈಲಿಯ ಮೇಲೆ ದಾಳಿ ನಡೆಸುತ್ತಿವೆ. ಗ್ರಾಹಕ ಸಂಸ್ಕೃತಿ ನಮ್ಮನ್ನು ಕಬಳಿಸುತ್ತಿದೆ. 80 ರ ದಶಕದಲ್ಲಿ ಆರಂಭವಾದ ಅಧಿಕಾರದಾಹ, ಭ್ರಷ್ಟಾಚಾರ, ರಾಜಕಾರಣದಲ್ಲಿ ಅಪರಾಧೀಕರಣ ಇಂದು ಹೆಮ್ಮರವಾಗಿ ಬೆಳೆದಿದೆ. ಕೋಮುವಾದ ತನ್ನ ಕರಾಳ ರೂಪವನ್ನು ತೋರಿಸುತ್ತಿದೆ. ಆದರೂ ನಾನು ನಿರಾಶಾವಾದಿಯಲ್ಲ, ನಮ್ಮ ಮುಂದಿನ ಪೀಳಿಗೆ ಈ ಅನಿಷ್ಟಗಳ ವಿರುದ್ಧ ಹೋರಾಡುತ್ತಾರೆ ಮತ್ತು ಗೆಲ್ಲುತ್ತಾರೆ" ಎಂದು ಹೇಳಿದ್ದರು.

ಕಕ್ಕಿಲ್ಲಾಯರು ಒಬ್ಬ ಪ್ರಬುದ್ಧ ರಾಜಕಾರಣಿ ಹೋರಾಟಗಾರ ಮಾತ್ರವಲ್ಲ, ನಿರಂತರ ಓದು ಮತ್ತು ಬರಹದಲ್ಲೂ ತೊಡಗಿಸಿಕೊಂಡವರು. ಕಾರ್ಲ್‌ಮಾರ್ಕ್ಸ್, ಫೆಡ್ರಿಕ್ ಎಂಗೆಲ್ಸ್‌ರ ಜೀವನಚರಿತ್ರೆಗಳು, ಕಮ್ಯೂನಿಸಂ, ದ್ವಂದ್ವಮಾನ ಚಾರಿತ್ರಿಕ, ಭೌತವಾದಿ, ಭಾರತಕ್ಕೊಂದು ಬದಲು ದಾರಿ ಹೀಗೆ ಹಲವಾರು ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ತತ್ವಶಾಸ್ತ್ರಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಅನುವಾದಿಸಿದ್ದಾರೆ. ಅವರ ಕೃತಿಗಳು ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾಗಿವೆ. ಭಾರತ ಕಮ್ಯುನಿಸ್ಟ್ ಪಕ್ಷದ ರಾಜ್ಯ ಮುಖ ಪತ್ರ ಕೆಂಬಾವುಟ ಪತ್ರಿಕೆ ಸಂಪಾದಕರಾಗಿ ಕೊನೆಯವರೆಗೂ ದುಡಿದಿದ್ದಾರೆ. ನವ ಕರ್ನಾಟಕ ಪ್ರಕಾಶನ ಸಂಸ್ಥೆಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಇಂಥ ಬಹುಮುಖ ವ್ಯಕ್ತಿತ್ವದ ಕಕ್ಕಿಲ್ಲಾಯ ಖಾಸಗಿ ಬದುಕಿನ ಬಗ್ಗೆ ಎಂದೂ ಚಿಂತಿಸಿದವರಲ್ಲ, 1940 ರಿಂದಲೇ ಆರಂಭವಾದ ಅವರ ಹೋರಾಟದಲ್ಲಿ ಜೈಲುವಾಸಗಳಿಗೆ ಲೆಕ್ಕವಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸ ಅನುಭವಿಸಿದ್ದಲ್ಲದೆ ಸ್ವಾತಂತ್ರ್ಯಾನಂತರವೂ ಹೋರಾಟದಲ್ಲಿ ತೊಡಗಿ ಜೈಲುವಾಸ ಅನುಭವಿಸಿದ್ದರು. ಮಂಗಳೂರು, ಬೆಂಗಳೂರು, ದಾವಣಗೆರೆ ರಾಣೆಬೆನ್ನೂರು, ಬೆಳಗಾವಿ ಹೀಗೆ ಎಲ್ಲ ಜೈಲುಗಳಲ್ಲೂ ಇದ್ದು ಪ್ರಭುತ್ವದ ದಾಳಿಗೆ ಬಲಿಯಾಗಿದ್ದಾರೆ. ಇಂಥ ಸಂದರ್ಭದಲ್ಲಿ ಮದುವೆಯೂ ಆಗದೆ ಇದ್ದವರು ತಡವಾಗಿ 1964 ರಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಅಹಲ್ಯಾ ಅವರನ್ನು ಮದುವೆಯಾದರು. ಅವರಿಗೆ ನಾಲ್ಕು ಮಕ್ಕಳಾದರೂ ಅವರನ್ನು ಬೆಳೆಸುವ ಓದಿಸುವ ಭಾರ ಅವರ ಮಡದಿಯ ಮೇಲೆಯೇ ಇತ್ತು, ಮಕ್ಕಳನ್ನೂ ಚಳವಳಿಯ, ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳನ್ನಾಗಿಯೇ ಬೆಳೆಸಿದರು. ನಾಲ್ಕೂ ಮಕ್ಕಳೂ ವೈದ್ಯರಾಗಿದ್ದಾರೆ. ಅವರ ಹಿರಿಯ ಮಗ ಡಾ. ಶ್ರೀನಿವಾಸ್ ಕಕ್ಕಿಲ್ಲಾಯ ಮಂಗಳೂರಿನ ಪ್ರಸಿದ್ಧ ವೈದ್ಯರಾದರೂ ಸಾಮಾಜಿಕ, ವೈಚಾರಿಕ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಉಳಿದ ಮಕ್ಕಳು ವಿದೇಶದಲ್ಲಿದ್ದಾರೆ.

ನಾನು ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿ 33 ವರ್ಷಗಳಾದವು. ಅಂದಿನಿಂದ ಇಂದಿನವರೆಗೆ ಕಕ್ಕಿಲ್ಲಾಯ ಅವರ ಬದುಕು ಹಾಗೂ ಹೋರಾಟಗಳನ್ನು ಹತ್ತಿರದಿಂದ ಕಂಡಿದ್ದೇನೆ. ಕಕ್ಕಿಲ್ಲಾಯರು ದೊಡ್ಡ ಜಮೀನ್ದಾರಿ ಕುಟುಂಬದಿಂದ ಬಂದವರು. ಮೇಲ್ವರ್ಗ, ಮೇಲ್ಜಾತಿಯಿಂದ ಬಂದು ಕೆಳವರ್ಗ, ಶೋಷಿತ ಜಾತಿಗಳ ಪರವಾಗಿ ಹೋರಾಡುವಾಗ ಪ್ರಜ್ಞಾಪೂರ್ವಕವಾಗಿ ಕೆಳವರ್ಗೀಕರಣಗೊಳ್ಳಬೇಕಾಗುತ್ತದೆ. ಜೀವನಶೈಲಿ, ಮಾತು, ವರ್ತನೆ, ಸಂಸ್ಕೃತಿ ಪ್ರತಿಯೊಂದು ವಿಷಯದಲ್ಲಿ ಮೂಲ ಮೇಲ್ವರ್ಗದ ಗುಣ ನುಸುಳದಂತೆ ಎಚ್ಚರ ವಹಿಸಬೇಕಾಗುತ್ತದೆ ಅಂಥ ವ್ಯಕ್ತಿತ್ವವನ್ನು ಕಕ್ಕಿಲ್ಲಾಯ ಹೊಂದಿದ್ದರು. ಆದಕ್ಕಾಗಿಂಯೇ ಅವರು ಒಂದು ಮಾದರಿ ವ್ಯಕ್ತಿಯಾಗಿ ನಮ್ಮ ನಡುವೆ ಬಾಳಿಹೋಗಿದ್ದಾರೆ. ಅವರ ಆದರ್ಶ ಮತ್ತು ಸಮಾಜ ನಿರ್ಮಾಣದ ಗುರಿಯನ್ನು ಮುಂದಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

-ಡಾ.ಸಿದ್ಧನಗೌಡ ಪಾಟೀಲ

▸2 'ಗೋಲ್‌ಮಾಲ್' ಇನ್ವೆಸ್ಟರ್ ಮೀಟ್...

ಆಧರಿಸಿರುವ ರೈತಾಪಿಗೆ ಸಲ್ಲಬೇಕಾಗಿದ್ದ ನೀರಿನ ಪ್ರಮಾಣವನ್ನು ಕಡಿತಗೊಳಿಸಿ ಬಳ್ಳಾರಿ ಸ್ಟೀಲ್ ಉದ್ಯಮಕ್ಕೆ ಬೇಕಾದ 10ಟಿಎಂಸಿಗಿಂತಲೂ ಹೆಚ್ಚಿನ ನೀರನ್ನು ತುಂಗಭದ್ರಾ ಡ್ಯಾಂನಿಂದ ಕೊಡಲು ತತ್ವಶಃ ಒಪ್ಪಿಗೆ ಕೊಟ್ಟಿದೆ. ಹಾಗೆಯೇ ದಿನನಿತ್ಯ ಹೊಟ್ಟೆ ತುಂಬಿಸಿಕೊಳ್ಳಲು ಒದ್ದಾಡುತ್ತಿರುವ ನಾಡಿನ ಜನರ ಮೇಲೆ ಸೆಸ್ ಮತ್ತು ಇನ್ನಿತರ ತೆರಿಗೆ ಹಾಕಿ ಈ ಉದ್ಯಮಗಳಿಗೆ ಬೇಕಾದ ಮೂಲಭೂತ ಸೌಕರ್ಯವನ್ನು ಒದಗಿಸಿಕೊಡಲು ಸಿದ್ಧವೆಂದು ಘೋಷಿಸಿದೆ.

ಉದ್ಯಮವಲ್ಲ-ರಿಯಲ್ ಎಸ್ಟೇಟ್ ದಂಧೆ

ಕಂಪನಿಗಳು ಮತ್ತೊಂದು ಬಗೆಯಲ್ಲಿ ಲಾಭ ಮಾಡಿಕೊಳ್ಳಲು ಉದ್ಯಮದ ಹೆಸರಲ್ಲಿ, ಟೂರಿಸಮ್ ಹೆಸರಲ್ಲಿ ರಿಯಲ್ ಎಸ್ಟೇಟ್ ಉದ್ಯಮ ನಡೆಸಲು ಅವುಗಳ ಅಗತ್ಯಕ್ಕಿಂತ ಹೆಚ್ಚಾಗಿ ಸಾವಿರಾರು ಎಕರೆ ಜಮೀನನ್ನು ಮುಫತ್ತಾಗಿ ನೀಡುತ್ತಿದೆ. ಉದಾಹರಣೆಗೆ ಆಗಲೇ ಚರ್ಚಿಸಿದಂತೆ 60 ಲಕ್ಷ ಟನ್ ಸ್ಟೀಲ್ ಉದ್ಯಮಕ್ಕೆ 1500 ಎಕರೆ ಸಾಕಾಗಿದ್ದರೂ 5-6000 ಎಕರೆ ಜಮೀನನ್ನು ಕೊಡಲಾಗುತ್ತಿದೆ. ಬೆಂಗಳೂರು ಸುತ್ತ ಮುತ್ತಲೂ ಸಾಫ್ಟ್‌ವೇರ್ ಕಂಪನಿಗಳಿಗೆ 10 ಎಕರೆ ಸಾಕಾಗಿದ್ದರೂ 30-100 ಎಕರೆ ಜಮೀನನ್ನು ನೀಡಲಾಗುತ್ತಿದೆ. ಹೀಗೆ ಈ ಜಿಮ್ ಸಮಾವೇಶವು ಜಮೀನನ್ನು ಗೋಲ್‌ಮಾಲ್ ಮಾಡುವ ಗೋಲ್‌ಮಾಲ್ ಸಮಾವೇಶವಾಗಿಯೂ ಪರಿವರ್ತನೆಯಾಗುತ್ತಿದೆ. ಅದಕ್ಕೆಂದೇ ರೈತರ ಫಲವತ್ತಾದ 77,000 ಎಕರೆ ಜಮೀನನ್ನು ಸರ್ಕಾರ ಲ್ಯಾಂಡ್‌ಬ್ಯಾಂಕ್‌ನಲ್ಲಿ ಒತ್ತೆ ಇರಿಸಿಕೊಂಡಿದೆ. ನೆಲದ ಮೋಹವನ್ನು ತೋರಿಸಿ, ಲಾಭದ ಖಾತರಿ ಮೂಡಿಸಿ ಬಂಡವಾಳ ಆಕರ್ಷಿಸುತ್ತಿರುವ ದಲ್ಲಾಳಿ ಬಿಜೆಪಿ ಸರ್ಕಾರ ಅಕ್ಷರಶಃ ನಾಡನ್ನು ಹರಾಜು ಮಾಡುತ್ತಿದೆ.

ಉದ್ಯೋಗ ಸೃಷ್ಟಿಯೆಂಬ ಹಸಿಸುಳ್ಳು

ಇವೆಲ್ಲವನ್ನು ಸರ್ಕಾರ ಲಕ್ಷಾಂತರ ಉದ್ಯೋಗ ಸೃಷ್ಟಿ ಮಾಡುತ್ತದೆಯೆಂಬ ಹೆಸರಲ್ಲಿ ದಕ್ಕಿಸಿಕೊಳ್ಳಲು ನೋಡುತ್ತಿದೆ. ಇದೊಂದು ಹಸಿಸುಳ್ಳು. ಇಂದು ಕೋಟಿ ಕೋಟಿ ಬಂಡವಾಳಗಳು ಬಂದರೂ ಅವು ಲಕ್ಷ ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿಲ್ಲ, ಉದಾಹರಣೆಗೆ ಇಂದು ಸ್ಟೀಲ್ ಉದ್ಯಮ ತಂತ್ರಜ್ಞಾನ ಸಾಂದ್ರಿತವಾಗಿದ್ದು 60 ಲಕ್ಷ ಟನ್ ಸಾಮರ್ಥ್ಯದ, 30,000 ಕೋಟಿ ಹೂಡಿಕೆಯ ಉದ್ಯಮ ಸೃಷ್ಟಿಸುವುದು ಕೇವಲ 7,500 ಉದ್ಯೋಗಗಳನ್ನು, ಅಂದರೆ ಹೆಚ್ಚೂ ಕಡಿಮೆ 4 ಕೋಟಿ ಹೂಡಿಕೆಯೂ ಒಬ್ಬರಿಗೆ ಉದ್ಯೋಗವನ್ನು ಸೃಷ್ಟಿಸುವುದಿಲ್ಲ, ಹಾಗೆಯೇ ಜುವಾರಿ ಫರ್ಟಿಲೈಸರ್ಸ್ ಬೆಳಗಾಂನಲ್ಲಿ 4,565 ಕೋಟಿ ಹೂಡಿಕೆ ಮಾಡಿದರೂ ಅದು ಸೃಷ್ಟಿಸುವುದು 1560 ಉದ್ಯೋಗಗಳನ್ನು ಮಾತ್ರ. ಅಂದರೆ 3 ಕೋಟಿ ಹೂಡಿಕೆಗೆ ಒಬ್ಬರಿಗೆ ಉದ್ಯೋಗ. ಗುಲ್ಬರ್ಗಾದಲ್ಲಿ ಹೂಡಿಕೆ ಭರವಸೆ ನೀಡಿದ್ದ ಈಗ ಜೈಲಿನಲ್ಲಿರುವ ಜಗನ್ ಕಂಪನಿ 'ಇಂಡಿಯಾ ಸಿಮೆಂಟ್ಸ್' 870 ಕೋಟಿ ಹೂಡಿಕೆಗೆ ಸೃಷ್ಟಿಸುತ್ತಿದ್ದುದ್ದು ಕೇವಲ 175 ಉದ್ಯೋಗಗಳನ್ನು, ಅಂದರೆ 5 ಕೋಟಿಗೆ ಒಂದು ಉದ್ಯೋಗ.


ಹೀಗೆ ಭರವಸೆ ನೀಡಿದ್ದ ಹೂಡಿಕೆಗಳಲ್ಲಿ ಶೇ.10ರಷ್ಟೂ ಹೂಡಿಕೆಯಾಗುವುದಿಲ್ಲ, ಹೂಡಿಕೆಯಾದರೂ ಅದಕ್ಕೆ ಮೂರುಪಟ್ಟು ಹೆಚ್ಚಿನ ರಿಯಾಯಿತಿ ಮತ್ತು ನಾಡಿನ ಸಂಪತ್ತನ್ನು ಕಬಳಿಸಿರುತ್ತವೆ, ಅಷ್ಟೂ ಬಂಡವಾಳ ಹೂಡಿಕೆಯಾದರೂ ಅವು ಕೊಚ್ಚಿಕೊಳ್ಳುವಷ್ಟು ಸಂಖ್ಯೆಯಲ್ಲಿ ಶೇ.25ರಷ್ಟು ಉದ್ಯೋಗ ಸೃಷ್ಟಿಯಾಗುವುದಿಲ್ಲ.

ಇಂತಹ ಉದ್ಯಮಗಳಿಗೆ ಇಂದು ವಶಪಡಿಸಿಕೊಳ್ಳಲಾಗುತ್ತಿರುವ ರೈತಾಪಿಯ 1,05,000 ಎಕರೆ ಜಮೀನಿನಲ್ಲಿ ಶೇ.90 ಭಾಗ ಉಳುಮೆ ಮಾಡುತ್ತಿರುವ ಭೂಮಿಯಾಗಿದೆ. ಆ ಭೂಮಿಯ ಮೇಲೆ ಎಕರೆಗೆ 5 ಜನರೆಂದರೂ 5 ಲಕ್ಷ ಜನ ನೇರವಾಗಿ ಮತ್ತು 20 ಲಕ್ಷಕ್ಕೂ ಹೆಚ್ಚು ಜನ ಪರೋಕ್ಷವಾಗಿ ಅವಲಂಬಿತರಾಗಿದ್ದಾರೆ. 20 ಲಕ್ಷ ಜನರ ಜೀವನೋಪಾಯ ಕಸಿದುಕೊಂಡು ಕೇವಲ 20,000-70,000 ಉದ್ಯೋಗ ಸೃಷ್ಟಿ ಮಾಡುವುದು, ಅದೂ ನಾಡಿನ ಒಟ್ಟಾರೆ ಆರ್ಥಿಕ ಪ್ರಗತಿಯ ದೂರಗಾಮಿ ದೃಷ್ಟಿಯಿಂದಲೂ ಅನಾಹುತಕಾರಿಯಾಗಿರುವ ಯೋಜನೆಗಳನ್ನು ಸ್ಥಾಪಿಸುವುದು ದೇಶದ್ರೋಹ. ಜನದ್ರೋಹ.

ಹೀಗಾಗಿ ನಾಡಿನ ಜನತೆ ಈ 'ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನ'ವನ್ನು ಒಕ್ಕೊರಲಿನಿಂದ ವಿರೋಧಿಸಲೇಬೇಕು.

ಮಾಯಕೊಂಡದ ಶಾಸಕನಿಗೆ ಪರಪ್ಪನ ಅಗ್ರಹಾರ ಗ್ಯಾರಂಟಿ!

ದಾವಣಗೆರೆ ಜಿಲ್ಲೆಯ ಮಾಯಕೊಂಡ ವಿಧಾನಸಭಾ ...ತ್ರ ಆದೇನು ದುರಾದೃಷ್ಟ ಮಾಡಿತ್ತೋ ಗೊತ್ತಿಲ್ಲ, ಆದರ ...ಲವಾಗಿ ಮೂರುಬಾರಿ ರವೀಂದ್ರನಾಥನನ್ನು ಗೆಲ್ಲಿಸಿ ವಿಧಾನ ...ಭೆಗೆ ಕಳುಹಿಸಿತು. ಆದರೆ ಜನರ ಬೆಂಬಲದಿಂದ ಮೂರು ...ರಿ ಗೆದ್ದ ರವೀಂದ್ರನಾಥ ತನಗೆ ಒಲಿದು ಬಂದ ...ಂತ್ರಿಗಿರಿಯ ಮೇಲೆ ಸವಾರಿ ಮಾಡಿ ಧನ್ಯನಾದದ್ದು ...ಟ್ಟರೆ ಜನರಿಗಾಗಿ ಕಡಿದು ಕಟ್ಟೆಹಾಕಿದ್ದು ...ಷ್ಟರಲ್ಲೇ ಇದೆ.


ಎಂ. ಬಸವರಾಜನಾಯ.

ರವೀಂದ್ರನಾಥ ಸತತವಾಗಿ ಗೆದ್ದಿದ್ದಕ್ಕೆ ...ರಣ ಆತನಿಗೆ ಸ್ವಜಾತಿ ಸಾಧು ಲಿಂಗಾಯ...ರ ಬೆಂಬಲ ಇದ್ದದ್ದು. ಇಲ್ಲಿ ಒಂದು ...ಕಟದ ಮಾತನ್ನು ಹೇಳಬೇಕಿದೆ. ...ತ್ತೀಚೆಗೆ ತೀರಿಕೊಂಡ ಕೆ.ಜಿ.ಮಹೇಶ್ವರಪ್ಪ ...ವರು ಸಮಾಜವಾದಿ ಸಿದ್ಧಾಂತವನ್ನೇ ...ಮ್ಮ ಬದುಕಿನ ಉಸಿರಾಗಿಸಿಕೊಂಡಿದ್ದರು. ...ವರನ್ನು ಇಲ್ಲಿನ ಸಾಧು ಲಿಂಗಾಯತರು ...983ರಲ್ಲಿ ಒಮ್ಮೆ ಗೆಲ್ಲಿಸಿದ್ದನ್ನು ಬಿಟ್ಟರೆ ...ತ್ತೆ ಅವರತ್ತ ವಾರೆಗಣ್ಣನ್ನೂ ಬೀರಲಿಲ್ಲ. ...ದು ಮಹೇಶ್ವರಪ್ಪನವರ ದುರಂತವಲ್ಲ, ...ದಲಾಗಿ ಈ ಕ್ಷೇತ್ರದ ದುರಂತ ಎಂದೇ ಹೇಳಬಹುದು. ...ಮ್ಮ ನಡುವಿನ ಸಾಚಾ, ಸರಳ ಮತ್ತು ಮುತ್ಸದ್ದಿ ...ನುಷ್ಯನನ್ನು ಇಲ್ಲಿನ ಜನ ತಿರಸ್ಕರಿಸಿದ್ದರು ಎಂದರೆ ಅದು ... ಕ್ಷೇತ್ರದ ದುರಂತವಲ್ಲದೆ ಮತ್ತಿನೇನು.

ಮಹೇಶ್ವರಪ್ಪನಂತಹ ಜಾತ್ಯತೀತ ರಾಜಕಾರಣಿಯನ್ನು ...ನೆಗಟ್ಟಿದ ಮಾಯಕೊಂಡದ ಮತದಾರರು ರವೀಂದ್ರನಾಥ...ಂತಹ ಸಮಯುಸಾಧಕನನ್ನು, ಜಾತಿವಾದಿಯನ್ನು, ...ೋಮುವಾದಿಯನ್ನು ಆದ್ಯಾವ ಕಾರಣಕ್ಕೆ ಬೆಂಬಲಿಸಿದರೋ ... ಭಗವಂತನೇ ಬಲ್ಲ.

2008ರ ಚುನಾವಣೆ ರವೀಂದ್ರನಾಥನನ್ನು ಮಾಯ ಕೊಂಡ ...ಧಾನಸಭಾ ಕ್ಷೇತ್ರದಿಂದ ದಾವಣಗೆರೆ ಉತ್ತರ ವಿಧಾನಸಭೆಗೆ ...ೂಕಿದ್ದಕ್ಕೆ ಕಾರಣ ಮಾಯಾಕೊಂಡ ಪರಿಶಿಷ್ಟ ಜಾತಿಗೆ ...ೀಸಲಾಗಿದ್ದು. ಈ ಕ್ಷೇತ್ರ ಮೀಸಲಾಗಿದ್ದೇ ತಡ ...ವೀಂದ್ರನಾಥನಿಗಿಂತ ಪರಮ ಪಕ್ಷಪಾತಿ ಮತ್ತು ಅಷ್ಟೇ ನೆತ್ತಿಮಾಸದ ...ಜಕಾರಣಿ ಬಸವರಾಜನಾಯ್ಕ ಎಂಬ ಬಫೂನ್ ಉದ್ಭವಿಸಿದ. ...ೋದೆಯಾ ಪಿಶಾಚಿ ಎಂದರೆ ಬಂದೆಯಾ ಗವಾಕ್ಷೀಲಿ ...ಂಬಂತಾಯಿತು ಈ ಕ್ಷೇತ್ರದ ಸ್ಥಿತಿ.

ಹಾಗೆ ನೋಡಿದರೆ, 2008 ರ ಚುನಾವಣೆಯೇ ...ಂದರ್ಭದಲ್ಲಿ ಇಡೀ ರಾಜ್ಯಕ್ಕೆ ಶನಿಕಾಟವನ್ನು ತಂದಿಟ್ಟಿತು. ...ಜಧಾನಿಯಲ್ಲಿ ಬಿಜೆಪಿಯಂತಹ ಪರಮ ಭ್ರಷ್ಟ ಸರ್ಕಾರ...ನ್ನು ಅಸ್ತಿತ್ವಕ್ಕೆ ತಂದ ಆ ಚುನಾವಣೆ ಮಾಯಾಕೊಂಡಕ್ಕೆ ...ಸವರಾಜನಾಯ್ಕನಂತಹ ಧನದಾಹಿಯನ್ನು ಶಾಸಕನ...ನ್ನಾಗಿಸಿತು.

ಈ ಬಸವರಾಜನಾಯ್ಕ 2008ರ ಚುನಾವಣೆಯ ...ರೆಗೂ ಕಾಂಗ್ರೆಸಿನಲ್ಲಿದ್ದವನು. ಅಲ್ಲಿದ್ದುಕೊಂಡೇ ಗ್ರಾಮ ...ಂಚಾಯತಿ, ತಾಲ್ಲೂಕು ಪಂಚಾಯತಿಯಲ್ಲಿ ಅಧ್ಯಕ್ಷನಾಗಿ ...ಂಚಾಯತಿಯನ್ನು ಸಮಾಸಮ ಮುಂಡಾಯಿಸಿ ಕಾಸು ...ಾಡಿಕೊಂಡವನು. ಆದರೆ ಯಾವಾಗ ಮಾಯಕೊಂಡ ...ತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿ ಪರಿವರ್ತನೆಗೊಂಡಿತೋ ...ಗಲೇ ಇವನ ಕನಸಿಗೆ ರೆಕ್ಕೆಪುಕ್ಕ ಬಂದದ್ದು. ಕಾಂಗ್ರೆಸಿನಿಂದ ...ವನಿಗೆ ಟಿಕೇಟು ಸಿಗುವುದು ಅಸಾಧ್ಯ ಎಂದಾದಾಗ ...ಜೆಪಿಗೆ ಹಾರಿದ ಬಸವರಾಜನಾಯ್ಕ ರವೀಂದ್ರನಾಥನೆದುರು ...ತ್ಯಕ್ಷನಾದ. ಬಸವರಾಜನಾಯ್ಕ ತನ್ನ ತಾಳಕ್ಕೆ ಕುಣಿಯು...ವನು ಎಂದು ರವೀಂದ್ರನಾಥನಿಗೆ ಅನಿಸಿದ್ದರಿಂದ ಈತನಿಗೆ ...ಜೆಪಿ ಟಿಕೇಟು ಕೊಡಿಸಿಬಿಟ್ಟ. ಆದರೆ ಚುನಾವಣೆಯ ...ಂತರ ಇದೇ ಬಸವರಾಜನಾಯ್ಕ ತನ್ನನ್ನು ಧಡ ಸೇರಿಸಿದ ...ಂಬಿಗನಿಗೇ ಮಿಂಡನಾದದ್ದು ಬೇರೆ ಕಥೆ.


ಮಾಯಕೊಂಡ ವಿಧಾನಸಭಾ ಕ್ಷೇತ್ರದಲ್ಲಿ ಸಾದು ಲಿಂಗಾಯತರು, ನಾಯಕರು ಮತ್ತು ಕುರುಬರದ್ದೇ ನಿರ್ಣಾಯಕ ಮತಗಳು. ಹಾಗೆ ನೋಡಿದರೆ ಯಡಿಯೂರಪ್ಪ ಎಂಬ ಲಿಂಗಾಯತ ಮುಖ್ಯಮಂತ್ರಿ ಆಗುತ್ತಾರೆಂಬ ಕಾರಣಕ್ಕೆ ಅಲ್ಲಿಯ ಸಾದು ಲಿಂಗಾಯತರು ಬಸವರಾಜನಾಯ್ಕನನ್ನು ಬೆಂಬಲಿಸಿದರು. ಜೊತೆಗೆ ಬಸವರಾಜನಾಯ್ಕನ ಬಣಜಾರ ಸಮುದಾಯದವರೂ "ವಿಧಾನ ಸಭೆಯಲ್ಲಿ ನಮ್ಮವನೊಬ್ಬನಿರಲಿ" ಎಂದು ಈತನ ಹಿಂದೆ ಒಗ್ಗಟ್ಟು ಪ್ರದರ್ಶಿದರು.

ಕಾಂಗ್ರೆಸ್ ಪಕ್ಷದ ದುರಂತ ಎಂತಹದ್ದೆಂದರೆ ಇದೇ ಮಾಯಕೊಂಡ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸಿನಿಂದ ಗೆದ್ದು ಐದು ವರ್ಷ ದುರಹಂಕಾರದ ಆಡಳಿತವನ್ನು ಮೆರೆದಿದ್ದ ವೈ.ರಾಮಪ್ಪ ಎಂಬಾತ ಈ ಬಸವರಾಜ ನಾಯ್ಕನ ವಿರುದ್ಧ ಸ್ಪರ್ಧಿಸಿದ್ದ. ಸಾಮಾನ್ಯವಾಗಿ ದಲಿತರು ಕಾಂಗ್ರೆಸ್ಸಿನ ಇಡಿ ಗಂಟಾಗಿದ್ದರೂ ರಾಮಪ್ಪನ ಕೈಗೆ ಮಣ್ಣು ನೀಡಿದರು. ಜೊತೆಗೆ ರಾಮಪ್ಪನನ್ನು ಸೋಲಿಸಿಯೇ ತೀರಬೇಕೆಂದು ದಾವಣಗೆರೆ ಜಿಲ್ಲೆಯ ಅಧಿಕಾರಶಾಹಿ ವರ್ಗ ಮಾಯಕೊಂಡದಲ್ಲಿ ಕೆಲಸ ಮಾಡಿತ್ತೆಂದರೆ ಈ ರಾಮಪ್ಪನ ವರ್ತನೆ ಅದೆಂತಹ ದುರಹಾಂಕಾರದ ಪರಮಾವಧಿಯದಾಗಿತ್ತು ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ದಾವಣಗೆರೆಯ ಕುಂಡೆ ಬದಿಯ ಆಲೂರು ಹಟ್ಟಿಯ ಮಾನಾನಾಯ್ಕನಿಗೆ ಎರಡು ಗಂಡು, ನಾಲ್ಕು ಹೆಣ್ಣು ಮಕ್ಕಳು. ಆತನಿಗೆ ಇದ್ದದ್ದು ಮೂರು ಚಿಲ್ಲರೆ ಎಕರೆ ಜಮೀನಷ್ಟೇ. ಮನೆಯಲ್ಲಿ ಕಾಲು ಮುರಿದುಕೊಂಡು ಮಲಗಿದ್ದ ಕಡು ಬಡತನದ ಕುಟುಂಬ ಮಾನಾನಾಯ್ಕನದ್ದು. ಅವರ ಹೆಂಡತಿ ಕಲ್ಲು ಹೊಡೆದು ಮಕ್ಕಳಿಗೆ ಊಟ ಇಕ್ಕುತ್ತಿದ್ದರು. ಆ ದಂಪತಿಗಳ ಗಂಡು ಮಕ್ಕಳಲ್ಲಿ ದೊಡ್ಡ ಮಗ ಓದಿ ಬ್ಯಾಂಕೊಂದರ ಮ್ಯಾನೇಜರಾದ. ಅವರ ಎರಡನೆ ಸುಪುತ್ರನಾದ ಬಸವರಾಜನಾಯ್ಕ *ಬಿ.ಕಾಂ ಅನ್ನೇ ದಂಡಯಾತ್ರೆಯ ರೂಪದಲ್ಲಿ ಪಾಸು ಮಾಡಿದ. ಆನಂತರ ಕಾನೂನು ಪದವಿಯನ್ನು ಅರ್ಧಂಬರ್ದ ಮಾಡಿದ.

ಇಂತಹ ಬಡ ಕುಟುಂಬದ ಬಸವರಾಜ ನಾಯ್ಕ 1993 ರಲ್ಲಿ ಆಲೂರು ಹಟ್ಟಿಯಲ್ಲಿ ಕಾಂಗ್ರೆಸ್ ಬಾವುಟ ಕಟ್ಟಿ ರಾಜಕಾರಣಕ್ಕೆ ಎಂಟ್ರಿ ಕೊಟ್ಟ. ಆದರೆ ಈ ವಲಯದಲ್ಲೂ ದಿಟ್ಟತನ ತೋರಲಿಲ್ಲ. ಅಣಜಿ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಕಾಂಗ್ರೆಸ್ ತನಗೆ ಟಿಕೇಟ್ ಕೊಡಲಿಲ್ಲ ಎಂದು ಪಕ್ಷೇತರನಾಗಿ ಸ್ಪರ್ಧಿಸಿ ಸೋತ. ಹೀಗೆ ಮಣ್ಣು ಮುಕ್ಕಿದ ನಂತರ ಮತ್ತೆ ಕಾಂಗ್ರೆಸಿಗೆ ಬಂದು ಎಸ್.ಎಸ್.ಮಲ್ಲಿಕಾರ್ಜುನರ ಕಾಲು ಹಿಡಿದ. ಮಲ್ಲಿಕಾರ್ಜುನರ ಮರ್ಜಿಯಿಂದಲೇ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಿ ಸದಸ್ಯನಾದ. ಆನಂತರ ಅಧ್ಯಕ್ಷನೂ ಆದ. ಇಲ್ಲಿಂದಲೇ ಬಸವರಾಜನಾಯ್ಕ ದುಡ್ಡು ಮಾಡುವ ದಂಧೆಗೆ ಇಳಿದದ್ದು. ಅದೇ ಸಮಯಕ್ಕೆ ಸರಿಯಾಗಿ ಕೇಂದ್ರ ಸರ್ಕಾರ ಉದ್ಯೋಗ ಖಾತ್ರಿ ಯೋಜನೆ ಜಾರಿಮಾಡಿತು. ಈ ಯೋಜನೆಯಲ್ಲಿ ಅಕ್ರಮಗಳನ್ನು ಎಸಗಿದ ಈತನಿಗೆ ದುಡ್ಡಿನ ಹೊಳೆಯೇ ಹರಿಯಿತು. ಬಸವರಾಜನಾಯ್ಕ ತಾಲೂಕು ಪಂಚಾಯತಿ ಅಧ್ಯಕ್ಷನಾಗಿದ್ದಾಗ ಅಜಮಾಸು ಎರಡು ಕೋಟಿ ರೂಪಾಯಿ ಗೋಲ್‌ಮಾಲ್ ನಡೆದು ಹೋಯಿತು. ಚೆಕ್ ಡ್ಯಾಂಗಳ ಹೆಸರಲ್ಲಿ, ರಸ್ತೆಗಳ ನೆಪದಲ್ಲಿ ಬೋಗಸ್ ಬಿಲ್ಲುಗಳು ಜನ್ಮತಾಳಿದವು. ಅವನು ಅಧ್ಯಕ್ಷಸ್ಥಾನದಲ್ಲಿದ್ದಷ್ಟು ದಿನ ಪಂಚಾಯತಿಯನ್ನು ಮುಕ್ಕಿಬಿಟ್ಟ.

2008ರಲ್ಲಿ ಈತ ಶಾಸಕನಾದದ್ದೇ ಅವನ ಅದೃಷ್ಟದ ಅಗುಸೆ ಬಾಗಿಲು ಬಾಯಿತೆರೆದುಕೊಂಡಿತು. ಅಲ್ಲಿಯ ತನಕ ಇವನ ಜೀವನಾಂಶಕ್ಕಿದ್ದದ್ದು ಅಪ್ಪನ ಹೆಸರಿನಲ್ಲಿದ್ದ ಮೂರು ಚಿಲ್ಲರೆ ಎಕರೆ ಜಮೀನು ಮತ್ತು ಆಲೂರು ಹಟ್ಟಿಯ ಮನೆ ಮಾತ್ರ ಎಂಬುದು ನೆನಪಿರಲಿ. ಶಾಸಕನಾದ ನಂತರ ಈತನ ಆದಾಯ ಹೆಚ್ಚುತ್ತಾ ಹೋಯಿತು. ಕ್ಷೇತ್ರಕ್ಕೆ ಬಿಡುಗಡೆಯಾದ ಅನುದಾನದಲ್ಲಿ ಪರ್ಸೆಂಟೇಜಿನ ವ್ಯವಹಾರವನ್ನು ಪ್ರಾರಂಭಿಸಿ ತನ್ನ ತಿಜೋರಿಯನ್ನು ತುಂಬಿಸಿಕೊಳ್ಳಲಾರಂಭಿಸಿದ.


ಎಸ್. ಎ. ರವೀಂದ್ರನಾಥ್

ಬಸವರಾಜನಾಯ್ಕನ ಅದೃಷ್ಟವೋ, ಆಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪನ ದುರಾದೃಷ್ಟವೋ, ಯಡ್ಡಿಯ ಕುರ್ಚಿಯನ್ನು ಬಳ್ಳಾರಿಯ ರೆಡ್ಡಿ ಗ್ಯಾಂಗು ಅಲುಗಾಡಿಸಲಾರಂಭಿಸಿದಾಗ ಯಡ್ಡಿ ಕಂಗಾಲಾಗಿ ಹೋದರು. ಆಗಲೇ ವಿವಿಧ ನಿಗಮಗಳ ನೇಮಕಾತಿಯ ಹವಾ ಶುರುವಾಯಿತು. ಅದೇ ಸಮಯ ಬಸವರಾಜನಾಯ್ಕನಿಗೆ ಮತ್ತೊಂದು ವರವಾಗಿ ಬಂತು. ಬಸವರಾಜನಾಯ್ಕ 'ತಾಂಡ ಅಭಿವೃದ್ಧಿ ನಿಗಮ'ದ ಅಧ್ಯಕ್ಷನಾಗಿ ಗೂಟದ ಕಾರನ್ನು ಪಡೆದ. ಯಡ್ಡಿಯ ಕಷ್ಟದ ಸಮಯದಲ್ಲಿ ಬಸರಾಜನಾಯ್ಕ ತೋರಿದ ನಿಷ್ಠೆಗೆ ಸಂದ ಪ್ರತಿಫಲವಿದು.

ಅಷ್ಟೇ ಅಲ್ಲ, ತಾಂಡ ಅಭಿವೃದ್ಧಿ ನಿಗಮವನ್ನೇ ಈತ ತನ್ನ ಕುಟುಂಬದ ಒಕ್ಕೂಟವಾಗಿ ಪರಿವರ್ತಿಸಿದ. ಈಗ ಆ ನಿಮಗದಲ್ಲಿ ಈತನ ಅಕ್ಕನ ಮಕ್ಕಳದೇ ಕಾರುಬಾರು. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಕೊಟ್ಟರೆ ಸಾಕೆನಿಸುತ್ತದೆ. ಸಂದೀಪ್ ಎನ್ನುವವನು ಅಣಬೇರು ಗ್ರಾಮ ಪಂಚಾಯತಿಯ ಹಾಲಿ ಸದಸ್ಯ ಆದರೆ ಈತ ತಾಂಡಾ ಅಭಿವೃದ್ಧಿ ನಿಗಮದಲ್ಲಿ ಕಾಯಂ ಗುಮಾಸ್ತ!

ತಾಂಡಾ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆಯಾದ 200 ಕೋಟಿ ಅನುದಾನದಲ್ಲಿ ಬಸವರಾಜನಾಯ್ಕನಿಗೆ ಎರಡು ಪರ್‌ಸೆಂಟ್, ಕಮಿಶನರ್‌ಗೆ ಎರಡು ಪರ್‌ಸೆಂಟ್, ಬಸವರಾಜ ನಾಯ್ಕನ ಆಪ್ತ ಸಹಾಯಕನಿಗೆ ಒಂದು ಪರ್‌ಸೆಂಟ್ ಲೆಕ್ಕದಲ್ಲಿ ಅಮೇಧ್ಯ ಜಮೆಯಾಗುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ರಾಜ್ಯದಲ್ಲಿರುವ 22,000 ಲಂಬಾಣಿ ತಾಂಡಗಳಲ್ಲಿ ಅದ್ಯಾವ ತಾಂಡ ಉದ್ಧಾರವಾಗದಿದ್ದರೂ ಬಸವರಾಜನಾಯ್ಕನ ಕುಟುಂಬವಂತೂ ಶತಮಾನದ ಹಸಿವನ್ನು ನೀಗಿಸಿಕೊಂಡಿದೆ ಎಂದು ಇಲ್ಲಿನ ಜನರೇ ಹೇಳುತ್ತಿದ್ದಾರೆ.

ಇವತ್ತು ಬಸವರಾಜನಾಯ್ಕ ಕೋಟಿಗಳ ಲೆಕ್ಕದಲ್ಲಿ ಬೆಲೆ ಬಾಳುವ ಆಸ್ತಿಯ ಒಡೆಯ. ಆತ ಇತ್ತೀಚೆಗೆ ಎಸ್.ಎಂ. ಪ್ರಭುಲಿಂಗಸ್ವಾಮಿ ಬಿನ್ ಪಂಚಾಕ್ಷರಯ್ಯ ಎಂಬುವವರಿಂದ ಖರೀದಿಸಿದ 49x80 ಅಳತೆಯ ತರಳಬಾಳು ಬಡಾವಣೆಯ ಮನೆಯೇ ಒಂದು ಕೋಟಿ ರೂಪಾಯಿ ಬೆಲೆ ಬಾಳುತ್ತದೆ. ಅದು ಬರೀ ಮನೆ ಅಲ್ಲ, ಬದಲಾಗಿ ಹವಾನಿಯಂತ್ರಿತ ಬಂಗಲೆ!

ಇಂಥವನು ಮತ್ತೊಂದು ಬಾರಿಗೆ ಶಾಸಕನಾದರೆ ಇಂದ್ರಲೋಕವೇ ನಾಚುವಷ್ಟು ಕುಬೇರನಾಗುತ್ತಾನೆ!

ಇದೆಲ್ಲ ಸಾಲದೆಂಬಂತೆ ಶಾಸಕ ಬಸವರಾಜನಾಯ್ಕನ ಧರ್ಮ ಪತ್ನಿ ಸೋನಿಬಾಯಿಯ ದರ್ಬಾರಿನ ದೌಲತ್ತೇ ವಿಚಿತ್ರವಾದದ್ದು. ಈಕೆ ಮೈತುಂಬಾ ತೊಡುವ ಬಂಗಾರ, ಮೈಗೆ ಸುತ್ತಿಕೊಳ್ಳುವ ಹತ್ತು ಸಾವಿರ ಬೆಲೆಯ ಭರ್ಜರಿ ರೇಷ್ಮೆ ಸೀರೆ ಲಂಬಾಣಿ ತಾಂಡಗಳಲ್ಲಿ ವಾಸಿಸುವ ಕಡು ಕಷ್ಟದ ಮಹಿಳೆಯರ ಬದುಕನ್ನೇ ಅಣಕಿಸುವಂತಿರುತ್ತವೆ. ಈ ಸೋನಿಬಾಯಿ ತನ್ನ ಗಂಡನಿಗಿಂತಾ ಕಡು ಭ್ರಷ್ಟೆ. ಗಂಗಾಕಲ್ಯಾಣ ಯೋಜನೆಯಲ್ಲಿ ದಲಿತರ ಬೋರುಗಳಿಗೆ 10 ಸಾವಿರ ರೂಪಾಯಿ ಕಮೀಶನ್ ಫಿಕ್ಸು, ದುಡ್ಡು ಕೊಟ್ಟವರಿಗೇ ಬೋರು, ಮಹಿಳಾ ಸಂಘದಿಂದ ಮುಲಾಜಿಲ್ಲದೆ ವಸೂಲಿ, ಸಾಲ ಬೇಕಿದ್ದರೆ ಕಮೀಶನ್ ಕೊಡಿ... ಇದೆಲ್ಲ ಈಕೆಯ ಕಾರುಬಾರಿನಲ್ಲಿ ನಡೆಯುತ್ತಿರುವ ಅವ್ಯವಹಾರಗಳು.

ಮನೆಯಲ್ಲಿ ಕೂತೇ ತಾಲ್ಲೂಕಿನ ಅಧಿಕಾರಿಗಳಿಗೆ ಆದೇಶ ಬೀಸುವ ಸೋನಿಬಾಯಿಯ ಬಾಯಿಗೇ ಜನ ಬೇಸತ್ತು ಹೋಗಿದ್ದರೆ ಈಕೆಯ ಕರ್ಮಕಾಂಡವನ್ನು ಕಂಡು ದಾವಣಗೆರೆ ತಹಶೀಲ್ದಾರ ಡಾ.ಹರೀಶ ನಡುಗಿ ಹೋಗಿದ್ದಾರೆ. ಈತ ಬಸವರಾಜನಾಯ್ಕನ ಕುಲಸ್ಥನಾಗಿದ್ದರೂ ವಸೂಲಿ ವಿಷಯದಲ್ಲಿ ವಿನಾಯತಿ ಇಲ್ಲ. ಸೋನಿಬಾಯಿಯ ಹಣದ ದಾಹ ಯಾವ ಮಟ್ಟಕ್ಕೇರಿದೆ ಎಂದರೆ ಆಕೆಗೆ ಇವತ್ತು 50 ಸಾವಿರ, ಲಕ್ಷಗಳೆಲ್ಲ ಲೆಕ್ಕಕ್ಕಿಲ್ಲ.

ಬಸವರಾಜನಾಯ್ಕ ಶಾಸಕನಾಗಿ ನಾಲ್ಕು ವರ್ಷಗಳು ಮಾತ್ರ ಕಳೆದಿದ್ದರೂ ಈ ಅವಧಿಯಲ್ಲಿ ಈತ ನೂರಾರು ಕೋಟಿಯ ಸರದಾರನಾಗಿರುವುದನ್ನು ಕಂಡು ಇಲ್ಲಿನ ಮತದಾರರು ಬೆಕ್ಕಸಬೆರಗಾಗಿದ್ದಾರೆ. ಇಂಥಾ ಕಡು ಭ್ರಷ್ಟನ ಹೆಗಲ ಮೇಲೆ ಸಿ.ಬಿ.ಐ. ಕೈ ಹಾಕಿದರೆ ಯಡ್ಡಿಯ ಜೊತೆಗೇ ಆತನ ನೀಯತ್ತಿನ ಭಂಟನಾಗಿರುವ ಮಾಯಾಕೊಂಡದ ಶಾಸಕ ಬಸವರಾಜನಾಯ್ಕ ಕೂಡ ಪರಪ್ಪನ ಅಗ್ರಹಾರ ಜೈಲಿನ ಕಂಬಿಯ ಹಿಂದೆ ಮುದ್ದೆ ಮುರಿಯುವುದು ಗ್ಯಾರಂಟಿ.

-ಟಿ.ಎನ್.ಷಣ್ಮುಖ

'ಕೈ'ಗೆ ಸ್ವಾಮಿಯೇ ಸವಾಲು?

ಮಾಯಾಕೊಂಡದ ಹಾಲಿ ಶಾಸಕ ಬಸವರಾಜನಾಯ್ಕನ ಬಗ್ಗೆ ಇಲ್ಲಿನ ಮತದಾರರು ರೋಸತ್ತಿದ್ದರೂ ಕಾಂಗ್ರೆಸ್ ಪಕ್ಷ ಆತನಿಗೆ ಪರ್ಯಾಯವಾಗಿ ಓರ್ವ ಸೂಕ್ತ ಅಭ್ಯರ್ಥಿಯನ್ನು ಜನರ ಮುಂದೆ ಇಡದಿರುವುದು ಒಂದು ದೊಡ್ಡ ದುರಂತವೇ ಸರಿ. ಸದ್ಯದ ವರ್ತಮಾನದ ಪ್ರಕಾರ ಮುಂದಿನ ವಿಧಾನ ಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಿವಮೂರ್ತಿನಾಯ್ಕ ಎಂಬ ಮಾಜಿ ಮಂತ್ರಿ. ಈತನಿಗೆ ಕಾಂಗ್ರೆಸ್ ಪಕ್ಷ ಟಿಕೇಟ್ ಕೊಟ್ಟರೆ ಏನು ಗತಿ ಎಂಬ ಭೀತಿ ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರಲ್ಲಾಗಲೇ ದಿಗಿಲು ಹುಟ್ಟಿಸಿದೆ.

ಶಿವಮೂರ್ತಿನಾಯ್ಕ ಬಂಗಾರಪ್ಪ ಗ್ಯಾಂಗಿನಿಂದ ಹೊರದೂಡಲ್ಪಟ್ಟಾಗ ಬಂ ಇನ್ನೂ ಮುಖ್ಯಮಂತ್ರಿ ಆಗಿದ್ದರು. ಅದೇ ಸಮಯದಲ್ಲಿ ಬಂ ಒಮ್ಮೆ ಸಿರಿಗೆರೆಯ ಮಠದ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಅಂತಹ ಅವಕಾಶಕ್ಕಾಗಿ ಕಾದಿದ್ದ ಶಿವಮೂರ್ತಿನಾಯ್ಕ ಮುಖ್ಯಮಂತ್ರಿ ಬಂಗಾರಪ್ಪನವರ ಕಂಟೇಸಾ ಕಾರಿಗೆ ಬೆಂಕಿ ಹಚ್ಚಿಸಿ ತನಗಾದ ಅಪಮಾನಕ್ಕೆ ಸೇಡು ತೀರಿಸಿಕೊಂಡಿದ್ದ.

ಇಂಥಾ ಘಟನೆ ಸಿರಿಗೆರೆಯ ಸಾಧು ಸದ್ಧರ್ಮ ಪೀಠದ ಜಗದ್ಗುರುಗಳ ಸಮ್ಮುಖದಲ್ಲೇ ನಡೆದಿದ್ದು ಅವರು ಕೆಂಡಾಮಂಡಲವಾಗುವುದಕ್ಕೆ ಕಾರಣವಾಗಿತ್ತು. ಅವರು ಆ ಪ್ರಕರಣವನ್ನು ಇಂದಿಗೂ ಮರೆತಿಲ್ಲ. ಆ ಕಾರಣಕ್ಕೇ ಶಿವಮೂರ್ತಿನಾಯ್ಕ ಮಾಯಕೊಂಡದಿಂದ ಸ್ಪರ್ಧಿಸಿದರೆ ಸ್ವಾಮಿಗಳು ಆತನ ವಿರುದ್ಧ ಮಠದಿಂದಲೇ ಫರ್ಮಾನು ಹೊರಡಿಸುವುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಮಠದ ಮಾತನ್ನು ಮೀರಿ ಯಾವ ಸಾಧು ಲಿಂಗಾಯತನೂ ಇಲ್ಲಿ ಮತ ಚಲಾಯಿಸುವುದಿಲ್ಲ. ಇಷ್ಟೆಲ್ಲ ಗೊತ್ತಿದ್ದೂ ಶಿವಮೂರ್ತಿನಾಯ್ಕನೇ ಕಾಂಗ್ರೆಸ್ ಪಕ್ಷದ ಕ್ಯಾಂಡಿಡೇಟಾದರೆ ಇಲ್ಲಿ ಕಾಂಗ್ರೆಸ್ ಸೋಲುವುದು ಗ್ಯಾರಂಟಿ. ಇದನ್ನು ಕಾಂಗ್ರೆಸ್ ಆದಷ್ಟು ಬೇಗ ಅರಿತು ಬೇರೆ ಅಭ್ಯರ್ಥಿಯನ್ನು ಸಜ್ಜುಗೊಳಿಸಿದರೆ ಆ ಪಕ್ಷಕ್ಕೂ, ಈ ಕ್ಷೇತ್ರಕ್ಕೂ ಒಳ್ಳೆಯದಾದೀತು.

ಸರಣಿ ಸೈಟು ಪ್ರತಾಪ!


ಬಸವರಾಜನಾಯ್ಕ ಶಾಸಕನಾದ ನಂತರ ಮಾಡಿರುವ ಬೇನಾಮಿ ...ಸ್ತಿಯ ಬಗ್ಗೆ ಸರಿಯಾದ್ದೊಂದು ತನಿಖೆ ನಡೆದರೆ ಈತನಿಗೆ ಪರಪ್ಪನ ...ಗ್ರಹಾರವೇ ಗತಿ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ಈತ ...ಾಸಕನಾಗಿದ್ದಕ್ಕೆ - ಅದರಲ್ಲೂ ಯಡ್ಡಿಗೆ ನಿಷ್ಠೆ ತೋರಿದ್ದಕ್ಕೆ - ...ಜೆಪಿ ಸರ್ಕಾರ ಈತನಿಗೆ ಒಂದು ಸೈಟನ್ನು ಕಡಿಮೆ ದರದಲ್ಲಿ ...ೀಡಿದೆ. ಅದರ ಮಾರುಕಟ್ಟೆ ಬೆಲೆಯೇ ಇವತ್ತು ಎರಡು ...ೋಟಿಗಿಂತಲೂ ಹೆಚ್ಚು.

ಅಷ್ಟೇ ಅಲ್ಲದೆ, ತನ್ನ ಹೆಸರಿಗೆ ಯಾವುದೇ ಸೈಟಿಲ್ಲವೆಂದು ...ಹೇಳಿ ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ತನ್ನ ಹೆಂಡತಿ ...ೋನಿಬಾಯಿಯ ಹೆಸರಿಗೊಂದು ಸೈಟು, ಅಣ್ಣನ ಹೆಸರಿಗೆ ...ಮತ್ತೊಂದು ಸೈಟು, ಅಕ್ಕನ ಮಗನ ಹೆಸರಿಗೆ ಮಗದೊಂದು ...ಸೈಟನ್ನು ಈತ ಪಡೆದಿದ್ದಾನೆ.

ಹೀಗೆ ಬೇನಾಮಿಯಾಗಿ ಮಾಡಿದ ಆಸ್ತಿಯ ಲೆಕ್ಕದ ಮೇಲೆಯೇ ...ಸವರಾಜನಾಯ್ಕ ಪರಪ್ಪನ ಅಗ್ರಹಾರದಲ್ಲಿ ನಂಬರ್ ಪಡೆಯುವ ...ಟ್ ಕಿಮ್ಮನ್ನೂ ಪಡೆದಿದ್ದಾನೆ ಎಂದು ಇಲ್ಲಿನ ಜನ ಆಡಿಕೊಳ್ಳುತ್ತಿದ್ದಾರೆ.

ಪೇಜಾವರರ ಇಬ್ಬಂದಿತನ

ಮಠದ ಗ್ರಂಥ ರಕ್ಷಿಸಿದ್ದು ಮಾಂಸಾಹಾರಿ!




ವಿಚಿತ್ರ ಆದರೂ ಸತ್ಯ ಎನ್ನಬಹುದಾದ ಒಂದು ಘಟನೆ ಇದು.

ಉಡುಪಿಯ ಮಾಧ್ವ ಬ್ರಾಹ್ಮಣ ಮಠಾಧೀಶ ಪೇಜಾವರ ವಿಶ್ವೇಶ್ವರ ಸ್ವಾಮಿಯ ಇಬ್ಬಂದಿತನವನ್ನು ಎತ್ತಿ ತೋರಿಸುವಂತಿದೆ ಇದು.

ಹಿಂದೂ ಸಮಾಜದೊಳಗೆಯೇ ಅನ್ಯ ಜಾತಿಯವರೊಂದಿಗೆ ಬ್ರಾಹ್ಮಣರು ಸಹಪಂಕ್ತಿ ಭೋಜನ ಮಾಡಬಾರದೆಂದು, ಅದರಲ್ಲೂ ಮಾಂಸಾಹಾರಿಗಳೊಂದಿಗೆ ಒಡನಾಡಲೂ ಕೂಡದೆಂಬಂತೆ ಫರ್ಮಾನು ಹೊರಡಿಸಿದ್ದರು ಪೇಜಾವರ.

ಆದರೆ ಅದೇ ಪೇಜಾವರ ಶುದ್ಧ ಮಾಂಸಾಹಾರಿಯೊಬ್ಬನ ಕೈಗೆ ತಮ್ಮ ಮಠದ ಪವಿತ್ರ ತಾಳೆಗರಿ ಗ್ರಂಥವೊಂದನ್ನು ಕೊಟ್ಟು ಡಿಜಿಟಲ್ ಟೆಕ್ನಾಲಜಿಯ ಮೂಲಕ ರಕ್ಷಿಸಿಕೊಂಡಿದ್ದಾರೆ.



ಅದು ಸಾಕ್ಷಾತ್ ದ್ವೈತ ಸಿದ್ಧಾಂತಿ, ಮಾಧ್ವರ ಜಾತಿಗುರು ಮಧ್ವಾಚಾರ್ಯರೇ ರಚಿಸಿರುವ ಗ್ರಂಥ!

ಅದರ ಹೆಸರು ಸರ್ವಮೂಲ ಗ್ರಂಥ!!

ಸುಮಾರು ಏಳುನೂರು ವರ್ಷಗಳಷ್ಟು ಹಿಂದಿನ ಈ ಪುರಾತನ ತಾಳೆಗಾರಿ ಗ್ರಂಥವನ್ನು ಪರಿಶೀಲಿಸಿ, ಸ್ಪರ್ಶಿಸಿ, ರಕ್ಷಿಸಿ ಕೊಟ್ಟ ವ್ಯಕ್ತಿ....

ಮಿಸ್ಟರ್ ರೋಜರ್ ಈಸ್ಟನ್!

ಈತ ಒಬ್ಬ ಅಮೆರಿಕನ್. ಪುರಾತನ ಗ್ರಂಥ, ತಾಳೆಗರಿಗಳು ಇತ್ಯಾದಿಗಳನ್ನು ರಕ್ಷಿಸುವ ವಿದ್ಯೆ ಕಲಿತಿರುವ ನಿಪುಣ. ಆದರೆ ಏನು ಮಾಡುತ್ತೀರಿ, ಬಹುತೇಕ ಬಿಳಿಯರಂತೆ, ಅಮೆರಿಕನ್ನರಂತೆ ಈ ರೋಜರ್ ಕೂಡ ಪಕ್ಕಾ ಮಾಂಸಾಹಾರಿ. ಹಸುವಿನ ಮಾಂಸವೂ ಸೇರಿದಂತೆ ಮಾಂಸಾಹಾರಿಗಳು ತಿನ್ನುವ ತರೇವಾರಿ ಪ್ರಾಣಿಗಳ ಖಾದ್ಯ ಪದಾರ್ಥಗಳನ್ನೆಲ್ಲಾ ತಿನ್ನುವ ಆಸಾಮಿಯೀತ.

ಇಲ್ಲಿನ ಪ್ರಶ್ನೆ ಏನೆಂದರೆ ಮಾಂಸಾಹಾರಿಗಳ ಹತ್ತಿರಕ್ಕೂ ಹೋಗಬೇಡಿ ಎಂದು ತನ್ನ ಭಕ್ತರಿಗೆ ಹೇಳುವ ಪೇಜಾವರ ಮತ್ತಿತರ ಅಷ್ಟಮಠದ ಸ್ವಾಮಿಗಳು ಮಾಂಸಾಹಾರಿ ರೋಜರ್‌ನನ್ನು ಅದು ಹೇಗೆ ಮಠದ ಒಳಗೆ ಬಿಟ್ಟುಕೊಂಡರು? ಅದು ಯಾಕೆ ಮಧ್ವಾಚಾರ್ಯ ವಿರಚಿತ ಸರ್ವಮೂಲ ಗ್ರಂಥದ ಮೂಲ ಪ್ರತಿಯನ್ನೇ ಈ ಮಾಂಸಾಹಾರಿ ರೋಜರ್ ಕೈಗೆ ಕೊಟ್ಟಿದ್ದರು?

ಆಗ ಈ ಜಾತಿಬೇಧ, ಆಹಾರ ಬೇಧ ಉಡುಪಿಯ ಅಷ್ಟಮಠಾಧೀಶರರನ್ನು ಏಕೆ ಕಾಡಲಿಲ್ಲ?

ಇಷ್ಟಕ್ಕೂ ಈ ರೋಜರ್ ಯಾರು?


ಆತ ಉಡುಪಿ ಮಠದೊಳಗೆ ಯಾಕೆ, ಯಾವಾಗ ಕಾಲಿಟ್ಟನೆಂಬುದು ಸ್ವಲ್ಪ ಇಂಟರೆಸ್ಟಿಂಗ್ ಆಗಿದೆ.

ಸರ್ವಮೂಲ ಗ್ರಂಥದ ದುಃಸ್ಥಿತಿ

ದ್ವೈತ ದರ್ಶನದ ಸಿದ್ಧಾಂತಿ ಮಾಧ್ವ ಬ್ರಾಹ್ಮಣರ ಧರ್ಮಗುರು ಶ್ರೀಮದ್ ಮಧ್ವಾಚಾರ್ಯರು ಕ್ರಿಶ. 1238 ರಿಂದ 1317 ರವರೆಗೆ ಇದ್ದವರು. ಮಧ್ವರು ತಮ್ಮ ಜೀವಿತ ಕಾಲದಲ್ಲಿ ದ್ವೈತ ಫಿಲಾಸಫಿ ಕುರಿತಂತೆ ಅನೇಕ ವಿಚಾರಗಳನ್ನು ಪ್ರತಿಪಾದಿಸಿದ್ದರು. ಅವುಗಳ ಪೈಕಿ "ಸರ್ವಮೂಲ ಗ್ರಂಥ" ಎಂಬುದು ತಾಳೆಗರಿಗಳ ಮೇಲೆ ರಚಿತವಾಗಿರುವ ಒಂದು ಕೃತಿ. ಉಡುಪಿಯ ಅಷ್ಟಮಠಗಳ ಪೈಕಿ ಒಂದಾಗಿರುವ ಪಲಿಮಾರು ಮಠದ ಒಳಗೆ ಒಂದು ಮರದ ಪೆಟ್ಟಿಗೆಯಲ್ಲಿ ಈ ಸರ್ವಮೂಲ ಗ್ರಂಥವನ್ನು ಜೋಪಾನವಾಗಿ ಇಡಲಾಗಿತ್ತು. ಆದರೆ ಮಠದೊಳಗಡೆ ಇದ್ದ ಯಾವ ಪವಿತ್ರಾತ್ಮರಿಗೂ ಅವರ ಪಾಲಿನ ಪವಿತ್ರ ಗ್ರಂಥವನ್ನು ರಕ್ಷಿಸಿ ಇಟ್ಟುಕೊಳ್ಳುವ ವಿದ್ಯೆ ತಿಳಿದಿರಲಿಲ್ಲ, ಯಾರೋ ಹೇಳಿದರೆಂದು ಗಾಳಿ, ಬೆಳಕು ಏನೂ ಹೊಕ್ಕದಂತೆ ಭಾರವಾದ ಮರದ ಪೆಟ್ಟಿಗೆಯೊಳಗೆ ಅನೇಕ ಶತಮಾನಗಳ ಕಾಲ ಈ ಸರ್ವಮೂಲ ಗ್ರಂಥ ಇತ್ತು. ಆದರೆ ವಾತಾವರಣದಲ್ಲಿನ ತೇವಾಂಶ ಹಾಗೂ ಉಷ್ಣಾಂಶಗಳ ಪರಿಣಾಮ ಮರದ ಪೆಟ್ಟಿಗೆಯ ಮೇಲೂ ಆಗಿ ಅದು ಹಿಗ್ಗಿಕುಗ್ಗಿ ಅದರೊಳಗಿನ ಸರ್ವಮೂಲವೂ ಕೊಂಚ ಶಿಥಿಲಗೊಂಡಿತ್ತು. ಇದನ್ನೊಮ್ಮೆ ಗಮನಿಸಿದ ಮಠಾಧೀಶರಿಗೆ ಗಾಬರಿಯಾಯಿತು. ಆಗ ಅವಿದ್ಯಾವಂತನೊಬ್ಬ ಆ ತಾಳೇಗಾರಿಗಳಿಗೆ ಆಗಾಗ್ಗೆ ಎಣ್ಣೆ ಸವರುತ್ತಿರಬೇಕೆಂದು ಅವಿವೇಕದ ಸಲಹೆ ಕೊಟ್ಟ.

ಮಠಾಧೀಪತಿಗಳು 'ಸರಿ' ಎಂದು ಅದನ್ನು ಪಾಲಿಸಿದರು. ಇದರಿಂದ ತಾಳೆಗರಿಗಳು ಇನ್ನಷ್ಟು ಹಾಳಾದವೇ ವಿನಃ ಸುಸ್ಥಿತಿಗೆ ಬರಲಿಲ್ಲ, ಗರಿಗಳು ಪುಡಿಪುಡಿಯಾಗುವ ಆತಂಕದ ಸನ್ನಿವೇಶವೂ ಉಂಟಾಗುವ ಸಂಭವ ಕಾಣಿಸಿ ಮಠಾಧೀಶರಿಗೆ ಗಾಬರಿ ಹೆಚ್ಚಾಯಿತು.

ಆಗ ಕಾಣಿಸಿಕೊಂಡ ವ್ಯಕ್ತಿಯೇ ಪಿ.ಆರ್. ಮುಕುಂದ್. ಅಮೆರಿಕದಲ್ಲಿರುವ ಮುಕುಂದ್ ಒಬ್ಬ ಕಂಪ್ಯೂಟರ್ ತಜ್ಞ, ಉಡುಪಿಯ ಬನ್ನಂಜೆ ಗೋವಿಂದಾಚಾರ್ಯರ ಶಿಷ್ಯ, ಸ್ವತಃ ಮಾಧ್ವ ಮತಾನುಯಾಯಿ ಮುಕುಂದ್‌ಗೆ 'ಸರ್ವಮೂಲ ಗ್ರಂಥ'ದ ದುಸ್ಥಿತಿ ಬಗ್ಗೆ ಗೊತ್ತಾಯಿತು. ಆತ ಅಮೆರಿಕಾದ ರೊಚೆಸ್ಟರ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿದ್ದ ತನ್ನ ಗೆಳೆಯ ರೋಜರ್ ಈಸ್ಟನ್ ಎಂಬುವವರಿಗೆ ಇದನ್ನು ತಿಳಿಸಿ ಹೇಗಾದರೂ ಮಾಡಿ ಮಾಧ್ವ ಬ್ರಾಹ್ಮಣರ ಪವಿತ್ರ ಕೃತಿ ಸರ್ವಮೂಲ ಗ್ರಂಥವನ್ನು ಕಾಪಾಡಬೇಕೆಂದು ಕೇಳಿಕೊಂಡರು.



ರೋಜರ್

ಈ ರೋಜರ್ ಪುರಾತನ ಆರ್ಕಿಮಿಡಿಸ್‌ನ ಬರಹಗಳನ್ನು ಡಿಜಿಟಲ್ ಇಮೇಜಿಂಗ್, ಟೆಕ್ನಾಲಜಿಯ ಮೂಲಕ ರಕ್ಷಿಸಿ, ಪುನರ್ ನಿರ್ಮಿಸುವ ಕಾರ್ಯ ಮಾಡಿ ಭೇಷ್ ಅನಿಸಿಕೊಂಡಿದ್ದರು. ನಂತರ ಮುಕುಂದ್ ಹಾಗೂ ರೋಜರ್ ಜೊತೆಗೆ ಅಮೆರಿಕಾದ ಕಂಪ್ಯೂಟರ್ ತಜ್ಞರಾದ ಕೀತ್ ನೋಕ್ಸ್ ಹಾಗೂ ಹೈದರಾಬಾದ್‌ನ ನ್ಯಾನೋ ಆರ್ಕ್ ಟೆಕ್ನಾಲಜೀಸ್ ಸಂಸ್ಥೆಯ ಅಜಯ್ ಘಸುಪುಲೇಟಿ ಎಂಬುವವರೂ ಸೇರಿಕೊಂಡರು.

ಈ ನಾಲ್ವರ ತಂಡ ಒಮ್ಮೆ ಅಮೆರಿಕಾದಿಂದ ಉಡುಪಿಗೆ ಬಂದಿಳಿಯಿತು.

ಅಲ್ಲೂ ಜಾತಿ ಜಗಳ ತೆಗೆದರು

ಈ ತಾಳೆಗರಿ ಸಂರಕ್ಷಕ ತಜ್ಞರ ತಂಡವು ಅಮೆರಿಕಾದಿಂದ ಉಡುಪಿಗೆ ಹೊರಡುವ ಮುನ್ನ ಚಾರ್ಲ್ಸ್ ವೈಟ್ ಎಂಬ ಇನ್ನೊಬ್ಬ ತಜ್ಞರಿಂದ ಅನಿರೀಕ್ಷಿತ ನೆರವು ಪಡೆಯಿತು. ವಿಶ್ವವಿಖ್ಯಾತ ಸಂಶೋಧನ ಸಂಸ್ಥೆ ಸ್ಮಿತ್‌ಸೋನಿಯನ್‌ಗಾಗಿ ಈ ಚಾರ್ಲ್ಸ್ ವೈಟ್ 1980 ರ ಸುಮಾರಿನಲ್ಲೇ ಇಂಡಿಯಾ ದೇಶ ಪೂರ್ತಿ ಸುತ್ತಾಡಿದ್ದ. ಅನೇಕ ಅಮೂಲ್ಯ ಪುರಾತನ ಗ್ರಂಥಗಳ ತಾಳೆಗರಿ ಕೃತಿಗಳ ಮಾಹಿತಿ ಸಂಗ್ರಹಿಸಿ ದಾಖಲಿಸಿದ್ದ.

ಅದೆಲ್ಲಾ ಮಾಹಿತಿ ಪಡೆದ ಮುಕುಂದ್ ಹಾಗೂ ಈಸ್ಟನ್ ಅತ್ಯುತ್ಸಾಹದಿಂದ ಉಡುಪಿಗೆ ಬಂದಾಗ ಅವರಿಗೆ ಮೊದಲಿಗೆ ಆದದ್ದೇ ಮುಖಭಂಗ.

ಮುಕುಂದ್ ಏನೋ ಮಾಧ್ವ ಬ್ರಾಹ್ಮಣರಾಗಿದ್ದರು ಸರಿ. ಆದರೆ ರೋಜರ್ ಈಸ್ಟನ್‌ನ ಜಾತಿ, ಹಿನ್ನೆಲೆ, ಆಹಾರಾಭ್ಯಾಸಗಳ ಬಗ್ಗೆ ಮಠಾಧೀಶರು ಮತ್ತವರ ಆಪ್ತರಿಗೆ ನೂರಾರು ಪ್ರಶ್ನೆಗಳಿದ್ದವು. ಈಸ್ಟನ್ ಹಿಂಜರಿಯದೆ ತಾನೊಬ್ಬ ಮಾಂಸಾಹಾರಿಯೆಂದು ಹೇಳಿಕೊಂಡರು. ಆಗ ಸ್ವಾಮಿಗಳಿಗೆ ಪೀಕಲಾಟಕ್ಕೆ ಬಂತು. ಮಧ್ವಾಚಾರ್ಯರ 'ಸರ್ವಮೂಲ ಗ್ರಂಥ'ವೂ ಉಳಿಯಬೇಕು. ಜೊತೆಗೆ ತಮ್ಮ ಜಾತಿಶ್ರೇಷ್ಠತೆ ಹಾಗೂ ಮಡಿಯೂ ಕೆಡಬಾರದು ಎಂದರೆ ಏನು ಮಾಡಬಹುದೆಂದು ವಿಪರೀತ ತಲೆ ಕೆಡಿಸಿಕೊಂಡರು. ಶಾಸ್ತ್ರಗಳನ್ನೆಲ್ಲಾ ಕೆರಿ ತೂರಿ ಬಹು ಸಂಶೋಧನೆ ಮಾಡಿದರು.


ಕೊನೆಗೊಂದು ದಿನ ರೋಜರ್ ಈಸ್ಟನ್ 'ಸರ್ವಮೂಲ ಗ್ರಂಥ'ವನ್ನು ಸ್ಪರ್ಶಿಸುವ ದಿನದಿಂದ ತಮ್ಮ ಕೆಲಸ ಮುಗಿಸುವ ದಿನದವರೆಗೂ ಮಾಂಸಾಹಾರ ತ್ಯಜಿಸಬೇಕೆಂದು ಸೂಚಿಸಲಾಯಿತು.

ರೋಜರ್ ಹಾಗೂ ಕೀತ್ ಇದಕ್ಕೆ ಒಪ್ಪಿಕೊಂಡ ನಂತರವೇ ಈ ಕೆಲಸ ಶುರುವಾಯಿತು.

ತಲಾ ಎರಡಿಂಚು ಅಗಲ ಹಾಗೂ ಇಪ್ಪತ್ತಾರು ಇಂಚು

ಚುಂಚನಗಿರಿ ಮಠದ ಭೂಮಾಫಿಯಾ

ಬಾಲಗಂಗಾಧರನಾಥ ಸ್ವಾಮಿ ವಿರುದ್ಧ ಲೋಕಾಯುಕ್ತ ದೂರು



ಇಷ್ಟು ದಿನ ರಾಜಕಾರಣಿಗಳ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ಭೂ ಹಗರಣದ ಕಂತುಗಳು ಈಗ ಮಠಗಳ ಅಂಗಳಕ್ಕೂ ಕಾಲಿಟ್ಟಿವೆ. ಈ ಬಾರಿ ಸರ್ಕಾರಿ ಜಾಗದ ತಗಾದೆಯಲ್ಲಿ ತಗುಲಿಕೊಂಡಿರೋದು ಆದಿಚುಂಚನಗಿರಿ ಮಠ ಮತ್ತದರ ಪೀಠಾಧೀಶ ಬಾಲಗಂಗಾಧರನಾಥ ಸ್ವಾಮೀಜಿ. ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಸರ್ಕಾರಕ್ಕೆ ಮಾಡಿರುವ ಶಿಫಾರಸ್ಸು ಮತ್ತು ರಾಜ್ಯ ಲೋಕಾಯುಕ್ತ ಪೊಲೀಸರಿಗೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ದೂರೇನಾದರು ವರ್ಕ್‌ಔಟಾದರೆ ಸ್ವಾಮೀಜಿಯ ಹೆಸರಲ್ಲಿ ಚಾರ್ಜ್‌ಶೀಟ್ ದಾಖಲಾಗೋದು ಗ್ಯಾರಂಟಿ.

ನಡೆದಿರೋದು ಇಷ್ಟು.....


ಬೆಂಗಳೂರಿನ ಹೊರವಲಯದ ಬನ್ನೇರುಘಟ್ಟ ರಸ್ತೆಯಲ್ಲಿರುವ ಹುಳಿಮಾವು ವ್ಯಾಪ್ತಿಯ ಸರ್ವೇ ನಂಬರ್ 89 ರಲ್ಲಿರುವ ಸುಮಾರು 15.31 ಎಕರೆಯ ಜಾಗವನ್ನು ಸರ್ಕಾರ 1981ರಲ್ಲಿ ಅಲ್ಲಿದ್ದ ಗುಹಾಂತರ ದೇವಾಲಯದ ಅಭಿವೃದ್ಧಿಗಾಗಿ ಶ್ರೀ ರಾಮಲಿಂಗೇಶ್ವರ ಸ್ವಾಮಿ ಟ್ರಸ್ಟ್‌ಗೆ ನೀಡಿ ಆದೇಶ ಹೊರಡಿಸಿತ್ತು, ನಂತರ 1997 ರ ಏಪ್ರಿಲ್‌ನಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿದ ಆದಿಚುಂಚನಗಿರಿ ಮಠ ಅಂತಾರಾಷ್ಟ್ರೀಯ ಆಧ್ಯಾತ್ಮಿಕ/ಧಾರ್ಮಿಕ ಕೇಂದ್ರ ಹಾಗೂ ಆಯುರ್ವೇದೀಯ ಆಸ್ಪತ್ರೆಯನ್ನು ಸ್ಥಾಪಿಸಲು ತನಗೆ ಆ ಜಾಗವನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದರಿಂದ 15.31 ಎಕರೆ ಜಾಗವನ್ನು ಇಡಿಯಾಗಿ ಮಠದ ಹೆಸರಿಗೆ ಮರು ವರ್ಗಾವಣೆ ಮಾಡಲಾಗಿತ್ತು.



ಹಾಗೆ ವರ್ಗಾವಣೆ ಮಾಡುವಾಗ ಸರ್ಕಾರ ಒಂದಷ್ಟು ನಿಬಂಧನೆಗಳನ್ನೂ ವಿಧಿಸಿತ್ತು. ಅದರಂತೆ ಮಂಜೂರಾದ ಜಾಗದಲ್ಲಿ ನಿಗದಿತ ಆಧ್ಯಾತ್ಮಿಕ ಕೇಂದ್ರ ಮತ್ತು ಆಸ್ಪತ್ರೆಯನ್ನಲ್ಲದೆ ಬೇರಾವುದೇ ಸಂಸ್ಥೆಗಳನ್ನು ನಡೆಸುವಂತಿಲ್ಲ, ಹಾಗೊಮ್ಮೆ ನಡೆಸುವುದೇ ಆದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು, ಇದು ದತ್ತಿ ಹೆಸರಿನ ಜಾಗವಾಗಿದ್ದು ಯಾವುದೇ ಕಾರಣಕ್ಕೂ ಮಠದ ಹೆಸರಿಗೆ ಒಡೆತನವನ್ನು ವರ್ಗಾಯಿಸಲಾಗದು ಮತ್ತು ಮಠ ಅದಕ್ಕೆ ಅಪೇಕ್ಷಿಸಲೂಬಾರದು, ಸ್ಥಳೀಯ ಯೋಜನಾ ಪ್ರಾಧಿಕಾರದ ಅನುಮೋದನೆಯಿಲ್ಲದೆ ಯಾವುದೇ ಅನಧಿಕೃತ ಕಟ್ಟಡಗಳನ್ನು ನಿರ್ಮಿಸಬಾರದು ಎಂಬೆಲ್ಲ ನಿಯಮಗಳಿದ್ದವು. ಇದಕ್ಕೆ ಒಪ್ಪಿದ ನಂತರವೇ ಮಠಕ್ಕೆ ಜಾಗವನ್ನು ಹಸ್ತಾಂತರಿಸಲಾಗಿತ್ತು.

ಆದರೆ ಮಠದ ಆಡಳಿತ ಮಂಡಳಿ ಅಲ್ಲಿ ತನ್ನ ಮಾತಿನಂತೆ ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಕೇಂದ್ರವನ್ನಾಗಲಿ ಅಥವಾ ಆಯುರ್ವೇದೀಯ ಆಸ್ಪತ್ರೆಯನ್ನಾಗಲಿ ನಿರ್ಮಿಸುವ ಬದಲು ಐಷಾರಾಮಿಯ ಬಿ.ಜಿ.ಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲನ್ನು ಆರಂಭಿಸಿ ಸರ್ಕಾರಿ ನಿಬಂಧನೆಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿದೆ. ಅದೂ ಸರ್ಕಾರದ ಅನುಮತಿ ಇಲ್ಲದೆ.

ಈ ಬಗ್ಗೆ ಜಿಲ್ಲಾಧಿಕಾರಿ ಕಚೇರಿಗೆ ಮೇಲಿಂದ ಮೇಲೆ ದೂರು ಬಂದ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ ಅಧಿಕಾರಿಗಳ ತಂಡ ಮಠ ಯೋಜಿತ ಸ್ಥಳದಲ್ಲಿ ಉದ್ದೇಶಿತ ಸೇವಾಸ್ಮಾರಕಗಳ ಬದಲಿಗೆ ವ್ಯಾವಹಾರಿಕ ಹಿನ್ನೆಲೆಯ ಶಾಲೆಯನ್ನು ನಡೆಸುತ್ತಿದ್ದು, ನಿಬಂಧನೆಗಳು ಉಲ್ಲಂಘನೆಯಾಗಿರುವುದು ಸ್ಪಷ್ಟ ಎಂಬ ವರದಿ ನೀಡಿತ್ತು, ಅದನ್ನು ಆಧರಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಎಂ.ಕೆ. ಅಯ್ಯಪ್ಪ ಮಠಕ್ಕೆ ಶೋಕಾಸ್ ನೋಟೀಸ್ ನೀಡಿದ್ದರು. ಅದರಲ್ಲಿ "ಕರ್ನಾಟಕ ಭೂಮಂಜೂರು ಕಾಯ್ದೆ 1969ರ ಅನ್ವಯ ಉದ್ದೇಶಿತ ಕಾರ್ಯಕ್ಕಾಗಿ ಮಾತ್ರ ಸರ್ವೇ ನಂಬರ್ 89 (ಹುಳಿಮಾವು)ರ 15.31 ಎಕರೆ ಜಾಗವನ್ನು ನಿಮ್ಮ ಮಠಕ್ಕೆ ನೀಡಲಾಗಿತ್ತು, ಆದರೆ ಸರ್ಕಾರದ ಸೂಕ್ತ ಅನುಮತಿ ಇಲ್ಲದೆ ಉದ್ದೇಶಿತ ಕಾರ್ಯದ ಬದಲು ಶಾಲೆಯನ್ನು ನಿರ್ಮಿಸಿ ನಿಯಮಗಳ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಮಂಜೂರಾಗಿರುವ ಜಾಗವನ್ನು ಸರ್ಕಾರ ವಾಪಾಸು ಪಡೆಯದೇ ಇರಲು ಏನಾದರು ಕಾರಣಗಳನ್ನು ನೀಡಬಲ್ಲಿರಾ" ಎಂದು ಪ್ರಶ್ನಿಸಿ, ವಾರದಲ್ಲೇ ಉತ್ತರ ನೀಡುವಂತೆ ಆಡಳಿತ ಮಂಡಳಿಗೆ ತಾಕೀತೂ ಮಾಡಿದ್ದರು.



ABSOLUTE SALE DEED

THE DEED OF ABSOLUTE SALE MADE AND EXECUTED ON THIS THE TWENTY FIRST DAY OF JUNE TWO THOUSAND SIX AT BANGALORE,

BY:

PRATHISTANA (CAVE TEMPLE)

BANGALORE,

REP. BY ITS SOLE TRUSTEE,

NIJAYA NAGAR, BANGALORE

IN FAVOUR OF:

SRI. MARIYAPPA SWAMI,

Aged about 71 years,

ಇನ್ನೂ ಇದೆ....

ಕೇವಲ ಅನಧಿಕೃತ ಶಾಲಾ ಕಟ್ಟಡದ ಆರೋಪ ಮಾತ್ರವಲ್ಲ ಬಾಲಗಂಗಾಧರನಾಥ ಸ್ವಾಮೀಜಿಯ ಮೇಲೆ ಫೋರ್ಜರಿ ಪ್ರಕರಣವೂ ಫಿಕ್ಸ್ ಆಗುವ ಸಾಧ್ಯತೆ ಇದೆ. 15.3 ಎಕರೆ ವಿಸ್ತೀರ್ಣದ ಈ ಜಮೀನು ಬಂಡೆಗಲ್ಲುಗಳಿಂದ ಆವೃತವಾಗಿರುವುದರಿಂದ ಸರ್ಕಾರ ಈ ಜಮೀನನ್ನು ಟ್ರಸ್ಟ್‌ಗೆ ನೀಡುವ ಸಂದರ್ಭದಲ್ಲಿ ನೀರಿನ ಅನುಕೂಲಕ್ಕಾಗಿ ಬೋರ್ ಹಾಕಿಸಿಕೊಳ್ಳಲು ಯೋಗ್ಯವಾದಂತಹ ಪಕ್ಕದ ಸರ್ವೇ ನಂಬರ್ 63ರಲ್ಲಿರುವ 10 ಗುಂಟೆ ಜಾಗವನ್ನೂ ಬಿಟ್ಟುಕೊಟ್ಟಿತ್ತು. ಅದಕ್ಕೂ ಮೇಲ್ಕಂಡ ನಿಬಂಧನೆಗಳು ಅನ್ವಯಿಸುತ್ತಿದ್ದವು, ಅಂದರೆ ಒಡೆತನ ಮಠಕ್ಕೆ ಸೇರುತ್ತಿರಲಿಲ್ಲ, ಹಾಗಾಗಿ ಅದನ್ನು ಮಾರಾಟ ಮಾಡುವ ಅಥವಾ ವರ್ಗಾಯಿಸುವ ಅಧಿಕಾರ ಮಠಕ್ಕಿರಲಿಲ್ಲ,

ಹೀಗಿದ್ದೂ 2006 ಜೂನ್ 21 ರಂದು ಖುದ್ದು ಬಾಲಗಂಗಾಧರನಾಥ ಸ್ವಾಮೀಜಿ ಜಾಗವನ್ನು ಮರಿಯಪ್ಪ ಸ್ವಾಮಿ ಅನ್ನುವವರಿಗೆ ಮಾರಿದ್ದರು. ಇದನ್ನು ಸ್ಪಷ್ಟೀಕರಿಸುವ ಮಾರಾಟದ ಅಗ್ರಿಮೆಂಟೂ ಆಗಿತ್ತು, ಅಂದಹಾಗೆ, ಈ ಮರಿಯಪ್ಪ ಸ್ವಾಮಿ ಕೋಲಾರದ ಪಾಪಾಗ್ನಿ ಕ್ಷೇತ್ರದ ಪೀಠಾಧೀಶ.

ಕರಾರುಪತ್ರದಲ್ಲಿ ನಮೂದಾಗಿರುವಂತೆ 10 ಗುಂಟೆ ಜಾಗವನ್ನು 54.45 ಲಕ್ಷಕ್ಕೆ ಮಾರಲಾಗಿದ್ದರೆ ಇದಕ್ಕೆ ಪ್ರತಿಯಾಗಿ ಮರಿಯಪ್ಪ ಸ್ವಾಮಿ 5 ಕೋಟಿ ಬೆಲೆಯ ಜಾಗವನ್ನು ಮಠಕ್ಕೆ ಮಾರಾಟ ಮಾಡಿದ್ದಾನೆ. ಆ ದಾಖಲೆಯಲ್ಲಿ ಮಾರಿರುವ ಬಾಲಗಂಗಾಧರನಾಥ ಸ್ವಾಮಿ ಮತ್ತು ಕೊಂಡ ಮರಿಯಪ್ಪ ಸ್ವಾಮಿ ಇಬ್ಬರೂ ಸಹಿ ಮಾಡಿದ್ದಾರೆ.

ಸರ್ಕಾರಕ್ಕೆ ಸೇರಿರುವ ಜಾಗವನ್ನು ಅಕ್ರಮವಾಗಿ ಮಾರಾಟ ಮಾಡಿದ್ದು ಮತ್ತು ಭೂಮಂಜೂರು ಕಾಯ್ದೆಯನ್ನು ದುರುಪಯೋಗಪಡಿಸಿಕೊಂಡಿರುವ ಕುರಿತು ಈಗಾಗಲೇ ಲೋಕಾಯುಕ್ತ ವಿಶೇಷ ಕೋರ್ಟ್‌ನಲ್ಲಿ ಬಾಲಗಂಗಾಧರನಾಥ ಸ್ವಾಮಿಯ ವಿರುದ್ಧ ಖಾಸಗಿ ದೂರು ದಾಖಲಾಗಿದೆ.

ಮಠದ ಮಾತು ಮತ್ತು ಮೌನ

ಸರ್ಕಾರಿ ಜಾಗದ ದುರುಪಯೋಗದ ಕುರಿತ ಸಾಲುಸಾಲು ಆರೋಪಗಳು ಕೇಳಿಬರುತ್ತಿದ್ದರೂ ಹಿರಿ ಸ್ವಾಮಿ



ಮಠದ ಅನಧಿಕೃತ ಶಾಲಾ ಕಟ್ಟಡ

ನ ಸುಮಾರು 304 ತಾಳೆಗರಿಗಳನ್ನು ಒಂದೊಂದಾಗಿ ತೆಗೆದು ಒಂದರ ಕನಿಷ್ಠ ಹತ್ತು ಡಿಜಿಟಲ್ ಫೋಟೋಗಳನ್ನು ರೋಜರ್ ಲಿಸಿಕೊಂಡರು. ಡಿಜಿಟಲ್ ಇಮೇಜಿಂಗ್ ಪ್ರೋಸಸ್ ಎನ್ನುವ ಹೊಸ ಟೆಕ್ನಾಲಜಿಯು ಮಧ್ವರ ಪುರಾತನ ಸರ್ವಮೂಲ ಕ್ಕೆ ಮರುಜನ್ಮ ನೀಡಿತು. ಈ ನಡುವೆ ಅಮೆರಿಕಾದ ಸ್ಮಿತ್ ಸೋನಿಯನ್ ಸಂಸ್ಥೆಯ ಸಂಶೋಧಕ ಚಾರ್ಲ್ಸ್ ವೈಟ್ ತಮ್ಮಲ್ಲಿದ್ದ ನ ಪಂಥಕ್ಕೆ ಸಂಬಂಧಿಸಿದ 20 ಸಾವಿರ ಪುಟದಷ್ಟು ಪುರಾತನ ಲೆಗಳನ್ನು 76 ಮೈಕ್ರೋಫಿಲಂಗಳಲ್ಲಿ ದಾಖಲಿಸಿ ಮುಕುಂದ್ ರೋಜರ್‌ಗೆ ನೀಡಿದರು.


ಮುಕುಂದ್

ಇದೆಲ್ಲದರ ನೆರವಿನಿಂದ ಗೂ ಮಧ್ವಾಚಾರ್ಯರ ತನ ಕೃತಿ 'ಸರ್ವಮೂಲ ದ ಡಿಜಿಟಲ್ ಪ್ರತಿ ಈಗ ಸಾಗಿದೆ. ಈ ಮಹತ್ವದ ಸಂಕೀರ್ಣವಾದ ಕೆಲಸವನ್ನು ಸ್ವಿಯಾಗಿ ನಿಭಾಯಿಸುವ ಕುಂದ್, ರೋಜರ್, ಕೀತ್ ಅಜಯ್‌ರನ್ನು ಅಭಿನಂದಿ).

ದರೆ,

ಮಾಂಸಾಹಾರಿಗಳೆಂದರೆ ಮನುಷ್ಯರೇ ಅಲ್ಲ ಎನ್ನುವಂತೆ ಸುವ, ಪದೇಪದೇ ಹೇಳಿಕೆ ನೀಡಿ ಹಿಯಾಳಿಸುವ ಪೇಜಾವರ ಮೀಜಿಗಳು ಡಬಲ್ ಗೇಮ್ ಯಾಕೆ ಮಾಡುತ್ತಾರೆ? ಬ್ರಾಹ್ಮಣರು ಸಾಹಾರಿಗಳೊಂದಿಗೆ ಸೇರಬಾರದು, ಜೊತೆಗೆ ಕೂತು ಜನವನ್ನು ಮಾಡಬಾರದೆನ್ನುವ ಪೇಜಾವರರು ಅಪ್ಪಟ ಸಾಹಾರಿಗಳಾದ ಅಮೆರಿಕಾದ ರೋಜರ್ ಹಾಗೂ ಕೀತ್‌ರ ಸಾಕ್ಷಾತ್ ಮಧ್ವಾಚಾರ್ಯರೇ ಬರೆದಿರುವ, ಈಗ ಅಪಾಠ ; ಎಂದೇ ಮಾಧ್ವ ಬ್ರಾಹ್ಮಣರೆಲ್ಲಾ ನಂಬಿಕೊಂಡಿರುವ ಮೂಲ ಗ್ರಂಥ'ವನ್ನು ಹಸ್ತಾಂತರಿಸುವಾಗ ಈ ಯೋಚನೆ ಕೆ ಬರಲಿಲ್ಲ. ಯಾರು ಯಾವ ಜಾತಿ, ಏನೇನು ಭ್ಯಾಸಿಯಾದರೇನು, ನಮ್ಮ ಕೆಲಸ ಆದರೆ ಸಾಕೆಂಬ ಜಾಣತರ್ಕ ಲ್ಲಿತ್ತೆ?

ರೋಜರ್ ಹಾಗೂ ಕೀತ್‌ರವರು ಸರ್ವಮೂಲ ಗ್ರಂಥವನ್ನು ಡಲ್ ಮಾಡಿದಾಕ್ಷಣ ಮೈಲಿಗೆಯಾಗುತ್ತದೆಂಬ ಕಾರಣಕ್ಕಾಗಿ ೦ ಕೆಲಸ ಮಾಡುವಷ್ಟು ದಿನ ಮಾಂಸ ತಿನ್ನಕೂಡದೆಂದು ಾಗುತ್ತೇನೊ ಸರಿ. ಆದರೆ ಅದಕ್ಕೂ ಮುನ್ನ ಹಾಗೂ ಆ ಗ್ರಂಥ ರಕ್ಷಿಸಲು ಅಮೆರಿಕಾದಲ್ಲಿ ಕೆಲಸ ಮಾಡುತ್ತಿದ್ದಾಗ ಅಮೆರಿಕನ್ನರು ತಿನ್ನುತ್ತಿದ್ದುದು ಶುದ್ಧ ಮಾಂಸಹಾರವೇ ತಾನೆ? ಅವರ ಮೈಯಲ್ಲಿ ಹರಿಯುತ್ತಿರುವುದು ಮಾಂಸಹಾರದಿಂದ ಯಾದ ರಕ್ತವೇ ತಾನೆ?

ಪೇಜಾವರರು ಇದಕ್ಕೇನು ಹೇಳುತ್ತಾರ್ರೆ?

-ಪಾರ್ವತೀಶ

ಗಂಗಾಧರನಾಥರು ಪ್ರತಿಕ್ರಿಯಿಸುವ ಗೋಜಿಗೇ ಹೋಗಿಲ್ಲ. ಅವರ ಜೂನಿಯರ್ ಸ್ಥಾನದಲ್ಲಿರುವ ಮತ್ತು ಮಠದ ಶೈಕ್ಷಣಿಕ ಗಳ ಉಸ್ತುವಾರಿ ನೋಡಿಕೊಳ್ಳುತ್ತಿರುವ ಶೇಖರ್ ಸ್ವಾಮಿ ಷಾಯಿಷಿ ನೀಡುವ ಪ್ರಯತ್ನ ಮಾಡಿದ್ದಾರೆ, ಅದೂ ಅರ್ಧಂಬರ್ಧ. ಮೂರು ಜಾಗದಲ್ಲಿ ಶಾಲೆಯನ್ನು ನಿರ್ಮಿಸಿರುವುದನ್ನು ಕೊಂಡಿರುವ ಅವರು ಇದಕ್ಕಾಗಿ ರಾಜ್ಯ ಸರ್ಕಾರದ ಅನುಮತಿಯನ್ನು ಸುಕೊಂಡಿದ್ದೇವೆ ಎಂಬುದಾಗಿ ಜಿಲ್ಲಾಧಿಕಾರಿಗೆ ಉತ್ತರವನ್ನೂ ನಿಸಿದ್ದಾರೆ.

ಅಷ್ಟಲ್ಲದೆ 'ಜಿಲ್ಲಾಧಿಕಾರಿ ಕಚೇರಿಯಲ್ಲಿ ತಮ್ಮ ಮಠದ ವಿರುದ್ಧ ಕೀಯ ಪಿತೂರಿ ನಡೆಯುತ್ತಿರುವುದರಿಂದ ಈ ರೀತಿ ನೋಟಿಸ್ ಾಗಿದೆ. ಸದ್ಯ ನಡೆಯುತ್ತಿರುವುದು 12ನೇ ತರಗತಿವರೆಗಿನ ಇದಕ್ಕೆ ಅನುಮತಿಯೂ ಸಿಕ್ಕಾಗಿದೆ. ಅಲ್ಲಿಯೇ ಉನ್ನತ ಶಿಕ್ಷಣ ಜ್ ಆರಂಭಿಸಲೂ ಅನುಮತಿ ಕೋರಿ ಸರ್ಕಾರಕ್ಕೆ ಮನವಿ ದ್ದೇವೆ. ಅದಿನ್ನೂ ಮಂತ್ರಿಮಂಡಲದ ಮುಂದೆ ಪೆಂಡಿಂಗ್ ಈ ಹಂತದಲ್ಲಿ ಶಾಲೆ ಅನಧಿಕೃತ ಎಂಬ ಆರೋಪ ರಾಜಕೀಯ ತವೇ ಹೊರತು ಮತ್ತೇನೂ ಅಲ್ಲ' ಎಂಬ ಎಳಸು ಆರೋಪಕ್ಕೂ ದಾಗಿದ್ದಾರೆ.


ಆದರೆ, ಮಠದ ವಿರುದ್ಧ ಇಂತಹ ಸಾಕಷ್ಟು ನಿಯಮ ಘನೆಯ ಆರೋಪಗಳು ಕೇಳಿಬಂದಿರುವುದರಿಂದ ಸೂಕ್ತ ಲನೆ ಮತ್ತು ತನಿಖೆ ನಡೆಸಿದ ನಂತರವಷ್ಟೆ ವರದಿ ತಯಾರಿಸಿದ್ದು ಮತಿ ಪಡೆಯದೇ ಶಾಲೆ ನಡೆಸುತ್ತಿರುವುದು ಸ್ಪಷ್ಟವಾಗಿದೆ. ಹಾಗಾಗಿ ಕೂಡಲೇ ಮಠದ ವಿರುದ್ಧ ಮತ್ತು ಅದಕ್ಕೆ ಸಂಬಂಧಿತರ ದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಜಿಲ್ಲಾಧಿಕಾರಿ ರವಸ್ನು ಪತ್ರ ಕಳುಹಿಸಿಯಾಗಿದೆ.

ಾನ್ನು ಸರ್ಕಾರಕ್ಕೆ ಸೇರಿದ ಹತ್ತು ಗುಂಟೆ ಜಾಗವನ್ನು ಗಂಗಾಧರನಾಥ ಸ್ವಾಮಿ ಅಕ್ರಮವಾಗಿ ಮಾರಾಟ ಮಾಡಿರುವ ಮಠ ಮೌನಕ್ಕೆ ಶರಣಾಗಿದ್ದರೆ, ಜಿಲ್ಲಾಧಿಕಾರಿ ವಿರುದ್ಧವೇ ಾಯ್ತು ಶೇಖರ್ ಸ್ವಾಮಿ ಪ್ರತಿಕ್ರಿಯೆ ನೀಡಲು ನಿರಾಕರಿಸುವ ಲಕ ಆರೋಪದಲ್ಲಿ ಸತ್ಯಾಂಶವಿರುವ ಅನುಮಾನ ಖಾತ್ರಿ ದ್ದಾರೆ. ಅದ್ಭುತಪೇಣಾದರು ಪಡೆದು ದಿಟ್ಟದೊಂದು ಕ್ರಮಕ್ಕೆ ರ ಮುಂದಾದ್ದೇ ಆದರೆ ಬಾಲಗಂಗಾಧರನಾಥ ಸ್ವಾಮಿಗೆ ಾಯುಕ್ತ ಉರುಳು ಸುತ್ತಿಕೊಳ್ಳುವುದು ಖಂಡಿತ. ಧಾರ್ಮಿಕತೆಯ ಲ್ಲಿ ಸರ್ಕಾರದ ಮತ್ತು ಸಾರ್ವಜನಿಕರ ಸ್ವತ್ತನ್ನು ಲಪಟಾಯಿಸಿದ್ದು ಈ ಸಂಬಂಧ ಕಿಂಚಿತ್ತೂ ಕಾಳಜಿಯಿಲ್ಲದಂತೆ ತಿರುವುದು ಮಠಕ್ಕಂಟಿರುವ ಹರಮ ಕಳಂಕ ಎಂಬುದರಲ್ಲಿ ಸಂಶಯವಿಲ್ಲ.

-ಗಿರೀಶ್ ತಾಳಿಕಟ್ಟೆ

ದೇವರಾಣೆ ನೀವು ಒಕ್ಕಲಿಗರಲ್ಲ ಸಾರ್

ಬೆಂಗಳೂರಲ್ಲಿ ನಡೆದ ಒಕ್ಕಲಿಗರ ಸಮಾವೇಶದಲ್ಲಿ ಸದಾನಂದ ಗೌಡರು ಆಡಿದ ಮಾತೊಂದು ಕುಟ್ಟೆ ಹುಳುವಿನಂತೆ ಕೊರೆಯಲಾರಂಭಿಸಿ, ಕಡೆಗೆ ಅವರನ್ನೆ ಈ ಬಗ್ಗೆ ಕೇಳಿದರೆ ಹೇಗೆ ಅನ್ನಿಸಿತಲ್ಲಾ ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.



ರಿಂಗ್ ಟೋನ್: "ನಗು ನಗುತಾ ನಲೀನಲೀ ಎಲ್ಲಾ ದೇವನ ಕಲೆ ಎಂದೇ ನೀ ತಿಳಿ, ಆದರಿಂದ ನೀ ಕಲಿ, ನಗು ನಗುತಾ....."

"ಹಲೊ ಯಾರು?"

"ನಾನು ಸಾರ್ ಯಾಹೂ."

"ಯಾಹೂ ಅಂದರೆ ಯಾರು?"


"ಇದೇನ್ ಸಾರ್ ಇಷ್ಟು ಜಲ್ದಿ ಮರತರಾ? ನಾನು ನೀವು ದುಬಾಯ್‌ಗೋಗಿದ್ದಾಗ ಅಲ್ಲಿ ಶೇಕ್ ಅಹಮದ್ ಆಡಿಟೋರಿಯಮ್ಮಲ್ಲಿ ಭೇಟಿಯಾದೊ. ನೀವು ಇನ್‌ಶರ್ಟ್ ಮಾಡಿಕೊಂಡು ಸ್ಮೈಲಾಗಿದ್ರಿ. ಆಗ ನಾನು ಮೆಚ್ಚಿ ಮಾತಾಡಿದೆ. ನೀವು ಕೈ ಕುಲುಕಿ 'ಥ್ಯಾಂಕ್ಸ್' ಅಂದ್ರಿ."

"ಓಹೊ, ಗೊತ್ತಾಯಿತು ಬಿಡಿ. ನಮ್ಮ ಸಾಂಸ್ಕೃತಿಕ ಜಾಥಾವೊಂದು ದುಬೈಗೆ ಹೋಗಿದ್ದಾಗ ನೀವು ಸಿಕ್ಕಿದ್ದಲ್ಲವಾ?"

"ಹೌದು ಸಾರ್, ಅದೇ ಯಾಹೂ ನಾನು."

"ಸರಿ, ಇಷ್ಟು ದಿನಗಳ ನಂತರ ಫೋನ್ ಮಾಡುವುದಾ? ನಾನು ಮುಖ್ಯಮಂತ್ರಿಯಾದ ಕೂಡಲೆ ಬಂದು ಮಾತನಾಡಿಸುವುದು ಬೇಡವಾ?"

"ಬರ್ತಿನಿ ಸಾರ್, ಬರಬೇಕಾಗಿದೆ. ಆದ್ರೆ ನಿಮ್ಮ ಸುತ್ತ ಮೊದ್ಲು ಆರೆಸ್ಸೆಸ್ಸಿನೋರಿದ್ರು. ಈಗ ಒಕ್ಕಲಿಗರಿದಾರಲ್ಲ ಸಾರ್?"



"ಅದೆ ನೀವು ತಪ್ಪು ತಿಳಿದದ್ದು. ಒಬ್ಬ ಮಂತ್ರಿ, ಮುಖ್ಯಮಂತ್ರಿ ಮನೆಯ ಮುಂದೆ ಒಂದೇ ಜನಾಂಗದ ವರು ಇರುತ್ತಾರೆಂದು ಭಾವಿಸುವುದು ತಪ್ಪು. ನೀವು ಬಂದು ನನ್ನ ಮನೆಯ ಬಳಿ ಇದ್ದವರೆಲ್ಲರ ಜಾತಿ ಕೇಳಿದ್ದರೆ ಅವರೆಲ್ಲಾ ಒಂದೇ ಜಾತಿಯವರಾಗಿದ್ದರೆ ಸರಿ. ಸುಮ್ಮನೆ ಊಹೆಯಿಂದ ಮಾತನಾಡುವುದು ಬೇಡ."

"ಸಾರಿ ಸಾರ್. ಆದ್ರೆ ಉಳಿದ ಜಾತಿಗಳವರಿಗಿಂತ ನಿಮ್ಮ ಜಾತಿ ಜನ ಜಾಸ್ತಿ ಇರಬಹುದಲ್ವ?"

"ಅದನ್ನು ಹೇಗೆ ಹೇಳ್ತಿರಿ?"

"ಹೇಗೆ ಅಂದ್ರೆ, ನೀವು ಮುಖ್ಯಮಂತ್ರಿಯಾದದ್ದು ಎಡೂರಪ್ಪನಿಂದ. ನಂತರ ದೆಹಲಿ ನಾಯಕರಿಂದ ಆದೆ ಅಂದ್ರಿ. ಈಗ ಒಕ್ಕಲಿಗ ಸಮಾಜದ ಆಶೀರ್ವಾದದಿಂದ ಆದೆ ಅಂತೀರಿ. ಅದ್ರಿಂದ ನಿಮ್ಮನ್ನ ಮುಖ್ಯಮಂತ್ರಿ ಮಾಡಿದವರು ಜಾಸ್ತಿ ಅಲ್ಲಿ ನೆರೆದಿರಬಹುದಲ್ವೆ?"

"ನೋಡಿ, ನನ್ನ ಮಾತಿಗೆ ವಿಪರೀತಾರ್ಥ ಕಲ್ಪಿಸುವುದು ಬೇಡ. ನಾನು ಮುಖ್ಯಮಂತ್ರಿಯಾಗಲು ಒಕ್ಕಲಿಗ ಸಮಾಜದ ಆಶೀರ್ವಾದವೂ ಇತ್ತು ಅಂತ ಹೇಳಿದ್ದು."

"ಅದೇ ಸಾರ್ ನೀವು ತಪ್ಪು ತಿಳಿದದ್ದು. ಈ ಜಗತ್ತಿನಲ್ಲಿ ವಿಶ್ವಾಸ ದ್ರೋಹ ಅಂತ ಏನಾದ್ರು ಇದ್ರೆ, ಅದು ಈ ನಿಮ್ಮ ಮಾತಿನಿಂದ ಪ್ರಕಟವಾಗೋ ಅಂತದ್ದು. ಪಾಪ, ಆ ಎಡೂರಪ್ಪ ಜಾತಿ ನಾಯಕನಾಗಿ ತಾನೇ ಇರಬೇಕೆ ಹೊರತು ಲಿಂಗಾಯತರಲ್ಲಿ ಇನ್ನಾರೂ ಇರಬಾರ್ದು ಅಂತ ಹೇಳಿ ಆ ಶೆಟ್ಟರ್‌ನ ಸಪೋರ್ಟು ಮಾಡದು ಬಿಟ್ಟು, ನಿಮ್ಮನ್ನು ಅನಾಮತ್ತು ಎತ್ತಿ ಸಿ.ಎಂ. ಕುರ್ಚಿ ಮೇಲೆ ಕೂರಿಸಿ ಜೈಲಿಗೋದ್ರು. ಆದ್ರೆ ನೀವು ಒಕ್ಕಲಿಗ ಜನಾಂಗದ ಆಶೀರ್ವಾದದಿಂದ ಮುಖ್ಯಮಂತ್ರಿ ಆದೆ ಅಂತೀರಲ್ಲಾ ಇದು ನಿಮ್ಮ ಅಂತರಾತ್ಮದ ಮಾತ ಸಾರ್?"

"ನೋಡಿ ಇವರೆ, ನನ್ನ ತಂದೆ ತಾಯಿ ಒಕ್ಕಲಿಗರು. ಆ ಸಮುದಾಯದಿಂದ ಬಂದವ ನಾನು. ಅದಕ್ಕೆ ಹಾಗಂದೆ. ಎಡೂರಪ್ಪನವರು ನನ್ನ ಹೆಸರನ್ನು ಸೂಚಿಸಿ ಸಲ್ಪ ಸಪೋರ್ಟು ಮಾಡಿದ್ರು. ಒಂದು ವೇಳೆ ನಾನು ಬೇರೆ ಜಾತಿಯವನಾಗಿದ್ದರೆ, ಎಡೂರಪ್ಪ ಅಲ್ಲ ಯಾರೂ ಸಪೋರ್ಟು ಮಾಡುತ್ತಿರಲಿಲ್ಲ. ಆ ಅರ್ಥದಲ್ಲಿ ನಾನು ಹೇಳಿದ್ದು."

"ಆಯ್ತು, ಇದೇ ನಿಮ್ಮ ಜನಾಂಗ ನೀವು ಕೆಎಂಎಫ್ ಛೇರ್ಮನ್ ಆಗಕ್ಕೆ ಹೋರಾಡ್ತಿದ್ದರಲ್ಲ, ಆಗೇಕೆ ಸಾರ್ ಸಪೋರ್ಟು ಮಾಡಲಿಲ್ಲ?"

"ನೋಡಿ ಇವರೆ, ಕೆಎಂಎಫ್ ಛೇರ್ಮನ್ ಸ್ಥಾನ ಒಂದು ಡೈರಿ ಮಾಲೀಕರ ಸ್ಥಾನಕ್ಕೆ ಸಮ. ಅಂತಹ ಸ್ಥಾನಕ್ಕಿಂತ ಇನ್ನೂ ಉನ್ನತವಾದ ಹುದ್ದೆಗೆ ಸಹಾಯ ಮಾಡುವ ಅಂತ ಹೇಳಿ ನಮ್ಮವರು ಸುಮ್ಮನಿದ್ದರು ಅಂತ ಕಾಣ್ತದೆ."

"ಎಡೂರಪ್ಪನ ಜೊತೆ ಇದ್ದಾಗ ಸಿದ್ದಗಂಗೆ ಸ್ವಾಮಿಗೆ ನಿಷ್ಠರಾಗಿದ್ದರಂತಲ್ಲಾ, ನೀವು?"

"ನಾನು ಎಲ್ಲಾ ಸ್ವಾಮೀಜಿಗಳಿಗೂ ಗೌರವ ಕೊಡ್ತೇನೆ. ಆದರೆ ಚುಂಚನಗಿರಿ ಸ್ವಾಮಿಗಳಿಗೆ ಹೆಚ್ಚು ಗೌರವ ಕೊಡ್ತೇನೆ. ಯಾಕೆಂದರೆ ಅವರು ನಮ್ಮವರು."

"ನಿಮ್ಮ ಮಾತು ಪೇಜಾವರರಿಗೆ ಗೊತ್ತಾದ್ರೆ ಅವರಿಗೆ ಬೇಜಾರಾಗಲ್ವ ಸಾರ್?"

"ಅವರು ಯಾಕೆ ಬೇಸರ ಮಾಡಿಕೊಳ್ಳುವುದು?"

"ಯಾಕೆ ಅಂದ್ರೆ, ಅವರು ನಿಮ್ಮ ಪಾರ್ಟಿ ಗುರುಗಳು ಮತ್ತು ಕಾರ್ಯಕರ್ತ. ಅದಕ್ಕಿಂತ್ಲೂ ದೆಹಲಿ ಮಟ್ಟದಲ್ಲಿ ನಿಮ್ಮ ಪಾರ್ಟಿಯ ಪ್ರಭಾವಿ ರಾಜಕಾರಣಿ, ಅದಕ್ಕೆ."

"ಪೇಜಾವರ ಸ್ವಾಮಿಗಳು ಯಾವುದಕ್ಕೂ ಬೇಸರ ಮಾಡಿಕೊಳ್ಳುವುದಿಲ್ಲ. ರಾಜಕಾರಣಿಗಳಲ್ಲಿ ಸ್ವಾಮಿನಿಷ್ಠೆಯಿದ್ದರಾಯ್ತು ಅಂತ ವಿಶಾಲ ಮನಸ್ಸಿನ ಸ್ವಾಮಿ ಅವರು."

"ಅಂದ್ರೆ ನಿಮ್ಮ ಸಮುದಾಯ ನಿಷ್ಠೆ ಮಾತು ಆ ಸಂದರ್ಭದ ಸ್ಫೂರ್ತಿಯಿಂದ ಬಂದದ್ದು ಅಂತ ತಿಳಕೊಳ್ತಾರೆ ಅನ್ನಿ."

"ನೋಡಿ, ರಾಜಕಾರಣಿಗಳು ಜಾತಿ ನಿಷ್ಠೆಯ ಮಾತನ್ನಾಡಿದರೆ ಪೇಜಾವರು ಮೆಚ್ಚಿಕೊಳ್ಳುವುದುಂಟು. ಆದರೆ ಜಾತಿ ಧರ್ಮ ನಿರಾಕರಣೆ ಮಾತನ್ನ ಅವರು ಸಹಿಸುವುದಿಲ್ಲ."

"ಹಾಳುಬಿದ್ದೋಗ್ಲಿ, ಇನ್ನೊಂದು ಅಪಾಯಕಾರಿ ಮಾತಾಡಿದ್ದಿರಲ್ಲಾ ಸಾರ್?"

"ನಾನು ಎಂದೂ ಅಪಾಯಕಾರಿ ಮಾತನ್ನಾಡುವುದಿಲ್ಲ."

"ಒಕ್ಕಲಿಗರು ಯುದ್ಧ ಬಂದಾಗ ಶಸ್ತ್ರಾಭ್ಯಾಸ ಮಾಡು ಪುದಲ್ಲಾ, ಸದಾ ಶಸ್ತ್ರ ಸಜ್ಜಿತರಾಗಿ ಯುದ್ಧ ಸನ್ನದ್ಧರಾಗಿರಬೇಕು ಅಂದಿದ್ದೀರಲ್ಲಾ, ನಿಮ್ಮ ವೈರಿಗಳ್ಯಾರು? ಯಾರ ಮೇಲೆ ಯುದ್ಧ ಮಾಡ್ತೀರಿ?"

"ಡೆಮಾಕ್ರಸಿ ವ್ಯವಸ್ಥೆಯಲ್ಲಿ ಯುದ್ಧದ ಅರ್ಥಗಳು ಬೇರೆಬೇರೆ ಆಗುವುದುಂಟು. ನಮ್ಮ ಜಾತಿನಿಷ್ಠ ಶಾಸಕರನ್ನು ಸಹ ಸನ್ನದ್ಧರಾಗಿ ಇಟ್ಟುಕೊಂಡು, ಅವರಿಗೆ ನಿಷ್ಠರಾದವರನ್ನು ಸರಿಯಾದ ಮೆಹನತ್ತಿನಿಂದ ಸಾಕಣೆ ಮಾಡಿಕೊಂಡಿದ್ದರೆ ಕುಮಾರಸ್ವಾಮಿಯವರು ರೆಸಾರ್ಟಿಗೆ ಹೋಗುವ ಅಗತ್ಯವಿರಲಿಲ್ಲ, ನೇರ ವಿಧಾನಸೌಧಕ್ಕೆ ಹೋಗಬಹುದಿತ್ತು. ಈಗಲೂ ಕೂಡ ನನ್ನನ್ನ ಪದಚ್ಯುತಗೊಳಿಸುವ ಸಂಚು ನಡೆದರೆ, ನಮ್ಮವರು ನನ್ನ ರಕ್ಷಣೆಗೆ ಸದಾ ಸಿದ್ಧರಿರಬೇಕಾಗ್ತದೆ. ಗಡ್ಡಕ್ಕೆ ಬೆಂಕಿ ಬಿದ್ದ ಸಮಯದಲ್ಲಿ ಬಾವಿ ತೋಡುವುದಲ್ಲ."

"ಅಂತೂ ನೀವು ಲಿಂಗಾಯತರ ವಿರುದ್ಧ ಯುದ್ಧ ಘೋಷಣೆ ಮಾಡಿದ್ದೀರಿ ಅಂದಂಗಾಯ್ತು."

"ಅದೇ ನೀವು ತಪ್ಪು ತಿಳಿದದ್ದು. ನಾನು ಒಂದು ನಿರ್ದಿಷ್ಟ ಜಾತಿಯನ್ನು ಕುರಿತು ಹೇಳಿದ್ದಲ್ಲ, ನಾವು ಸುತ್ತಲೂ ವೈರಿಗಳನ್ನು ಇಟ್ಟುಕೊಂಡು ಬದುಕ್ತಯಿದ್ದೇವೆ. ಅವರು ಎಂದಾದರೂ ನಮ್ಮ ಮೇಲೆ ಬೀಳಬಹುದೆಂಬ ಎಚ್ಚರ ತುಂಬ ಅಗತ್ಯ ಹೌದಲ್ಲವ್ರೊ?"

"ನಿಮ್ಮ ದಕ್ಷಿಣ ಕನ್ನಡದ ಭಯದ ಮಾತನ್ನು ಇಡೀ ರಾಜ್ಯಕ್ಕೆ ಹೇಳ್ತಾಯಿದ್ದೀರಲ್ಲಾ ಸಾರ್. ನಿಜಕ್ಕೂ ಒಕ್ಕಲಿಗರು ಇನ್ನೂ ಬಂದಿಷ್ಟು ವಿಶ್ವಮಾನವ ಪ್ರಜ್ಞೆ ಇಟ್ಟುಕೊಂಡು ಬದುಕ್ತಾಯಿರೋರು. ನೀವು ಯಾವುದೇ ದೇವರು ಕೊಡಿ ಪೂಜೆ ಮಾಡ್ತರೆ. ತಿರುಪ್ತಿ ಮಂತ್ರಾಲಯ, ಧರ್ಮಸ್ಥಳ, ಶಬರಿಮಲೆ ಹಿಂಗೆ ಎಲ್ಲಾ ದೇವರಿಗೂ ಯಾತ್ರೆ ಹೊಯ್ತರೆ. ಯಾವುದೇ ಜಾತಿಲಿ ಮರಿಕೂದು ಊಟ ಹಾಕಿದ್ರೂ ಹೋಗಿ ಊಟ ಮಾಡ್ತರೆ. ಚೆನ್ನಾಗಿರೊ ಯಾವುದೇ ಜಾತಿ ಹುಡುಗಿ ತೋರಿ ಮದುವೆ ಮಾಡಿಕತ್ತರೆ. ಯಲ್ಲಾ ಜಾತಿ ಜೊತೆ ಒಕ್ಕಲು ಕುಬುನ ಸಂಬಂಧ ಇಟ್ಟುಕೊಂಡವರೆ. ಅಂತ ಜನಾಂಗದ ಸಭೆಗೆ ಬಂದು ಸದಾ ಶಸ್ತ್ರಗಳನ್ನು ಹಿಡದು ಯುದ್ಧ ಸನ್ನದ್ಧರಾಗಿರಿ ಅಂತ ಹೇಳ್ತಿರಲ್ಲಾ? ಈ ರಾಜ್ಯದ ಮುಖ್ಯಮಂತ್ರಿ ನೀವು. ಆ ಈಶ್ವರಪ್ಪನ ತರ, ಮೊಥಾಲಿಕ್ ತರ, ಸಿ.ಟಿ. ರವಿ ತರ ಮಾತಾಡಬಾರ್ದು ಅಲ್ಲವ ಸಾರ್. ಮುಗ್ಧ ಒಕ್ಕಲಿಗರ ಸಭೆಗೆ ಬಂದು ಚಿಥ್ಲಿಗಳ ಭಾಷಣ ಮಾಡ್ತೀರಲ್ಲಾ? ಶಸ್ತ್ರಾಭ್ಯಾಸ ಮಾಡಿ ಅಂದ್ರೆ ಒಕ್ಕಲಿಗರು ಯಾವ ಶಸ್ತ್ರ ಹಿಡಿಬೇಕೇಳಿ?"

"ಶಸ್ತ್ರ ಅಂದರೆ ಒಗ್ಗಟ್ಟಿನ ಶಿಸ್ತಿಗೆ ಒಳಪಡುವಂತಹ ಪದ. ಅದು ಆಯುಧ ಅಲ್ಲ."

"ನೀವಂಗಂತೀರಿ ಸಾರ್. ನಿಮ್ಮ ಆರೆಸ್ಸೆಸ್ ಸಹವಾಸ ಮಾಡಿರೊ ಕೆಲವುರು ಸರಿಯಾದ ಆಯುಧಅಂತ್ಲೆ ತಿಳಕತ್ತರೆ. ಆಗ?"

"ತಿಳದುಕೊಳ್ಳಲಿ ಬಿಡಿ."

"ದೇವರಾಣೆ ನೀವು ಒಕ್ಕಲಿಗರಲ್ಲ ಸಾರ್."

"ಮತ್ತೇನದು?"

"ಭಜರಂಗಿ!!!"


ಥೂತ್ತೇರಿ!!!

ರೇಸ್ ಕೋರ್ಸ್‌ನಲ್ಲಿ ಜೀತ ಪದ್ಧತಿ!



ರೇಸ್‌ಕೋರ್ಸ್ ಎಂದ ಕೂಡಲೇ ನಾಗಾಲೋಟದಲ್ಲಿ ಓಡುತ್ತಿರುವ ಮಿರಿಮಿರಿ ಮಿಂಚುವ ದಷ್ಟಪುಷ್ಟವಾದ ರೇಸ್ ಕುದುರೆಗಳ ಚಿತ್ರವೊಂದು ನಮ್ಮ ಕಣ್ಣ ಮುಂದೆ ಮೂಡುತ್ತವೆ. ಈ ರೇಸ್ ಕುದುರೆಗಳನ್ನು ದಷ್ಟಪುಷ್ಟವಾಗಿ ಬೆಳೆಸಿ ಮಿರಿಮಿರಿ ಮಿಂಚುವಂತೆ ಮಾಲೀಷ್ ಮಾಡಿ ರೇಸ್‌ಗಾಗಿ ತಯಾರು ಮಾಡುವವರು ಯಾರು? ಇಂಥಾ ಪ್ರಶ್ನೆ ಕೇಳಿಕೊಳ್ಳಬೇಕಾದ ಸಂದರ್ಭ ನಾಗರಿಕ ಸಮಾಜಕ್ಕೆ ಇದುವರೆಗೆ ಬಂದಿರಲೇ ಇಲ್ಲ.

ಕುದುರೆ ರೇಸ್ ಲೋಕದ ಭಾಷೆಯಲ್ಲಿ 'ಸೈಸ್'ಗಳು ಎಂದು ಕರೆಯಲಾಗುವ ಕುದುರೆ ಕಾರ್ಮಿಕರು ಅನಾದಿಕಾಲದಿಂದಲೂ ಜೀತಗಾರರಂತೆ ಬದುಕುತ್ತಿದ್ದಾರೆ. ಬೆಂಗಳೂರಿನ ಹೃದಯ ಭಾಗದಲ್ಲಿ, ವಿಧಾನ ಸೌಧದಿಂದ ಕೂಗಳತೆ ದೂರದಲ್ಲಿ ಇಂಥಾ ಘೋರ ಹೇಗೆ ಸಾಧ್ಯ ಎಂಬ ಪ್ರಶ್ನೆ ಮೂಡುವುದು ಸಹಜ. ಈ ಕುದುರೆ ಕಾರ್ಮಿಕರ ಬದುಕಿನ ಧಾರುಣ ಕತೆ ಈಗತಾನೇ ಹೊರ ಜಗತ್ತಿಗೆ ತೆರೆದುಕೊಳ್ಳುತ್ತಿದೆ.



ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿರುವ ಬಾಲನ್

ರೇಸ್‌ಕೋರ್ಸ್‌ನ ಸುತ್ತಲೂ ಇರುವ ಎತ್ತರದ ಕಾಂಪೌಂಡ್ ಹಾಗೂ ಸದಾ ಮುಚ್ಚಿರುವ ಗೇಟುಗಳ ಹಿಂದೆ ಒಂದು ನಿಗೂಢ ಲೋಕವಿದೆ. ಆ ಲೋಕದಲ್ಲಿ ಶ್ರೀಮಂತ ಉದ್ಯಮಿಗಳ ಮೋಜು ಮಸ್ತಿ ಇದೆ; ಬೆಟ್ಟಿಂಗ್ ದಂಧೆಯ ಕರಾಳತೆಯಿದೆ; ಅಂಡರ್‌ವರ್ಲ್ಡ್ ಡಾನ್‌ಗಳ ಅಟ್ಟಹಾಸವಿದೆ; ಸರ್ಕಾರ ಹಾಗೂ ಪೊಲೀಸರ ದ್ರೋಹವಿದೆ; ಈ ಎಲ್ಲದರ ನಡುವೆ ಸುಮಾರು 800 ಕಾರ್ಮಿಕರ ಬದುಕು ಜೂಜು ಕುದುರೆಗಳ ಕಾಲಡಿ ಸಿಕ್ಕು ನಜ್ಜುಗುಜ್ಜಾಗಿ ಹೋಗುತ್ತಿದೆ.

ಇವರು ಮಾಡುವ ಕೆಲಸವಾದರೂ ಎಂಥದ್ದು? ಮುಂಜಾನೆ ನಸುಕಿನಲ್ಲೇ ಎದ್ದು ಕುದುರೆ ಲದ್ದಿ ಗಂಜಳ ಬಳಿದು, ಲಾಯವನ್ನು ಸ್ವಚ್ಛಗೊಳಿಸಬೇಕು; ಸಮಯಕ್ಕೆ ಸರಿಯಾಗಿ ಕುದುರೆಗಳಿಗೆ ನೀರು ಮೇವು ನೀಡಬೇಕು; ಮೈ ತೊಳೆದು ಮಾಲೀಶ್ ಮಾಡಬೇಕು; ಪಾಲೀಶ್ ಹಾಕಬೇಕು; ಕಾಲಕಾಲಕ್ಕೆ ಔಷಧಿ, ಟಾನಿಕ್‌ಗಳನ್ನು ನೀಡಬೇಕು; ನಿತ್ಯ ವ್ಯಾಯಾಮ ಮಾಡಿಸಬೇಕು; ಅಲ್ಲೇ ಇರುವ ಈಜುಕೊಳದಲ್ಲಿ ಅವುಗಳನ್ನು ಈಜಾಡಿಸಬೇಕು; ಹೀಗೆ ದಿನವಿಡೀ ಜೂಜು ಕುದುರೆಗಳ ಸೇವೆ ಮಾಡಿ ಆ ಅದೃಷ್ಟಶಾಲಿ ಪ್ರಾಣಿಗಳು ನಿದ್ದೆ ಮಾಡಿದ ನಂತರವಷ್ಟೇ ಈ ನತದೃಷ್ಟ ಕಾರ್ಮಿಕರು ರಾತ್ರಿ ಕಣ್ಣು ಮುಚ್ಚಬೇಕು.

ಈ ಜೂಜು ಕುದುರೆಗಳ ಲಾಯದ ಒಂದು ಮೂಲೆಯಲ್ಲೇ ಈ ಕಾರ್ಮಿಕರ ವಾಸ. ಹೀಗೆ ಹಗಲಿರುಳು ದುಡಿಯುವ 800 ಕಾರ್ಮಿಕರಿಗೆ ಪ್ರತಿಫಲವಾಗಿ ಸಿಗುವುದು ತಿಂಗಳಿಗೆ 4800 ರೂಪಾಯಿ ಸಂಬಳ ಮಾತ್ರ. ಅಂದಹಾಗೆ ಇವರು 15ರಿಂದ 40 ವರ್ಷ ಸರ್ವೀಸ್ ಮಾಡಿದ್ದಾರೆ. ಆದರೂ ಇಎಸ್‌ಐ, ಪಿಎಫ್ ಮುಂತಾದ ಯಾವುದೇ ಸೌಲಭ್ಯದ ಪರಿಚಯವೂ ಅವರಿಗಿಲ್ಲ. ಹೋಗಲಿ, ವಾರಕ್ಕೊಂದು ರಜಾ ದಿನವಾದರೂ ಇಲ್ಲ, ದಿನಕ್ಕೆ ಎಂಟು ಗಂಟೆಗಳ ದುಡಿಮೆ ಎಂಬ ಕಾನೂನು ಇವರಿಗೆ ಅನ್ವಯವಾಗಿಲ್ಲ, ಇನ್ನು ಮೆಡಿಕಲ್ ಸೌಲಭ್ಯ ಎಂಬುದು ಕನಸಿನ ಮಾತೇ ಸರಿ. ವಾರದ 7 ದಿನವೂ, ವರ್ಷದ 365 ದಿನವೂ ಇವರ ಜೀತ ತಪ್ಪುವುದಿಲ್ಲ, ಇಷ್ಟೆಲ್ಲಾ ಆದರೂ ಕುದುರೆ ಮಾಲೀಕರಿಂದ, ಅವರ ಗೂಂಡಾಗಳಿಂದ ಒದೆತ, ಬೈಗುಳಗಳು ಮಾಮೂಲಿ.

ಈ ಕುದುರೆ ಕಾರ್ಮಿಕರ ಗೋಳು ಅಷ್ಟಕ್ಕೇ ನಿಲ್ಲುವುದಿಲ್ಲ, ಕುದುರೆಗಳಿಂದ ಒದೆತ ತಿಂದು ಪ್ರಾಣ ಕಳೆದುಕೊಂಡವರು, ಹಲ್ಲು ಮುರಿದುಕೊಂಡವರು, ಕಣ್ಣು ಕಳೆದುಕೊಂಡವರು ಹಲವರಿದ್ದಾರೆ. ಕುದುರೆ ಕಾಲ್ತುಳಿತಕ್ಕೆ ಒಳಗಾಗಿ ಬೆರಳು ಕಳೆದುಕೊಂಡವರಿಗೆ ಇಲ್ಲಿ ಲೆಕ್ಕವೇ ಇಲ್ಲ, ಕಳೆದ ಜನವರಿಯಲ್ಲಿ ಕುದುರೆಯ ಒದೆತಕ್ಕೆ ಜುನೇದ್



ಎಂಬ ಕಾರ್ಮಿಕನ ಕಿಡ್ನಿಗೆ ಬಲವಾದ ಪೆಟ್ಟು ಬಿದ್ದು ಆತ ಸರಿಯಾದ ಚಿಕಿತ್ಸೆಯೂ ಇಲ್ಲದೆ ಅನಾಥವಾಗಿ ಸತ್ತ, ಆತನಿಗಿನ್ನೂ 38ರ ಹರೆಯ. ಆತನನ್ನು ನಂಬಿಕೊಂಡಿದ್ದ ಹೆಂಡತಿ ಮತ್ತು ಇಬ್ಬರು ಪುಟ್ಟ ಮಕ್ಕಳು ಈಗ ಅನಾಥರು. ಇಂಥಾ ಸನ್ನಿವೇಶದಲ್ಲಿ ಕಾರ್ಮಿಕನ ಜೀವಕ್ಕೆ ಮಾಲೀಕರು ಕಟ್ಟಿದ ಬೆಲೆಯೆಷ್ಟು ಗೊತ್ತೆ? ಅಂತ್ಯ ಸಂಸ್ಕಾರದ ಖರ್ಚಿಗೆಂದು 3500 ರೂಪಾಯಿ ಕೊಟ್ಟು ಕೈ ತೊಳೆದುಕೊಳ್ಳಲು ನೋಡಿದರು. ಇಂಥಾ ಘೋರ ಅನ್ಯಾಯವನ್ನು ವಿರೋಧಿಸಿ ಕಾರ್ಮಿಕರು ಪ್ರತಿಭಟಿಸಿದರು. ಆ ಕಾರ್ಮಿಕನ ಕುಟುಂಬಕ್ಕೆ ಸಹಾಯ ನೀಡಬೇಕೆಂಬ ಮಾನವೀಯ ಕಳಕಳಿಯಿಂದ ಚಂದಾ ಸಂಗ್ರಹಣೆಗೆ ಮುಂದಾದರು. ಹೀಗೆ ವಿಷಯ ಬಹಿರಂಗಗೊಂಡು ವಾತಾವರಣ ಬಿಸಿಯೇರುತ್ತಿದ್ದನ್ನು ಕಂಡು ಗಾಬರಿಗೊಂಡ ಆಡಳಿತ ಮಂಡಳಿ ಕಾರ್ಮಿಕನ ಶವವನ್ನು ತರಾತುರಿಯಲ್ಲಿ ಆತನ ಸ್ವಂತ ಊರಾದ ಬಿಹಾರಕ್ಕೆ ವಿಮಾನದಲ್ಲಿ ಕಳಿಸಿಕೊಟ್ಟು ಪ್ರಕರಣವನ್ನು ಮುಚ್ಚಿ ಹಾಕಿಬಿಟ್ಟರು. ಇದು ಇಲ್ಲಿನ ಹಲವು ಕರಾಳ ಕತೆಗಳ ಒಂದು ತುಣುಕು ಮಾತ್ರ.

ಇಲ್ಲಿನ ಬಹುಪಾಲು ಕಾರ್ಮಿಕರು ಬಿಹಾರ್ ಮೂಲದವರಾಗಿದ್ದಾರೆ. ಜೊತೆಗೆ ತಮಿಳು, ಕನ್ನಡ, ತೆಲುಗು ಮುಂತಾದ ಭಾಷಿಕರೂ ಇದ್ದಾರೆ. ಹಲವು ದಶಕಗಳಿಂದ ಈ ಕುದುರೆ ಪಾಲನೆ ಕೆಲಸದಲ್ಲಿ ಸಿಕ್ಕಿಬಿದ್ದಿರುವ ಈ ಕಾರ್ಮಿಕರಿಗೆ ಬೇರೆ ಯಾವ ಕೆಲಸವೂ ಗೊತ್ತಿಲ್ಲ ಅಥವಾ ಇದರಿಂದ ಹೊರಬರುವ ಮಾರ್ಗವೂ ತಿಳಿದಿಲ್ಲ.

ಇದು ರೇಸ್ ಕೋರ್ಸ್‌ನ ಕತ್ತಲ ಮೂಲೆಯ ಕತೆಯಾದರೆ, ಮುಂಭಾಗದ ವೇದಿಕೆಯ ಮೇಲಿನ ಪ್ರದರ್ಶ... ಮತ್ತೊಂದು ಕತೆಯನ್ನು ಹೇಳುತ್ತದೆ. ಜೂಜು ಕುದುರೆಗಳ... ಇಟ್ಟುಕೊಳ್ಳುವುದು ಶ್ರೀಮಂತರಿಗೆ ಒಂದು ಖಯ್ಯಾ... ಮಾತ್ರವಲ್ಲ, ಭಾರೀ ಆದಾಯವನ್ನು ತಂದುಕೊಡು... ದಂಧೆಯೂ ಆಗಿದೆ. ಹೆಂಡದ ದೊರೆ ವಿಜಯ್ ಮ... ಎಂ.ಎ.ಎಂ. ರಾಮಸ್ವಾಮಿ, ಸಿನಿಮಾ ನಟ ಅಂಬರೀಷ... ಉದ್ಯಮಿ ದೀಪಕ್ ಖೈತಾನ್, ರಾಕೇಶ್ ವಾದ್ವಾನ್, ಸೈರ... ಪೂನಾವಾಲಾ ಹೀಗೆ ಹಲವಾರು ಮಾಲಿಕರ ಸುಮಾರು 900 ಕುದುರೆಗಳು ಬೆಂಗಳೂರು ಟರ್ಫ್ ಕ್ಲಬ್... ಆವರಣದಲ್ಲಿವೆ. ಬೆಂಗಳೂರಿನ ಕುದುರೆ ಜೂಜು ಅ... ಇಡೀ ದೇಶದಲ್ಲಿ ಪ್ರಖ್ಯಾತಿ ಗಳಿಸಿದ್ದು ಇಲ್ಲಿ ವರ್ಷ... ಎಲ್ಲಾ ಋತುಗಳಲ್ಲೂ ಕುದುರೆ ಓಟದ ಪಂದ್ಯಗಳ... ನಡೆಯುತ್ತವೆ. ಪ್ರತಿಯೊಂದು ಪಂದ್ಯದಲ್ಲೂ ಅಕ್ರಮವಾ... ಸಕ್ರಮವಾಗಿ ನಡೆಯುವ ಬೆಟ್ಟಿಂಗ್ ವ್ಯವಹಾರದ ಮೊ... ಬರೋಬ್ಬರಿ 5000 ಕೋಟಿಗಳು! ಗೆಲ್ಲುವ ಕುದುರೆಯನ್ನ... ಸೋಲಿಸುವ, ಸೋಲುವ ಕುದುರೆಯನ್ನು ಗೆಲ್ಲಿಸುವ ರೇಸ್... ಫಿಕ್ಸಿಂಗ್ ದಂಧೆಗಳು ಅವ್ಯಾಹತವಾಗಿ ನಡೆಯುತ್ತವೆ. ಕುದು... ಜೂಜಿನ ಅಮಲಿಗೆ ಬಿದ್ದ ಸಾವಿರಾರು ಜನರು ತಮ... ಮನೆ ಮಠ ಕಳೆದುಕೊಂಡು ಬೀದಿಪಾಲಾಗಿದ್ದಾರೆ. ಅದೆಷ್ಟೋ... ಜನ ಆತ್ಮಹತ್ಯೆಗೆ ಶರಣಾಗಿದ್ದಾರೆ. ಆದರೆ ಈ ದಂಧೆಯ... ಸೂತ್ರದಾರರಿಗೆ ಇದು ಹಣದ ಹೊಳೆಯನ್ನೇ ಹರಿಸುತ್ತ... ಕ್ರಿಕೆಟ್ ಲೋಕಕ್ಕೆ ಕಾಲಿಟ್ಟಿರುವ ಬುಕಿಂಗ್ ದಂಧೆ ಮೂಲ...

ಚಿತ್ರದುರ್ಗ: ರುದ್ರಾಣಿ ರಾದ್ಧಾಂತದ ಹಿಂದೆ ಬಸವರಾಜನ್ ಕೈವಾಡ

ಚಿತ್ರದುರ್ಗ ನಗರ ಸಭೆಯ ರಾದ್ಧಾಂತ ಬೀದಿಗೆ ಬಿದ್ದಿದೆ. ಇದು ಶಾಸಕ ಬಸವರಾಜನ್ ಮೈ ಮೇಲೆಳೆದು ಕೊಂಡಿರುವ ರಾದ್ಧಾಂತ.

ಬಸವರಾಜನ್ ಚಿತ್ರದುರ್ಗ ರಾಜಕಾರಣಕ್ಕೆ ಆಕಸ್ಮಿಕವಾಗಿಯೇ ಎಂಟ್ರಿ ಕೊಟ್ಟವನು. ಚಿತ್ರದುರ್ಗದ ಮುರುಘಾಮಠದ ಆಡಳಿತಾಧಿಕಾರಿಯಾಗಿದ್ದ ಬಸವರಾಜನ್ ಅಲ್ಲಿಂದ ಹೊರ ಬಂದ ನಂತರ ರಾಜಕೀಯ ಆಶ್ರಯವನ್ನು ಅನಿವಾರ್ಯವಾಗಿ ಅಪ್ಪಿಕೊಂಡವನು. ಮಠದಲ್ಲಿರುವಾಗಲೇ ದುಡ್ಡು-ಹೆಸರು ಮಾಡಿದ ಬಸವರಾಜನ್ ತನ್ನ ಧರ್ಮಪತ್ನಿ ಸೌಭಾಗ್ಯ ಬಸವರಾಜನ್‌ರನ್ನೇ ಮೊದಲು ರಾಜಕೀಯ ಪಡಸಾಲೆಗೆ ಬಿಟ್ಟರು. ಚಿತ್ರದುರ್ಗ ಜಿಲ್ಲಾ ಪಂಚಾಯತಿ ಅಧ್ಯಕ್ಷೆಯಾದ ಸೌಭಾಗ್ಯ ಬಸವರಾಜನ್ ಭರಪೂರ ಮೆರೆದುಬಿಟ್ಟರು. ಹೆಂಡತಿಯ ಅಧಿಕಾರವಧಿಯನ್ನೇ ತನ್ನ ರಾಜಕೀಯ ಬದುಕಿಗೆ ಬುನಾದಿಯಾಗಿ ಉಪಯೋಗಿಸಿ ಕೊಂಡ ಬಸವರಾಜನ್ ವಿಧಾನಸಭಾ ಚುನಾವಣೆಗೆ ಪಾದಾರ್ಪಣೆ ಮಾಡಿ ಗೆದ್ದು ಶಾಸಕನಾದ.

ಮುರುಘಾಮಠದ ಆಡಳಿತಾಧಿಕಾರಿಯಾಗಿ ಬಸವರಾಜನ್ ಮೆರೆದಿದ್ದ ಸರ್ವಾಧಿಕಾರಿ ಧೋರಣೆಯನ್ನೇ ಶಾಸಕನಾಗಿ ಮುಂದುವರೆಸಿದ. ಜಿಲ್ಲೆಯ ರಾಜಕಾರಣವನ್ನು ತನ್ನ ಮುಷ್ಠಿಯಲ್ಲಿ ಮುದುರಿಟ್ಟುಕೊಳ್ಳುವ ಆತನ ದುಸ್ಸಾಹಸಗಳೆಲ್ಲಾ ಈಗ ಉಲ್ಟಾ ಹೊಡೆಯುತ್ತಿವೆ. ಕಳೆದ ಸೋಮವಾರ ಆದದ್ದು ಅದೇ.


ಚಿತ್ರದುರ್ಗ ನಗರಸಭೆಯಲ್ಲಿ ಬಸವರಾಜನ್ ಹುಟ್ಟು ಹಾಕಿದ ರಾಜಕೀಯ ನಾಟಕವೇ ರುದ್ರಾಣಿಯ ರುದ್ರಾವತಾರಕ್ಕೆ ಕಾರಣವಾಯಿತು. ನಗರಸಭೆಯಲ್ಲಿ ಜೆ.ಡಿ.ಎಸ್.ನ 17 ಸದಸ್ಯ ಬಲದಲ್ಲೇ ಅಧಿಕಾರ ನಡೆದಿದೆ. ಸುನಿತಾ ಮಲ್ಲಿಕಾರ್ಜುನ ಅಧ್ಯಕ್ಷರಾಗಿದ್ದಾರೆ. ಸುನಿತಾ ಮಲ್ಲಿಕಾರ್ಜುನ ಪಳಗಿದ ರಾಜಕಾರಣಿಯಲ್ಲದಿದ್ದರೂ ಸ್ವಚ್ಛ ಆಡಳಿತ ನೀಡುವವರು. ಬಸವರಾಜನ್ ಮಾರ್ಗದರ್ಶನದಲ್ಲೇ ಈಕೆ ಅಧಿಕಾರ ನಡೆಸಿದ್ದು ಬಹಿರಂಗ ಸತ್ಯ. ಈ ನಡುವೆ ಅದೇನಾಯಿತೋ ಯಾರಿಗೂ ಗೊತ್ತಿಲ್ಲ, ಅಧ್ಯಕ್ಷೆ ಸುನಿತಾ ಮಲ್ಲಿಕಾರ್ಜುನ ಮತ್ತು ಬಸವರಾಜನ್ ನಡುವೆ ರಾಜಕೀಯ ವೈಮನಸ್ಸು ಭುಗಿಲೆದ್ದಿತು. ಹಾಗಾಗಿಯೇ ಅಧ್ಯಕ್ಷೆಯ ವಿರುದ್ಧ ಅವಿಶ್ವಾಸ ಮಂಡನೆಯಾಯಿತು. 17 ಜನ ಜೆ.ಡಿ.ಎಸ್. ನಗರಸಭಾ ಸದಸ್ಯರಿಗೆ ಅಧ್ಯಕ್ಷೆ ವಿರುದ್ಧ ಮತ ಚಲಾಯಿಸುವ ವಿಪ್ ಜಾರಿ ಮಾಡಿದ ಬಸವರಾಜನ್. ಆದರೆ ನಡೆದದ್ದೇ ಬೇರೆ. 17 ಜನರ ಪೈಕಿ 9 ಜನ ಸದಸ್ಯರು ಸುನಿತಾ ಪರವಾಗಿಯೇ ಮತ ಚಲಾಯಿಸಿದರು. ಸುನಿತಾ ವಿರುದ್ಧ ಅವಿಶ್ವಾಸ ಬಿದ್ದು ಹೋಗಿ ಬಸವರಾಜನ್‌ಗೆ



ಬಸವರಾಜನ್



ಕಾಂತರಾಜ್



ರೆಡ್ಡಿ



ರುದ್ರಾಣಿ



ಸುನೀತ

ಮುಖಭಂಗವಾಯಿತು. ಇದು ನಡೆದ ಘಟನೆ.

ಇದಕ್ಕು ಮುನ್ನ ಏನಾಗಿತ್ತೆಂದರೆ ರುದ್ರಾಣಿ ಗಂಗಾಧರ ಎಂಬ ನಗರಸಭಾ ಸದಸ್ಯೆ ಮತ್ತು ಬಸವರಾಜನ್ ನಡುವೆ ಒಂದು ಒಪ್ಪಂದವಾಗಿತ್ತು, ಸುನಿತಾರನ್ನು ಅಧ್ಯಕ್ಷೆ ಸ್ಥಾನದಿಂದ ಇಳಿಸಿ ರುದ್ರಾಣಿಯನ್ನು ಕೂರಿಸುವ ಸಂಬಂಧ ಮಾತುಕತೆ ನಡೆದಿತ್ತು, ಆ ನಿಟ್ಟನಲ್ಲಿ ಬಸವರಾಜನ್ ಅವರ ಆದೇಶದಂತೆ ರುದ್ರಾಣಿ ನಗರ ಸಭಾ ಸದಸ್ಯರಿಗೆ ಹಣ ಹಂಚಿದ್ದಳು. ಆದರೆ ಸುನಿತಾ ವಿರುದ್ಧದ ಅವಿಶ್ವಾಸ ಮತ ಬಿದ್ದುಹೋಗಿದ್ದರಿಂದ ರುದ್ರಾಣಿ ಕಂಗಾಲಾದಳು. ಇತ್ತ ಅಧಿಕಾರವೂ ಸಿಗಲಿಲ್ಲ, ಕೈಯಲ್ಲಿ ದುಡ್ಡೂ ಉಳಿಯಲಿಲ್ಲ ಎನ್ನುವ ಅಡ್ಡಕತ್ತರಿಯಲ್ಲಿ ಸಿಕ್ಕಿಕೊಂಡು ಕಂಗಾಲಾದಳು. ಅದರ ಪರಿಣಾಮವೇ ಬುಧವಾರ ಮುಂಜಾನೆ ನಡೆದ ನಾಚಿಕೆಗೇಡಿತನದ ರಾದ್ಧಾಂತ!

ಅಧ್ಯಕ್ಷೆಯಾಗುವ ಭರದಲ್ಲಿ ರುದ್ರಾಣಿ ಗಂಗಾಧರ ದುಡ್ಡಿನ ವ್ಯವಹಾರಕ್ಕಿಳಿದಳು. ಆಕೆಯನ್ನು ಅಧ್ಯಕ್ಷೆ ಸ್ಥಾನದಲ್ಲಿ ಕೂರಿಸುವುದಾಗಿ ಕಾಂತರಾಜ ಎನ್ನುವ ತರಹೇವಾರಿ ರಾಜಕಾರಣಿ ಮತ್ತು ಬಸವರಾಜನ್ ಸೇರಿಯೇ ರುದ್ರಾಣಿಗೆ ಭರವಸೆ ನೀಡಿದ್ದರು. ರುದ್ರಾಣಿ ಗಂಗಾಧರ್ ಇವರನ್ನು ನಂಬಿ ಅಜಮಾಸು 40 ಲಕ್ಷದ ವ್ಯವಹಾರ ನಡೆಸಿದಳು. ಹಾಗಂತ ಇಡೀ 40 ಲಕ್ಷವನ್ನು ಆಕೆ ನೀಡಿಲ್ಲ, ಕಾಂತರಾಜ ಎಂಬ ಇದೇ ನಗರಸಭೆಯ ಮಾಜಿ ಅಧ್ಯಕ್ಷನೇನು ಸಾಮಾನ್ಯದವನಲ್ಲ, ಈತ ಬಸವರಾಜನ್‌ನ ಪರಮ ಶಿಷ್ಯ. ಅಷ್ಟೇ ಏಕೆ, ಇವನು ಅಧ್ಯಕ್ಷನಾಗಿದ್ದಷ್ಟು ದಿನವೂ ಚಿತ್ರದುರ್ಗ ನಗರಸಭೆ ಉದ್ಧಾರವಾಗಲಿಲ್ಲ. ಹಾಗೆ ನೋಡಿದರೆ ಈ ಕಾಂತರಾಜ ಯಾವ ಪಾರ್ಟಿಗೆ ನಿಷ್ಠನೆಂಬುದೇ ಜನರಿಗೆ ಅನುಮಾನ. ಬಹುಶಃ ಅವನಿಗೂ ಅನುಮಾನ.

ಈ ವ್ಯವಹಾರದಲ್ಲಿ ಇದೇ ಕಾಂತರಾಜನಿಗೆ ರುದ್ರಾಣಿ ಗಂಗಾಧರ 8 ಲಕ್ಷದ ಇಡಗಂಟು ನೀಡಿದ್ದಳು. ಅದೇ 40 ಲಕ್ಷದ ಮಾತುಕತೆಯಾಗಿತ್ತಂತೆ. 8 ಲಕ್ಷ ಕ್ಯಾಶ್, ಉಳಿದಂತೆ ಚೆಕ್ಕುಗಳ ವ್ಯವಹಾರ ನಡೆದಿದೆ. ಆದರೆ ಯಾವಾಗ

ಸೋಮವಾರ ಅಧ್ಯಕ್ಷರ ವಿರುದ್ಧದ ಅವಿಶ್ವಾಸ ಮತ... ಮಲಗಿ ಸುನಿತಾ ಪರವಾಯಿತೋ ಆಗಲೇ ರುದ್ರಾಣಿಯ... ರುದ್ರನರ್ತನ ಶುರುವಾದದ್ದು. ಬುಧವಾರವೇ ರುದ್ರಾ... ಗಂಗಾಧರ ಎಂಬ ಶಾಮಿಯಾನ ಗಿರಾಕಿ ನಗರಸಭಾ ಸದ... (ಜೆ.ಡಿ.ಎಸ್) ರಘುರಾಮ ರೆಡ್ಡಿ ಮನೆ ಮುಂದೆ ರಾದ್ಧಾ... ಮಾಡುವ ಮೂಲಕ ತನ್ನ ಅಧಿಕಾರ ದಾಹವನ್ನೆಲ್ಲ ಕ... ಬಿಟ್ಟಳು. ಅಧ್ಯಕ್ಷೆಯಾಗುವ ಭರದಲ್ಲಿ ರುದ್ರಾಣಿ ಹಂಚಿ... ದುಡ್ಡು ಮತ್ತು ಚೆಕ್ಕುಗಳು ವಾಪಸ್ ಬರುವ ಲಕ್ಷಣಗಳ... ಕಾಣದಂತಾದಾಗ ತಾನು ಅಧ್ಯಕ್ಷೆಯಾಗುವುದನ್ನು ತಪ್ಪಿಸಿ... ರಘುರಾಮ ರೆಡ್ಡಿಯ ಮನೆನುಗ್ಗಿ ರಾದ್ಧಾಂತ ಮಾಡಿದಳ... ರಘುರಾಮ ರೆಡ್ಡಿಯ ಮೇಲೆ ಕೆಂಡಕಾರುವ, ಮರ್ಯಾ... ಕಳೆಯುವ ರುದ್ರಾಣಿಯ ಹತಾಶ ದುಡುಕಿನ ಹಿಂ... ಶಾಸಕ ಬಸವರಾಜನ್ ಮತ್ತು ಕಾಂತರಾಜನ ಹುನ್ನಾರವಿ...

ರುದ್ರಾಣಿಗೆ ದುಡ್ಡು ಹಂಚಿ ಅಧ್ಯಕ್ಷಗಿರಿ ಖರೀದಿಸ... ಸಲಹೆ ನೀಡಿದವರೇ ಬಸವರಾಜನ್ ಮತ್ತು ಕಾಂತರಾ... ಇವರಿಬ್ಬರ ಮನೆ ಮುಂದೆ ರಾದ್ಧಾಂತ ಮಾಡುವುದ... ಬಿಟ್ಟು ರಘುರಾಮ ರೆಡ್ಡಿಯ ಮನೆ ಮುಂದೇ... ಮಾಡಿದಳೆಂಬುದೇ ಅನುಮಾನ. ಹಾಗೆ ನೋಡಿದ... ರುದ್ರಾಣಿ ಹಣ ಹಂಚಿದ್ದು ರಘುರಾಮ ರೆಡ್ಡಿಗೂ ಗೊತ್ತ...

ಮರೆ ಜೂಜಿನಿಂದ ಬಂದದ್ದು.

ಬದುಕು ಸಾಗಿಸುವುದೇ ದುರ್ಭರವಾಗಿರುವ ಕಾರ್ಮಿಕರು ಕಳೆದ ನವರಿಯಲ್ಲಿ "ಕರ್ನಾಟಕ ರೇಸ್ ಕುದುರೆ ಕಾರ್ಮಿಕರ ಕ್ಷೇಮಾಭಿವೃದ್ಧಿ ಘ" ಎಂಬ ರಿಜಿಸ್ಟರ್ಡ್ ಸಂಘವೊಂದನ್ನು ಮಾಡಿಕೊಂಡಿದ್ದಾರೆ. ಈ ಸಂಘದ ಯಿಂದ ಮಾಲಿಕರಿಗೆ ತಮ್ಮ ಬೇಡಿಕೆಗಳನ್ನು ಸಲ್ಲಿಸಿದ್ದಾರೆ. ಆ ಬೇಡಿಕೆಗಳಾದರೂ ಥದ್ದು? ನೀವೇ ನೋಡಿ. ಸರ್ಕಾರ ನಿಗದಿ ಗೊಳಿಸಿರುವ ಕನಿಷ್ಠ ಕೂಲಿ ಗಳಿಗೆ 7000 ರೂ. ವಾರಕ್ಕೊಂದು ದಿನ ರಜೆ, ದಿನಕ್ಕೆ ಎಂಟು ಗಂಟೆಯ ಸ, ಜೊತೆಗೆ ಇಎಸ್‌ಐ, ಪಿಎಫ್ ಸೌಲಭ್ಯ ಇತ್ಯಾದಿ. ಫೆಬ್ರವರಿ 14 ದು ಬಾಯಿಮಾತಿನಲ್ಲಿ ಒಪ್ಪಿಕೊಂಡ ಆಡಳಿತ ಮಂಡಳಿಯವರು ಮರುದಿನ ತಾರೀಖು ಒಪ್ಪಂದಕ್ಕೆ ಸಹಿ ಹಾಕುವ ಸಂದರ್ಭದಲ್ಲಿ ಉಲ್ಟಾ ಹೊಡೆದರು.

ಈ ಮೋಸವನ್ನು ಪ್ರಶ್ನಿಸಿದ ಕಾರ್ಮಿಕ ಮುಖಂಡರ ಮೇಲೆ ಹೊರಗಿನಿಂದ ಸಿದ್ಧ ವೃತ್ತಿಪರ ಗೂಂಡಾಗಳಿಂದ ದಾಳಿ ಮಾಡಿಸಿದರು. ಅಷ್ಟು ಸಾಲದೆಂಬಂತೆ ಗ್ರೌಂಡ್ಸ್ ಪೊಲೀಸರಿಗೆ ದೂರು ಕೊಟ್ಟು ಸುಮಾರು 26 ಕಾರ್ಮಿಕರನ್ನು ಧಿಸಿ, ಕೊಲೆ ಪ್ರಯತ್ನದ ಕೇಸು ಜಡಿಸಿದರು. ಹೈಗ್ರೌಂಡ್ಸ್ ಠಾಣೆಯ ಸ್ಪೆಕ್ಟರ್ ಹನುಮಂತರಾಯಪ್ಪ ಎಂಬ ಖೂಳ ಅಮಾಯಕ ಕಾರ್ಮಿಕರನ್ನೇ ಸಿಸಿ, ಹುರುಳೇ ಇಲ್ಲದ ಆರೋಪ ಹೊರಿಸಿ ಕೊಲೆ ಕೇಸು ಖಲಿಸುತ್ತಾನೆಂದರೆ ಈ ಪಾಪಿ ಅಧಿಕಾರಿಗೂ ಕುದುರೆ ಜೂಜು ದಂಧೆಗೂ ಥಾ ಅವಿನಾಭಾವ ಸಂಬಂಧವಿರಬೇಕು ಎಂಬುದನ್ನು ನೀವೇ ಊಹಿಸಿ. ಭ್ರಷ್ಟ ಅಧಿಕಾರಿಯ ಮೇಲೆ ಈಗಾಗಲೇ ಮಾನವ ಹಕ್ಕು ಆಯೋಗಕ್ಕೆ ಾರು ದಾಖಲಾಗಿದ್ದು ವಿಚಾರಣೆ ಬಾಕಿ ಉಳಿದಿದೆ.

ಒಂದುಕಡೆ ಗೂಂಡಾಗಳ ದಾಳಿ, ಮತ್ತೊಂದು ಕಡೆ ಪೊಲೀಸರ ದಾಳಿಗಳಿಂದ ಭಯಭೀತಗೊಂಡ ಕಾರ್ಮಿಕರು ಈಗ ಪಾರ್ಕ್‌ಗಳಲ್ಲೋ, ದೇವಸ್ಥಾನ ಅಥವಾ ಸೀದಿಗಳಲ್ಲೋ ಕಾಲಕಳೆಯಬೇಕಾದ ದುಸ್ಥಿತಿಯಲ್ಲಿದ್ದಾರೆ.

ಈ ಕಾರ್ಮಿಕರ ಗೋಳು ದಿನಾಲೂ ಅದೇ ರಸ್ತೆಯಲ್ಲಿ ಅಡ್ಡಾಡುವ ಮುಖ್ಯಮಂತ್ರಿಯ ಕಣ್ಣಿಗೋ, ಕಾರ್ಮಿಕ ಮಂತ್ರಿಯ ಕಣ್ಣಿಗೋ ಅಥವಾ ಕಾರ್ಮಿಕ ಅಧಿಕಾರಿಗಳ ಕಣ್ಣಿಗೋ ಎಂದೂ ಬೀಳಲೇ ಇಲ್ಲ. ಆದರೆ ಅದೃಷ್ಟವಶಾತ್ ಆ ಮಾರ್ಗವಾಗಿ ಪಯಣಿಸುತ್ತಿದ್ದ ಬಾಲನ್ ಎಂಬ ವಕೀಲರ ಕಣ್ಣಿಗೆ ಬಿತ್ತು. ಕಾರ್ಮಿಕ ಸಂಘಟನೆಯ ಮುಖಂಡರೂ ಆಗಿರುವ ಬಾಲನ್ ಈಗ ಕುದುರೆ ಕಾರ್ಮಿಕರ ಪರವಾಗಿ ನಿಂತಿದ್ದಾರೆ. ಹಲವಾರು ಸುತ್ತಿನ ಮಾತುಕತೆಯ ನಂತರ ಅಂತಿಮವಾಗಿ ಟರ್ಫ್ ಕ್ಲಬ್‌ಗೆ ಮುಷ್ಕರದ ನೋಟೀಸ್ ನೀಡಲಾಗಿದೆ.

ಈಗ ಮತ್ತೊಂದು ವಿಚಿತ್ರವಾದ ಸಮಸ್ಯೆ ಎದುರಾಗಿದೆ. ಅದೇನೆಂದರೆ ಇಷ್ಟು ವರ್ಷ ದುಡಿದ ಕಾರ್ಮಿಕರಿಗೆ ತಮ್ಮ ಮಾಲೀಕ ಯಾರು ಎಂಬುದೇ ಗೊತ್ತಿಲ್ಲ. ಕ್ಲಬ್‌ನವರು ಒಂದು ಕಡೆ, ಮತ್ತೊಂದು ಕಡೆ ಕುದುರೆ ಮಾಲೀಕರು ತಮ್ಮ ಜವಾಬ್ದಾರಿಯನ್ನು ಬೇರೆಯವರ ಮೇಲೆ ದಾಟಿಸಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೀಗಾಗಿ ಕಾರ್ಮಿಕರು ತಮ್ಮ ನಿಜವಾದ ಮಾಲೀಕ ಯಾರು ಎಂಬುದು ನಿಷ್ಕರ್ಷೆಯಾಗಬೇಕು ಎಂಬ ಮತ್ತೊಂದು ಡಿಮ್ಯಾಂಡನ್ನೂ ಇರಿಸಿದ್ದಾರೆ.

ಇಷ್ಟೆಲ್ಲಾ ನಡೆಯುತ್ತಿರುವುದು ವಿಧಾನ ಸೌಧದಿಂದ ಕೂಗಳತೆ ದೂರದಲ್ಲಿ, ಮುಖ್ಯಮಂತ್ರಿಯ ಅಧಿಕೃತ ನಿವಾಸದ ಎದುರು ರಸ್ತೆಯಲ್ಲೇ ಇರುವ ರೇಸ್ ಕೋರ್ಸಿನಲ್ಲಿ, ಇದೆಂಥಾ ವಿಪರ್ಯಾಸವಲ್ಲವೆ? ಈ ವ್ಯವಸ್ಥೆಯ ಕ್ರೌರ್ಯಕ್ಕೆ ಇದಕ್ಕಿಂಥಾ ಬೇರೆ ಯಾವ ಉದಾಹರಣೆ ಸಿಗಬಹುದು?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ತ "ಹಂಚ ಬೇಡಿ" ಎಂದಿದ್ದಾನೆ. ಯಾವಾಗ ಅವಿಶ್ವಾಸ ಸೋತಿತೋ ಆಗ ರುದ್ರಾಣಿ ರೆಡ್ಡಿಯೆದುರು ತಾನು 40 ಲಕ್ಷ ಕಳಕೊಂಡದ್ದರ ಬಗ್ಗೆ ಳೋ ಎಂದಿದ್ದಾಳೆ. ರೆಡ್ಡಿ "ನೀವು ಹಣ ಕೊಡಬಾರದಿತ್ತು, ಅದನ್ನು ವಾಪಸ್ ಕೊಡಿಸಲು ಪ್ರಯತ್ನಿಸುತ್ತೇನೆ" ಎಂದು ಭರವಸೆ ನೀಡಿದ್ದಾರೆ. ದರೂ ಈಕೆ ರೆಡ್ಡಿ ಮನೆಯೆದುರು ರಾದ್ಧಾಂತ ಮಾಡಿದ್ದು ಒಂದು ಪೂರ್ವಯೋಜಿತ ಪ್ಲಾನ್ ನಂತೆ ಕಾಣಿಸುತ್ತಿದೆ.

ರುದ್ರಾಣಿ ಓರ್ವ ಊಸರವಳ್ಳಿ ರಾಜಕಾರಣಿ. ಬಸವರಾಜನ್ ಉಗುಳಿದರೂ ಟದಷ್ಟು ನಿಷ್ಠೆ, ಜಾತಿ ಪ್ರೀತಿ ಈಕೆಯದು. ರಘುರಾಮ ರೆಡ್ಡಿ ಈಕೆಯ ಡ್ಡು ತಿನ್ನದಿದ್ದರೂ ಆತನ ಮನೆ ಮುಂದೆ ರಾದ್ಧಾಂತ ಮಾಡಿದಳೆಂದರೆ ದು ಬಸವರಾಜನ್ ಸೃಷ್ಟಿಸಿದ ರಾದ್ಧಾಂತ ಎಂದು ಅರ್ಥೈಸಬೇಕು. ರಘುರಾಮ ಡ್ಡಿ ಜೆ.ಡಿ.ಎಸ್. ಸದಸ್ಯನಾದರೂ ಬಸವರಾಜನ್‌ನ ಸರ್ವಾಧಿಕಾರಿ ೋರಣೆಯನ್ನು ವಿರೋಧಿಸುತ್ತಲೇ ಬಂದವನು. ಮುಂಬರುವ ವಿಧಾನ ಭಾ ಚುನಾವಣೆಯಲ್ಲಿ ಬಸವರಾಜನ್ ಮಕಾಡೆ ಮಲಗುವುದು ್ಯಾರಂಟಿಯಾಗಿದೆ. ರಘುರಾಮ ರೆಡ್ಡಿ ಮಾತ್ರವಲ್ಲ, ಜೆ.ಡಿ.ಎಸ್‌ನ ಕಾರ್ಯಕರ್ತರೆ ವರ ವಿರುದ್ಧ ಇದ್ದಾರೆ. ತನ್ನ ವಿರುದ್ಧದ ಎಲ್ಲ ಮಸಲತ್ತಿಗೂ ಈ ರೆಡ್ಡಿಯೇ ಮೂಲಕಾರಣ ಎನ್ನುವ ಗುಮಾನಿ ಬಸವರಾಜನ್‌ನ ಎದೆಯಲ್ಲಿ ಕೊತಗುಟ್ಟುತ್ತಿದೆ. ಾಗಾಗಿಯೇ ರುದ್ರಾಣಿಯನ್ನು ದಾಳವಾಗಿ ಬಳಸಿಕೊಂಡಿದ್ದಾನೆ.

ಹೋಗಲಿ, ರುದ್ರಾಣಿ ರೆಡ್ಡಿಗೆ ಹಣ ಕೊಟ್ಟಿದ್ದರೆ ಆತ ರುದ್ರಾಣಿಯ ರವಾಗಿರಬೇಕಿತ್ತು, ಆತ ಮೊದಲೇ ಹೇಳಿದ್ದ "ಯಾರಿಗೂ ದುಡ್ಡುಕೊಡಬೇಡಿ" ಂದು. ಏನೇ ಆಗಲಿ ಬಸವರಾಜನ್ ಹತಾಶನಾಗಿದ್ದಾನೆ. ಈಗ ರೆಡ್ಡಿಯ ರುದ್ಧ ನಡೆದಿರುವ ಆರೋಪ ಆರಂಭ ಮಾತ್ರ. ರುದ್ರಾಣಿಯಾದರೂ 40 ಕ್ಷ ನೀಡಿ ಅಧ್ಯಕ್ಷೆಯಾಗಿದ್ದರೆ ನಗರಸಭೆಯೊಳಗೆ ಅದ್ಯಾವ ಖುರ್ಚಿ ಟೇಬಲ್ಲುಗಳು ಳಿಯುತ್ತಿದ್ದವು? ಲಂಚ ಕೊಟ್ಟು ಅಧ್ಯಕ್ಷೆಯಾದರೆ ವೆಚ್ಚ ಮಾಡಿದ ಹಣವನ್ನಲ್ಲದೆ ದನ್ನು ಬಡ್ಡಿ ಸಮೇತ ವಸೂಲಿ ಮಾಡಲು ಆಕೆ ಅದ್ಯಾವ ಪರಿಯ ್ಯಾಟಕ್ಕೆ ಕೈ ಹಾಕಬಹುದಿತ್ತು ಎಂದು ಯೋಚಿಸಿದರೆ ಆಘಾತವಾಗುತ್ತದೆ.

ಅದೇನೆ ಇರಲಿ, ಆಕೆ ರೆಡ್ಡಿಗೆ ಹಣ ನೀಡಿದ್ದು ಖರೆಯಾದರೆ ಅದನ್ನು ಸೂಲಿ ಮಾಡುವ ವಿಧಾನಗಳಿವೆ ಎಂಬುದು ಎಂಥವರಿಗೂ ಗೊತ್ತು, ದರೆ ರುದ್ರಾಣಿ ರೆಡ್ಡಿಯ ಮನೆಯ ಮೇಲೆ ದಾಳಿ ಮಾಡುವಾಗ ತನ್ನೊಂದಿಗೆ ್ಕೆ, ಮಾಧ್ಯಮದವರನ್ನೂ ಕರೆದುಕೊಂಡು ಹೋಗಿದ್ದರ ಉದ್ದೇಶವೇನು?


ಈ ರಾದ್ಧಾಂತ ನಡೆದಾಗಿನಿಂದಲೂ ಚಿತ್ರದುರ್ಗದ ಮಂದಿ ಬಸವರಾಜನ್‌ನ ಕಡೆಗೆ ನೋಡುತ್ತಾ "ಇದೆಲ್ಲ ನಿನಗೆ ಬೇಕಿತ್ತಾ ಬಸವರಾಜನ್?" ಎಂದು ಲಿ ಮಾಡುತ್ತಿರುವುದು ಸುಳ್ಳಲ್ಲ!

● ಟಿ.ಎಸ್.ಷಣ್ಮುಖ

ವಿಧಾನ ಪರಿಷತ್ ಚುನಾವಣೆ: ಬಂಡಾಯದ ಭರ್ಜರಿ ಆಟ


ವಿಧಾನ ಪರಿಷತ್ ಚುನಾವಣೆ ಬಗ್ಗೆ ಜನಸಾಮಾನ್ಯರಿಗೆ ಅಷ್ಟೊಂದು ಆಸಕ್ತಿ ಇಲ್ಲದಿದ್ದರೂ ಅಧಿಕಾರದಲ್ಲಿರುವ ಬಿಜೆಪಿ ಪಕ್ಷ ಮತ್ತು ವಿರೋಧ ಪಕ್ಷವಾದ ಕಾಂಗ್ರೆಸ್‌ನಲ್ಲಿ ಈ ಚುನಾವಣೆ ತಳಮಳ ಹುಟ್ಟುಹಾಕಿದೆ.

ಈ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೊದಲೇ ಬಿಜೆಪಿಯ ರೆಬೆಲ್ ಸ್ಟಾರ್ ಯಡಿಯೂರಪ್ಪ "ಈ ಚುನಾವಣೆಯಲ್ಲಿ ಬಿಜೆಪಿ ಸೋಲುತ್ತದೆ" ಎಂಬ ಭವಿಷ್ಯ ನುಡಿದಿದ್ದರು. ಆದರೆ ಯಾವಾಗ ಪಕ್ಷದ ಹೈಕಮಾಂಡ್ ಯಡ್ಡಿ ಸೂಚಿಸಿದ ಮೂರು ಅಭ್ಯರ್ಥಿಗಳಾದ ಬಿ.ಜೆ.ಪುಟ್ಟಸ್ವಾಮಿ, ಡಿ.ಎಸ್.ವೀರಯ್ಯ ಮತ್ತು ಸೋಮಣ್ಣ ಬೇವಿನಮರದ ಇವರುಗಳಿಗೆ ಟಿಕೇಟ್ ನೀಡಿತೋ ಆಗ ಯಡ್ಡಿ ತಮ್ಮ ಎಲ್ಲಾ ಬಂಡಾಯ ಚಟುವಟಿಕೆಗಳಿಗೆ ತಾತ್ಕಾಲಿಕವಾಗಿ ವಿರಾಮ ಘೋಷಿಸಿ ಈಗ ಮೌನವಾಗಿದ್ದಾರೆ.


ಕಾಂಗ್ರೆಸ್ ಸದಸ್ಯರು


ಬಿಜೆಪಿ ಪಕ್ಷದಲ್ಲಿ ಈ ರೀತಿಯ ಹೊಂದಾಣಿಕೆ ನಡೆದಿದ್ದರೆ ಕಾಂಗ್ರೆಸ್‌ನಲ್ಲಿ ದೊಡ್ಡ ಜಗಳವೇ ನಡೆದಿದೆ. ವಿಧಾನ ಪರಿಷತ್ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ತನ್ನ ಸಲಹೆಯನ್ನು ಕೇಳಿಲ್ಲ ಎಂದು ಗುಡುಗಿದ ಸಿದ್ಧರಾಮಯ್ಯ ತಮ್ಮ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ರಾಜೀನಾಮೆಯನ್ನು ಬಿಸಾಕಿದ್ದಾರೆ. ಅಷ್ಟೇ ಅಲ್ಲ, ತನ್ನ ಅನುಯಾಯಿ ಬೈರತ್ತಿ ಸುರೇಶ್ ಅವರನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿಸಿ ತನ್ನ ಶಕ್ತಿ ಪ್ರದರ್ಶನ ಮಾಡಲು ಹೊರಟಿದ್ದಾರೆ.

ಇದೇ ಜೂನ್ ಹನ್ನೊಂದರಂದು ಹನ್ನೊಂದು ಸ್ಥಾನಗಳಿಗೆ ನಡೆಯಲಿರುವ ಈ ಚುನಾವಣೆಯಲ್ಲಿ ಬಿಜೆಪಿ ಆರು ಅಭ್ಯರ್ಥಿಗಳನ್ನು ನಿಲ್ಲಿಸಿದ್ದರೆ ಕಾಂಗ್ರೆ ನಾಲ್ಕು ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಜೊತೆಗೆ ಜನತಾ ದಳ ಓರ್ವ ಅಭ್ಯರ್ಥಿಯನ್ನು ಚುನಾವಣಾ ಕಣಕ್ಕೆ ಇಳಿಸಿದೆ. ಇವರೆಲ್ಲರ ಮಧ್ಯೆ ಒಬ್ಬರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.


ಬಿಜೆಪಿ ಸದಸ್ಯರು

ಬಿಜೆಪಿಯಿಂದ ಸ್ಪರ್ಧಿಸಿರುವ ಆರು ಜನರಲ್ಲಿ ಪುಟ್ಟಸ್ವಾಮಿ, ವೀರಯ್ಯ ಮತ್ತು ಸೋಮಣ್ಣ ಬೇವಿನಮರದ ಯಡ್ಡಿಯ ಬಣದವರಾದರೆ, ವಿಮಲಾ ಗೌಡ, ರಘುನಾಥ ರಾವ್ ಮಲ್ಕಾಪುರೆ ಮತು ಎಂ.ಬಿ.ಭಾನುಪ್ರಕಾಶ್ ಅವರುಗಳು ಮುಖ್ಯಮಂತ್ರಿ ಸದಾನಂದ ಗೌಡರ ಬಣದವರು. ವರ್ತೂರು ಪ್ರಕಾಶ್, ಸ್ಪೀಕರ್ ಬೋಪಯ್ಯ ಮತ್ತು ನೇಮಕಗೊಂಡಿರುವ ಓರ್ವ ಶಾಸಕನನ್ನು ಹೊರತುಪಡಿಸಿದರೆ ಬಿಜೆಪಿಗೆ ವಿಧಾನ ಸಭೆಯಲ್ಲಿರುವ ಸಂಖ್ಯಾಬಲ 119. ಬಿಜೆಪಿ ಪಕ್ಷ ಆರು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದ್ದರೂ ಆ ಪಕ್ಷದಲ್ಲೀಗ ಆಂತರಿಕ ಕಲಹ ನಡೆಯುತ್ತಿರುವುದರಿಂದ ಒಂದು ಸ್ಥಾನವನ್ನು ಕಳೆದುಕೊಂಡರೂ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ಇದಕ್ಕೆ ಕಾರಣವೂ ಇದೆ. ಮುಖ್ಯವಾಗಿ ಯಡ್ಡಿ ಬಣದ ಪುಟ್ಟಸ್ವಾಮಿಯನ್ನು ಸೋಲಿಸಲೇಬೇಕೆಂದು ಸದಾನಂದ ಗೌಡರ ಬಣ ತೀರ್ಮಾನಿಸಿದೆ. ಇತ್ತೀಚೆಗೆ ಮೊನ್ನೆ ರಾಜ್ಯ ಸಭಾ ಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪುಟ್ಟಸ್ವಾಮಿ ಪರ ಮತ ಹಾಕಲು ಬಿಜೆಪಿ ಶಾಸಕರಲ್ಲಿ ಅಂತಹ ಒಲವು ಕಾಣಿಸುತ್ತಿಲ್ಲ, ಆದರೆ ಪಕ್ಷವೇ ಆಯ್ಕೆಮಾಡಿರುವ ಅಭ್ಯರ್ಥಿಯನ್ನು ಸೋಲಿಸುವಂತಹ ದುಸ್ಸಾಹಸಕ್ಕೆ ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಸದಾನಂದ ಗೌಡರು ಕೈಹಾಕಲಾರರು.


ಜೆಡಿಎಸ್ ಸದಸ್ಯರು

ಹಾಗಂತ ಯಡ್ಡಿ ಬಣವೇನು ಸುಮ್ಮನೆ ಕುಳಿತಿಲ್ಲ. ಈ ಚುನಾವಣೆಯಲ್ಲಿ ತನ್ನ ಕಡೆಯವರನ್ನು ಸೋಲಿಸುವ ಕುತಂತ್ರ ನಡೆಯುತ್ತಿದೆ ಎಂಬ ಮಾಹಿತಿ ದೊರೆತ ತಕ್ಷಣ ಯಡಿಯೂರಪ್ಪನವರೂ ಸದಾನಂದ ಗೌಡರ ಬಣದವರನ್ನು ಸೋಲಿಸಬೇಕು ಎಂಬ ತಂತ್ರಗಾರಿಕೆಯನ್ನು ಮಾಡುತ್ತಿದ್ದಾರೆ. ಒಟ್ಟಾರೆಯಾಗಿ, ಹೇಳುವುದಾದರೆ ಸೋಮವಾರ ನಡೆಯಲಿರುವ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಅಂತಃಕಲಹ ಮತ್ತೊಮ್ಮೆ ಬಹಿರಂಗವಾಗುವ ಸಾಧ್ಯತೆ ಬಿಡ್ಡಿ ವಲಯಗಳಲ್ಲಿ ಕೇಳಿಬರುತ್ತಿದೆ.

ಕಾಂಗ್ರೆಸ್ ಪಕ್ಷದಲ್ಲೂ ವಾತಾವರಣ ಬಿಗಿಗೊಂಡಿದೆ. ಸಿದ್ದರಾಮಯ್ಯನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಆ ಪಕ್ಷದ ಶಾಸಕರಲ್ಲಿ ಆತಂಕ ಮೂಡಿಸಿದೆ. ಕಾಂಗ್ರೆಸ್ ಕಣಕ್ಕೆ ಇಳಿಸಿರುವ ನಾಲ್ಕು ಅಭ್ಯರ್ಥಿಗಳಲ್ಲಿ ಇಕ್ಬಾಲ್ ಅಹ್ಮದ್ ಸರಡಗಿ, ಮೋಟಮ್ಮ ಮತ್ತು ಗೋವಿಂದರಾಜ್ ಸುಲಭವಾಗಿ ಆಯ್ಕೆಯಾಗುವುದು ಖಂಡಿತ. ನಾಲ್ಕನೇ ಅಭ್ಯರ್ಥಿಯಾಗಿ ಶೈಕ್ಷಣಿಕ ಸಂಸ್ಥೆಗಳ ಮಾಲೀಕ ಶ್ರೀಮಂತ ವ್ಯಕ್ತಿ ಎಂ.ಆರ್.ಸೀತಾರಾಮ್ ಅವರನ್ನು ಪಕ್ಷದ ಹೈಕಮಾಂಡ್ ಸ್ಪರ್ಧೆಗೆ ನಿಲ್ಲಿಸಿದೆ.

ಕಾಂಗ್ರೆಸ್‌ನಲ್ಲಿ ಒಟ್ಟು 71 ವೋಟುಗಳು ಇವೆ. ಒಬ್ಬ ಅಭ್ಯರ್ಥಿ ಜಯ ಗಳಿಸಬೇಕಾದರೆ ಕನಿಷ್ಠ 19 ವೋಟುಗಳನ್ನು ಪಡೆಯಬೇಕು. ಮೊದಲ ಮೂರು ಅಭ್ಯರ್ಥಿಗಳು ಗೆಲ್ಲಲು ಅನುಕೂಲವಾಗುವಂತೆ ಕಾಂಗ್ರೆ ನಾಯಕರು ತಲಾ 20 ಶಾಸಕರ 3 ತಂಡಗಳನ್ನು ಮಾಡಿದೆ. ಅಂದರೆ, 60 ಮತಗಳು ಅಲ್ಲಿಗೆ ಖಾಲಿಯಾದಂತೆ. ಅನಂತರ ಕಾಂಗ್ರೆಸ್‌ನಲ್ಲಿ ಹೆಚ್ಚುವರಿಯಾಗಿ 11 ಮತಗಳು ಇರುತ್ತವೆ. ಈ 11 ಮತಗಳ ಜೊತೆಗೆ ಪಕ್ಷೇತರ ಅಥವಾ ಬೇರೆ ಪಕ್ಷಗಳಿಂದ 8 ವೋಟುಗಳನ್ನು ಸಂಪಾದಿಸುವಲ್ಲಿ ಸೀತಾರಾಮ್ ಯಶಸ್ವಿಯಾದರೆ ಮಾತ್ರ ಅವರಿಗೆ ವಿಜಯಲಕ್ಷ್ಮಿ ಒಲಿಯುತ್ತಾಳೆ.

ಸಾಧಾರಣವಾಗಿ ಈ ತರಹ ವಿಲೆಂಟು ವೋಟುಗಳನ್ನು ಖರೀದಿಸುವ ತಾಕತ್ತಿರುವ ಅಭ್ಯರ್ಥಿಯನ್ನೇ ರಾಜಕೀಯ ಪಕ್ಷಗಳು ಕಣಕ್ಕಿಳಿಸುತ್ತವೆ. ಹಾಗೆಯೇ ಸೀತಾರಾಂ ಅವರನ್ನು ನಾಲ್ಕನೇ ಅಭ್ಯರ್ಥಿಯಾಗಿ ಕಾಂಗ್ರೆ ಇಳಿಸಲು ಮುಖ್ಯ ಕಾರಣ ಅವರು ಕರ್ನಾಟಕದ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬರು ಎಂಬುದು. ಈಗ ಸೀತಾರಾಂ ಅವರು 8 ವೋಟುಗಳನ್ನು ವಿರೋಧ ಪಕ್ಷಗಳಿಂದ ಹೇಗೆ ಖರೀದಿಸುತ್ತಾರೆ? ಎಷ್ಟಕ್ಕೆ ಖರೀದಿಸುತ್ತಾರೆ? ಎಂಬಿತ್ಯಾದಿ ವಿಷಯದ ಮೇಲೆ ಅವರ ಸೋಲು-ಗೆಲುವು ನಿರ್ಣಯವಾಗುತ್ತದೆ.

ಈ ಎಂಟು ವೋಟುಗಳನ್ನು ಖರೀದಿಸುವುದು ಸೀತಾರಾಂ ಅವರಿಗೆ ಕಷ್ಟದ ಕೆಲಸವೇನೂ ಆಗಿರಲಿಲ್ಲ. ಆದರೆ ಸಿದ್ದರಾಮಯ್ಯನವರು ಮುನಿಸಿಕೊಂಡಿರುವುದರಿಂದ ಅವರ ಅನುಯಾಯಿ ಬೈರತ್ತಿ ಸುರೇಶ್ ಎಂಬುವವರನ್ನು ಪಕ್ಷೇತರ ಅಭ್ಯರ್ಥಿಯಾಗಿ ಅಖಾಡಕ್ಕೆ ಇಳಿಸಿದ್ದಾರೆ. ಈ ಬೈರತ್ತಿ ಸುರೇಶ್ ಕೂಡ ಶ್ರೀಮಂತ ವ್ಯಕ್ತಿಯೇ.


ಜನತಾದಳದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ರಾಜಕೀಯ ಗೊಂದಲದ ವಾತಾವರಣವನ್ನು ಎನ್‌ಕ್ಯಾಶ್ ಮಾಡಿಕೊಳ್ಳುವಲ್ಲಿ ಎತ್ತಿದ ಕೈ. ಹೀಗಾಗಿ ತಮ್ಮ ಪಕ್ಷದ ಅಭ್ಯರ್ಥಿಗೆ ವೋಟು ಹಾಕಿದ ನಂತರ ಉಳಿದಿರುವ ಹೆಚ್ಚುವರಿ 6 ಮತಗಳನ್ನು ಬೈರತ್ತಿ ಸುರೇಶ್ ಅವರಿಗೆ ನೀಡುತ್ತೇವೆ ಎಂದು ಈಗಾಗಲೇ ಘೋಷಿಸಿದ್ದಾರೆ. ಜೊತೆಗೆ ಐವರು ಪಕ್ಷೇತರ ಶಾಸಕರ ಗುಂಪು ಕೂಡ ಬೈರತ್ತಿ ಸುರೇಶ್‌ಗೆ ತಮ್ಮ ವೋಟು ಎಂದು ಘೋಷಿಸಿದೆ. ಇದೆಲ್ಲದರ ಜೊತೆಜೊತೆಗೆ ಬಿಜೆಪಿಗೆ ರಾಜೀನಾಮೆ ನೀಡಿ ಪಕ್ಷೇತರ ಅಭ್ಯರ್ಥಿಯಾಗಿರುವ ಶ್ರೀರಾಮುಲು ಕೂಡ ಬೈರತ್ತಿಗೇ ಮತ ಹಾಕುವ ಸಾಧ್ಯತೆಯಿದೆ. ಅಷ್ಟೇ ಅಲ್ಲ, ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದರೂ ಬಿಜೆಪಿಯ ಶಾಸಕನಲ್ಲದಿರುವ ವರ್ತೂರು ಪ್ರಕಾಶ್ ಕೂಡ ತಮ್ಮ ಕುರುಬ ಜನಾಂಗದ ಬೈರತ್ತಿ ಸುರೇಶ್ ಅವರಿಗೆ ಮತ ಹಾಕಬಹುದೆಂಬ ಮಾತು ಕೇಳಿಬರುತ್ತಿದೆ. ಉಳಿದಂತೆ ಶ್ರೀರಾಮುಲು ಅವರ ಹಿಂಬಾಲಕರು ಮತ್ತು ಕಾಂಗ್ರೆಸ್‌ನಲ್ಲಿರುವ ಸಿದ್ದರಾಮಯ್ಯನವರ ಹಿಂಬಾಲಕರೂ ಬೈರತ್ತಿಗೆ ವೋಟು ಹಾಕಬಹುದೆಂಬ ಮಾತು ಕೇಳಿಬರುತ್ತಿದೆ.

ಇದೆಲ್ಲ ನಡೆದರೆ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿರುವ ಬೈರತ್ತಿ ಸುರೇಶ್ ಎಲ್ಲ ರಾಜಕೀಯ ನಾಯಕರ ಲೆಕ್ಕಾಚಾರಗಳನ್ನು ತಿರುವು-ಮುರುವು ಮಾಡಿ ಗೆಲ್ಲುವ ಸಾಧ್ಯತೆ ಕಂಡುಬರುತ್ತಿದೆ. ಒಂದು ವೇಳೆ ಬೈರತ್ತಿ ಸುರೇಶ್ ಈ ಚುನಾವಣೆಯಲ್ಲಿ ಗೆದ್ದರೆ ಅದು ಕಾಂಗ್ರೆ ಹೈಕಮಾಂಡ್‌ನ ಸೋಲು ಮತ್ತು ಬಂಡಾಯ ನಾಯಕ ಸಿದ್ದರಾಮಯ್ಯನವರ ಗೆಲುವು ಎಂದೇ ಅರ್ಥೈಸಬಹುದು. ಬಹುಶಃ ಈ ಬಂಡಾಯ ಅಭ್ಯರ್ಥಿಯ ಗೆಲುವಿನ ನಂತರ ಕಾಂಗ್ರೆ ಪಕ್ಷದಲ್ಲಿ ಮೂಲ ಕಾಂಗ್ರೆಸ್ಸಿಗರಿಗಿಂತಲೂ ಸಿದ್ದರಾಮಯ್ಯನವರ ಪ್ರಭಾವ ಹೆಚ್ಚು ಕಂಡುಬರಬಹುದು. ಖಂಡಿತವಾಗಿಯೂ ಈ ಕಾರಣದಿಂದ ವಿಧಾನ ಪರಿಷತ್ ಚುನಾವಣಾ ಫಲಿತಾಂಶ ಕಾಂಗ್ರೆ ಪಕ್ಷದಲ್ಲಿ ಒಂದು ಹೊಸ ಸಂಚಲನವನ್ನು ಸೃಷ್ಟಿಸಲಿದೆ.

ಆರೂ ಸ್ಥಾನಗಳನ್ನು ಗೆಲ್ಲಲೇಬೇಕೆಂದು ಪಣ ತೊಟ್ಟಿರುವ ಬಿಜೆಪಿ ಅಂತಃಕಲಹದಿಂದಾಗಿ ಒಂದು ಸ್ಥಾನವನ್ನು ಕಳೆದುಕೊಳ್ಳಬಹುದು. ಹಾಗೇನಾದರೂ ಆದರೆ ಮುಂಬರುವ ದಿನಗಳಲ್ಲಿ ಪಕ್ಷದ ನಾಯಕರು ಪರಸ್ಪರ ಬೀದಿಕಾಳಗಕ್ಕೆ ಇಳಿಯುವುದು ಗ್ಯಾರಂಟಿ.

● ಶೆಟ್ಟಿ

ನಿತ್ಯಾನಂದನ ಗೋಪಿಕಾ ಸ್ತ್ರೀ ಕಣ್ಮರೆ



'ನನ್ನ ವಿರುದ್ಧ ಬೇಕಿದ್ರೆ ಸಿಬಿಐ ತನಿಖೆಯೇ ನಡೆಯಲಿ. ಲೆನಿನ್ ಕರುಪ್ಪನ್ ನನ್ನನ್ನು ಬ್ಲ್ಯಾಕ್‌ಮೇಲ್ ಮಾಡೋದಕ್ಕೆಂದು ಸೃಷ್ಟಿಸಿದ ವೀಡಿಯೋ ಒಂದನ್ನೆ ಆಧಾರವಾಗಿಟ್ಟುಕೊಂಡು ಸಿಐಡಿ ಪೊಲೀಸರು ನನಗೆ ಕಿರುಕುಳ ನೀಡುತ್ತಿದ್ದಾರೆ. ಸತ್ಯ ಅನ್ನೋದು ಆ ಪರಮಾತ್ಮನಿಗಷ್ಟೇ ಗೊತ್ತು. ಇವತ್ತಲ್ಲ ನಾಳೆ ಅದು ಹೊರಬರಲೇಬೇಕು. ನಾನು ಅಧರ್ಮವಾಗಿ ನಡಕೊಂಡಿದ್ರೇ ಆಗಿದ್ದರೆ ಏಕೆ ಅಷ್ಟೊಂದು ಮಂದಿ ಹೆಣ್ಣು ಮಕ್ಕಳು ನನ್ನನ್ನು ಪೂಜಿಸುತಿದ್ರು?'

ಅನಾಚಾರದ ಸೆಕ್ಸ್ ವೀಡಿಯೋ ಮತ್ತು ಸಿಐಡಿ ಪೊಲೀಸರು ಹಾಕಿದ ಕೇಸಿನ ವಿರುದ್ಧ ಕಾಮಿಸ್ವಾಮಿ ನಿತ್ಯಾನಂದ ಪತ್ರಿಕಾಗೋಷ್ಠಿ ಕರೆದು ಕ್ಯಾತೆ ಡೈಲಾಗ್ ಹೊಡೆದದ್ದು ಹೀಗೆ ತಾನೆ?

ಆದರೆ ಸತ್ಯ ಅನ್ನೋದು ನಿತ್ಯಾನಂದನ ಬುದ್ಧಿ, ಸಂಪತ್ತು ಮತ್ತು ತಾಕತ್ತನ್ನು ಮೀರಿ ನಿಂತಿದೆ. ನಿತ್ಯಾನಂದನನ್ನು ನಂಬಿ ಆಶ್ರಮ ಸೇರಿದ ಅಸಂಖ್ಯಾತ ಮಹಿಳೆಯರ ಗತಿ ಏನಾಗುತ್ತದೆ ಎಂಬುದಕ್ಕೆ ಜೀವಂತ ಉದಾಹರಣೆಯಾಗಿ ನಿಂತಿದ್ದಾಳೆ ಆರತಿ ರಾವ್. ಆಕೆಯ ಮಾತುಗಳು, ಸಿಐಡಿ ಪೊಲೀಸರಿಗೆ ಆಕೆ ಕೊಟ್ಟ ಮಾಹಿತಿ, ಈಗ ಮಾಧ್ಯಮಗಳೆದುರು ಆಕೆ ಬಿಚ್ಚಿಟ್ಟ ಸತ್ಯ ಎಲ್ಲವೂ ನಿತ್ಯಾನಂದನ ಕರಾಳ ಮುಖದ ಇನ್ನೊಂದು ಮಗ್ಗುಲನ್ನು ತೆರೆದಿಡುತ್ತವೆ. ಟೀವಿಗಳಲ್ಲಿ ಬಂದದ್ದು ನಕಲಿ ವೀಡಿಯೋ, ಹಿಂದೂ ಧರ್ಮಕ್ಕೆ ಕಳಂಕ ತರಲು ಕ್ರಿಶ್ಚಿಯನ್ ಮಿಷನರಿಗಳು ಲೆನಿನ್ ಕರುಪ್ಪನ್‌ನನ್ನು ಛೂ ಬಿಟ್ಟಿದ್ದಾರೆ, ಅವರೆಲ್ಲ ಸೇರಿಕೊಂಡೇ ಕಪೋಲ ಕಲ್ಪಿತ ವೀಡಿಯೋ ಸೃಷ್ಟಿಸಿದ್ದಾರೆ, ಬೇಕಿದ್ರೆ ಈ ಬಗ್ಗೆ ಸರ್ಕಾರವೇ ಸಿಬಿಐ ತನಿಖೆ ನಡೆಸಲಿ...! ಇತ್ಯಾದಿ ನಿತ್ಯಾನಂದನ ಕಪಟವಾಟಕ್ಕೆ ತಕ್ಕ ಉತ್ತರದಂತಿರುವುದು ಆರತಿ ರಾವ್.

ನಿತ್ಯ ಗೋಪಿಕಾ!

ಆಕೆಯ ಪ್ರಕಾರ ನಿತ್ಯಾನಂದ ತನ್ನ ಕಾಮತೃಷೆಗೆ ಬಳಸಿಕೊಂಡ ಮುಗ್ಧ ಭಕ್ತೆಯರ ಸಂಖ್ಯೆಯೇ ಮೂವತ್ತಕ್ಕೂ ಅಧಿಕ!

ಆರತಿ ರಾವ್ ಹೊರಗೆಡುಹಿದ ಭಯಾನಕ ವಾಸ್ತವಗಳ ಪೈಕಿ ಅತೀ ಮುಖ್ಯವಾದದ್ದು ನಿತ್ಯಾನಂದನ ಪರಮಾಪ್ತ ಸಖಿ ಗೋಪಿಕಾ ನಿಗೂಢವಾಗಿ ಕಣ್ಮರೆಯಾದ ದುರಂತ. ಶುರುವಿನಿಂದಲೂ ನಿತ್ಯಾನಂದನ ಆಪ್ತಕಾರ್ಯದರ್ಶಿ, ಪರಮಾಪ್ತ ಸಖಿಯಾಗಿ ಚಾಲ್ತಿಯಲ್ಲಿದ್ದವಳು ಗೋಪಿಕಾ ಅಲಿಯಾಸ್ ನಿತ್ಯಾನಂದ ಗೋಪಿಕಾ ಉರ್ಫ್ ವಿದ್ಯಾ ವಿಶ್ವನಾಥನ್ ಯಾನೆ ಮಾ ನಿತ್ಯ ಗೋಪಿಕಾ!

ಅಸಂಖ್ಯಾತ ಮುಗ್ಧ ಭಕ್ತೆಯರನ್ನು ತನ್ನ ಕಾಮತೃಷೆಗೆ ಪಳಗಿಸಲು ನಿತ್ಯಾನಂದ ಬಳಸಿಕೊಂಡಿದ್ದು ಈಕೆಯನ್ನೇ. ಶುರುವಿನಲ್ಲಿ ಪೊಲೀಸರು ಈಕೆ ಕೂಡ ಓರ್ವ ಬಲಿಪಶುವೆಂದೇ, ನಿತ್ಯಾನಂದನ ಕಪಿಮುಷ್ಠಿಗೆ ಸಿಲುಕಿ ತನಗರಿವಿಲ್ಲದೆ ಈಕೆ ಆತನ ದುಷ್ಕೃತ್ಯಗಳಲ್ಲಿ ಪಾತ್ರವಹಿಸಿದ್ದಾಳೆಂದೇ ಲೆಕ್ಕಹಾಕಿದ್ದು ಈಗ ಆರತಿ ಬಿಚ್ಚಿಟ್ಟ ಸತ್ಯದಿಂದಾಗಿ ಸುಳ್ಳಾಗಿದೆ. 2010ರ ಮಾರ್ಚ್‌ನಲ್ಲಿ ನಿತ್ಯಾನಂದನ ಕಾಮಪಿಪಾಸೆ ಜಗಜ್ಜಾಹಿರುಗೊಂಡಾಗಿನಿಂದಲೂ ಗೋಪಿಕಾ ಏನಾದಳು? ಆಕೆ ಈಗ ಎಲ್ಲಿದ್ದಾಳೆ? ಏಕೆ ಇದ್ದಕ್ಕಿದ್ದಂತೆ ನಾಪತ್ತೆಯಾದಳು? ಪೊಲೀಸರು ತನ್ನನ್ನು ಬಂಧಿಸಬಹುದೆಂಬ ಭೀತಿಗೆ ಬಿದ್ದು ಅಮೆರಿಕ ಸೇರಿಕೊಂಡಿರಬಹುದೆ? ಅಥವಾ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡು ತನ್ನ ರೂಪ ಬದಲಿಸಿಕೊಂಡಿದ್ದಾಳಾ? ನಿಜಕ್ಕೂ ತಪ್ಪಿತಸ್ಥೆಯಲ್ಲದಿದ್ದರೆ ಪೊಲೀಸರೆದುರು ಶರಣಾಗಿ ತನ್ನ ಅಸಹಾಯಕತೆಯನ್ನು ವಿವರಿಸಬಹುದಿತ್ತಲ್ಲವೆ? ಹಾಗೊಮ್ಮೆ ತಾನು ಕೂಡ ನಿತ್ಯನ ಕಾಮಪಿಪಾಸೆಯ ಬಲಿಪಶುವೆಂಬ ಭಾವನೆ ಆಕೆಗಿದ್ದಿದ್ದರೆ ಏಕೆ ಬಚ್ಚಿಟ್ಟುಕೊಳ್ಳುತ್ತಿದ್ದಳು? ಅಥವಾ ಎಲ್ಲಿ ಬಾಯಿಬಿಟ್ಟರೆ ನಿತ್ಯಾನಂದ ತನ್ನನ್ನು ಮುಗಿಸುತ್ತಾನೆಂಬ ಭೀತಿಯೇ? ಅದು ನಿಜವೇ ಆಗಿದ್ದರೆ ಪೊಲೀಸ್ ರಕ್ಷಣೆ ಪಡೆಯಬಹುದಿತ್ತಲ್ಲವೆ? ಬಹುಶಃ ತನ್ನೆಲ್ಲಾ ಅನಾಚಾರ ಮುಚ್ಚಿಕೊಳ್ಳಲು ನಿತ್ಯಾನಂದ ಆಕೆಯನ್ನೇ ಮುಗಿಸಿ ತನ್ನ ವಿರುದ್ಧದ ಪೊಲೀಸ್ ಕೇಸಿನ ಅತಿ ಮುಖ್ಯ ಸಾಕ್ಷಿಯನ್ನೇ ನಾಶಪಡಿಸಿರಬಹುದಾ?

ಇಂಥ ಅನೇಕ ಪ್ರಶ್ನೆ, ಅನುಮಾನಗಳ ಒಟ್ಟು ಮೊತ್ತವೇ ನಿತ್ಯನ ಆಪ್ತ ಸಖಿ ನಿತ್ಯ ಗೋಪಿಕಾ. ಮೂಲತಃ ಆಕೆ ಅಮೆರಿಕದ ನ್ಯೂಯಾರ್ಕ್‌ನ ಎನ್ನಾರೈ. ಈಕೆಯ ಹುಟ್ಟು ಹೆಸರು ವಿದ್ಯಾ ವಿಶ್ವನಾಥನ್. ಅಮೆರಿಕದಲ್ಲೇ ಡಾಕ್ಟರೇಟ್ ಮುಗಿಸಿ ಅಲ್ಲೇ ಇದ್ದ ಚೆನ್ನೈ ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ವಿಶ್ವನಾಥನ್ ಎಂಬಾತನನ್ನು ಮದುವೆಯಾಗಿದ್ದಾಳೆ. ವಯಸ್ಸು ಸುಸುಮಾರು ಮೂವತ್ತಿರಬಹುದು. 2002 ರ ಸುಮಾರಿಗೆ ಅಮೆರಿಕ ಪ್ರವಾಸದಲ್ಲಿದ್ದ ನಿತ್ಯಾನಂದನ ಪ್ರವಚನಕ್ಕೆ ಮಾರುಹೋಗಿ ಕಾಲಕ್ರಮೇಣ ಬಿಡದಿಯ ಧ್ಯಾನಪೀಠಕ್ಕೆ ಜಮೆಯಾದ ವಿದ್ಯಾ ವಿಶ್ವನಾಥನ್ ಬೇರೆಲ್ಲ ಭಕ್ತೆಯರನ್ನು ಮೀರಿಸಿ ಅತಿ ವೇಗವಾಗಿ ನಿತ್ಯನ ಪ್ರೀತಿಗೆ ಪಾತ್ರಳಾದಳು.

ಬಲೆಗೆ ಬಿದ್ದ ಆರತಿ

ಈಗ ಆರತಿ ಬಾಯಿಬಿಟ್ಟ ರೀತಿಯಲ್ಲೇ ಹೇಳಬೇಕೆಂದರೆ ನಿತ್ಯಾನಂದ ಓರ್ವ Satyriosis ಅಂದರೆ ಅತಿಕಾಮಿ. ಒಂದೆಡೆ ತಾನೊಬ್ಬ ದೈವೀ ಪುರುಷ ಸಾಕ್ಷಾತ್ ಶಿವ ಪರಮಾತ್ಮನ ಅಪರಾವತಾರ, ಭೂಮಿ ಮೇಲೆ ಧರ್ಮ ಸಂಸ್ಥಾಪನೆಗೆಂದೇ ದೇವರು ತನ್ನ ರೂಪದಲ್ಲಿ ಅವತಾರವೆತ್ತಿದ್ದಾನೆಂದು ಮುಗ್ಧ ಭಕ್ತೆಯರನ್ನು ನಂಬಿಸುತ್ತಿದ್ದ. ವಿಶೇಷವೆಂದರೆ ನಿತ್ಯಾನಂದ ಗಾಳ ಹಾಕುತ್ತಿದ್ದದ್ದೇ ಅಸಹಾಯಕ ಹೆಂಗಸರಿಗೆ. ಆತನಿಗೆ ಪುರುಷರಿಗಿಂತಲೂ ಮುಗ್ಧ ಭಕ್ತೆಯರೇ ಹೆಚ್ಚು ಅಚ್ಚುಮೆಚ್ಚು. ಯಾರಾದರೂ ಗಂಡುಸು ಬಂದರೆ ತೀರ ಒಳಕ್ಕೆ ಬಿಟ್ಟುಕೊಳ್ಳದೆ ಅಲ್ಲಿಂದಲೇ ಸಾಗ ಹಾಕುವುದು ಧ್ಯಾನಪೀಠಮ್ ಆಶ್ರಮದ ಅಲಿಖಿತ ನಿಯಮ. ವಯಸ್ಸಾದ ಮಹಿಳೆಯರದ್ದೂ ಇದೇ ಪಾಡು. ಆದರೆ ಹದಿಹರೆಯದ, ಆಗಷ್ಟೇ ಮದುವೆಯಾಗಿ ಗಂಡನ ವಿರುದ್ಧ ರೋಸತ್ತ ಅಥವಾ ಮದುವೆಯಾಗಿ ಗಂಡ ಹೆಂಡತಿ ಅನ್ಯೋನ್ಯವಾಗಿದ್ದು ಸಣ್ಣ ಪುಟ್ಟ ಸಮಸ್ಯೆಗಳಿದ್ದ ಹೆಂಗಸರೇನಾದರೂ ನಿತ್ಯಾನಂದನ ಅಡ್ಡೆಗೆ ಕಾಲಿಟ್ಟರೆಂದರೆ ಕತೆ ಮುಗಿದಂತೆಯೆ.

ಆರತಿ ಸಿಲುಕಿದ್ದು ನಿತ್ಯಾನಂದನ ಇದೇ ವ್ಯವಸ್ಥಿತ ಜಾಲದೊಳಗೆ. 2004 ರ ಹೊತ್ತಿಗೆ ರೋಬೋಟಿಕ್ ಇಂಜಿನಿಯರಿಂಗ್ ಮುಗಿಸಿ ಅಮೆರಿಕದ ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಉದ್ಯೋಗಕ್ಕೆ ಸೇರಿಕೊಂಡ ಆರತಿ ಮೂಲತಃ ಬೆಂಗಳೂರಿನ ಯುವತಿ. ಕರ್ಮಠ ಮಾಧ್ವ ಸಂಪ್ರದಾಯದ ತಂದೆತಾಯಿಗಳನ್ನು ಒಪ್ಪಿಸಿಯೇ ಚೆನ್ನೈ ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರನ್ನು ಅಮೆರಿಕದಲ್ಲಿ ಮದುವೆ ಯಾದಳು. ದಿನಕಳೆದಂತೆ ಗಂಡ ಹೆಂಡತಿ ಮಧ್ಯೆ ಮನಸ್ತಾಪ ಶುರುವಾಯಿತು. ಮನೋಕ್ಷೋಭೆಯಲ್ಲೇ ಕೆಲಸಕ್ಕೆ ರಜೆ ಹಾಕಿ ಬೆಂಗಳೂರಿಗೆ ಬಂದ ಆರತಿರಾವ್‌ಗೆ ನಿತ್ಯಾನಂದನ ವಿಷಯ ಗೊತ್ತಾಗಿದ್ದೇ ಆತನ ಟಿವಿ ಸಂದರ್ಶನ ನೋಡಿ. 2005 ರಲ್ಲಿ ಬಿಡದಿ ಆಶ್ರಮಕ್ಕೆ ಬಂದ ಆರತಿ ಆ ಹೊತ್ತಿಗಾಗಲೇ ನಿತ್ಯಾನಂದನ ಕುರಿತ ಪುಸ್ತಕಗಳನ್ನು ಓದಿಕೊಂಡಿದ್ದಳು. ಮೊದಲು ಒಂದು ವಾರದ ಮೆಡಿಟೇಷನ್ ಶಿಬಿರಕ್ಕೆ ಆಕೆಯನ್ನು ದಾಖಲಿಸಲಾಯ್ತು. ಆ ನಂತರ ಹದಿ ವಯಸ್ಸಿನ ಮಹಿಳೆಯರೇ ಉಳಿದುಕೊಳ್ಳುತ್ತಿದ್ದ ಸಭಾಂಗಣದಲ್ಲಿ ಇರಿಸಲಾಯ್ತು. ಅಲ್ಲಿದ್ದ ಬಹುತೇಕ ಹೆಂಗಸರೆಲ್ಲರದ್ದೂ ಇದೇ ಕತೆಯಾಗಿತ್ತು. ಬಹುತೇಕರಿಗೆ ಮದುವೆಯಾಗಿತ್ತು, ಗಂಡನ ಅಂಕೆಯಿಲ್ಲದೇ ನಿರಾಳವಾಗಿ, ಸ್ವೇಚ್ಛೆಯಾಗಿ ಬದುಕುವ ಹಂಬಲದಿಂದಲೇ ಅವರೆಲ್ಲ ನಿತ್ಯಾನಂದನ ಅಡ್ಡೆ ಸೇರಿಕೊಂಡಿದ್ದರು.

ಹಾಗೇ ನಿತ್ಯಾನಂದನ ಬಿಡದಿಯ ಅಡ್ಡೆಯಲ್ಲಿದ್ದಾಗ ಆರತಿಗೆ ಪರಿಚಿತಳಾದವಳು ಮಾ ನಿತ್ಯಗೋಪಿಕಾ ಅಲಿಯಾಸ್ ವಿದ್ಯಾ ವಿಶ್ವನಾಥನ್. ನೋಡಲು ಥೇಟು ವಿದೇಶಿಯಳಂತೆಯೇ ಕಾಣುತ್ತಿದ್ದ ಗೋಪಿಕಾ ಒಂದೇ ವಾರಕ್ಕೆ ಆರತಿಯನ್ನು ಪಳಗಿಸಿಬಿಟ್ಟಳು. ನೀನು ಧ್ಯಾನಪೀಠಕ್ಕೆ ಬಂದಿದ್ದೀಯಾ ಅಂದರೆ ಅದು ನಿನ್ನ ಪೂರ್ವಜನ್ಮದ ಪುಣ್ಯ. ಸಾಕ್ಷಾತ್ ಶಿವಪರಮಾತ್ಮನೇ ನಿನ್ನ ಬಗ್ಗೆ ದಯೆ ತೋರಿದ್ದಾನೆ. ಸ್ವಾಮಿಯ ಒಂದು ದೃಷ್ಟಿ ನಿನ್ನ ಮೇಲೆ ಬಿತ್ತೆಂದರೆ ನಿನ್ನ ಜೀವನವೇ ಪಾವನವಾದಂತೆ. ಆ ದೇವರನ್ನು ಒಲಿಸಿಕೊಳ್ಳಲು ಇನ್ನಷ್ಟು ತಪಸ್ಸು ಮಾಡು. ಸದಾ ಅವರನ್ನೇ ಪೂಜೆ ಮಾಡು...! ಎಂದು ವಶೀಕರಣಕ್ಕೀಡು ಮಾಡಿದ್ದಾಳೆ.

ಗರ್ಭಪಾತ ಮಾಡಿಸಿದ

ತನ್ನಗಿನ್ನು ಒಳ್ಳೇದಾಗುತ್ತೆ ಎಂದೇ ಭಾವಿಸಿದ ಆರತಿ ಮತ್ತೆ ಅಮೆರಿಕಕ್ಕೆ ಬಂದು ಗಂಡನ ಜೊತೆ ವಾಸಿಸತೊಡಗಿದಳು. ಇದಾಗಿ ಆರೇ ತಿಂಗಳಿಗೆ ಗರ್ಭಿಣಿಯಾದಳು. ತಾನು ಹಾಗೆ ಗರ್ಭಿಣಿಯಾದದ್ದು ಕೂಡ ನಿತ್ಯಾನಂದನ ದಯೆಯಿಂದಲೇ ಎಂದು ಆರತಿ ನಂಬಿದ್ದಳು. ತಾನು ಗರ್ಭಿಣಿಯಾಗಿದ್ದು ಗೊತ್ತಾದದ್ದೇ ಮತ್ತೆ ತಾನು ಸ್ವಾಮಿಯ ಆಶೀರ್ವಾದ ಪಡೆಯಲು ಬಿಡದಿಗೆ ಹೋಗುತ್ತೇನೆಂದು ಹಠಕ್ಕೆ ಬಿದ್ದ ಆರತಿಗೆ ಆಕೆಯ ಗಂಡನಿಂದಲೇ ತೀವ್ರ ವಿರೋಧ ವ್ಯಕ್ತವಾಗಿತ್ತು, ಆದರೆ ನಿತ್ಯನ ಪಿತ್ತ ನೆತ್ತಿಗೇರಿತ್ತಲ್ಲ; ಗಂಡನನ್ನು ಲೆಕ್ಕಿಸದೆ 2006 ರಲ್ಲಿ ಮತ್ತೆ ಬಿಡದಿಗೆ ಬಂದಳು. ಅದೇ ಆಕೆಯ ಅತೀ ದೊಡ್ಡ ಅಪರಾಧವಾಗಿತ್ತು,

ತಾನು ಗರ್ಭಿಣಿ. ತನಗೆ ನಿಮ್ಮಂಥ ದೈವೀ ಶಕ್ತಿಯುಳ್ಳ ಮಗು ಬೇಕು. ದಯವಿಟ್ಟು ನನ್ನನ್ನು ಆಶೀರ್ವದಿಸಿ ಎಂದು ಮೊರೆಯಿಟ್ಟ ಆರತಿಗೆ ತಾನು ಕಪಟ ಸ್ವಾಮಿಯ ಹಳ್ಳಕ್ಕೆ ಬೀಳುತ್ತಿದ್ದೇನೆಂಬುದು ಎಲ್ಲಿ ಗೊತ್ತಿತ್ತು?

ದೈವೀ ಶಿಶು ಬೇಕು ಅಂದರೆ ಈ ಗರ್ಭವನ್ನು ತೆಗೆಸಿಬಿಡು. ಅಂದರೆ ಅಬಾರ್ಷನ್ ಮಾಡಿಸಿಕೋ ಎಂದುಬಿಟ್ಟ ನಿತ್ಯಾನಂದ. ಆ ಹೊತ್ತಿಗೆ ನಿತ್ಯಗೋಪಿಕಾ ಮಾತ್ರವಲ್ಲದೇ ರಾಗಿಣಿ ವಲ್ಲಭನೇನಿ ಉರ್ಫ್ ಮಾ ಸಚಿತಾನಂದ, ಮಾ ನಿತ್ಯಸದಾನಂದ ಅಲಿಯಾಸ್ ಡಿ ಜಮುನಾ ರಾಗಿಣಿ, ರಶ್ಮೀ ಅಲಿಯಾಸ್ ಮಾ ನಿತ್ಯ ಶೋಭಿತ, ಮುಂತಾದ ಆಪ್ತ ಸಖಿಯರ ಬಳಗವೇ ನಿತ್ಯನ ಆಶ್ರಮದಲ್ಲಿತ್ತು. ನಿತ್ಯಗೋಪಿಕಾ ಮತ್ತು ರಾಗಿಣಿ ವಲ್ಲಭನೇನಿ ಸೇರಿಕೊಂಡೇ ಆರತಿಯ ಅಬಾರ್ಷನ್ ಮಾಡಿಸಿಬಿಟ್ಟರು. ಕೇಳಿದರೆ ಗರ್ಭಪಾತವಾಯಿತೆಂದು ಗಂಡನನ್ನು ನಂಬಿಸು ಎಂದು ನಿತ್ಯಾನಂದನೇ ಹೇಳಿಕೊಟ್ಟಿದ್ದ.

ಬಂಧಗಳಿಂದ ಮೊದಲು ಮುಕ್ತಿ ಪಡೆಯಬೇಕು. ಗರ್ಭಿಣಿಯಾಗಿ ಮಗುವಿನಿಂದ ಇನ್ನೊಂದು ಬಂಧದಲ್ಲಿ ಸಿಲುಕಬೇಡ. ಗರ್ಭಪಾತ ಮಾಡಿಸುವುದು ಪಾಪವಲ್ಲ ಎಂದೇ ಆರತಿಯನ್ನು ನಂಬಿಸಿಬಿಟ್ಟಿದ್ದ ಕಪಟಿ ನಿತ್ಯಾನಂದ. ಕ್ರಮೇಣ ಆರತಿಯನ್ನು ರಾಗಿಣಿಯೇ ನಿಂತು ನಿತ್ಯಾನಂದನ ಆಪ್ತ ಬಳಗಕ್ಕೆ ಸೇರಿಸಿದಳು. ನಿನ್ನ ಮೇಲೆ ಸ್ವಾಮಿಯ ದಯೆಯಾಗಿದೆ. ನಿನ್ನನ್ನು ಸೇವಕಿಯಾಗಿ ನೇಮಿಸಿಕೊಳ್ಳಲು ಸ್ವಾಮಿ ಮನಸ್ಸು ಮಾಡಿದ್ದಾರೆ. ಅದು ನಿನ್ನ ಪೂರ್ವ ಜನ್ಮದ ಪುಣ್ಯದ ಫಲ ಎಂದು ನಿತ್ಯಗೋಪಿಕಾ ಬ್ರೇನ್‌ವಾಷ್ ಮಾಡಿದ್ದಳು. ಆರತಿಯ ಹೆಸರನ್ನು ಮಾ ಆನಂದಪ್ರೇಮ ರೂಪೇಶ್ವರಿ ಎಂದು ಬದಲಿಸಲಾಯ್ತು, ಕ್ರಮೇಣ ಆ ಹೆಸರನ್ನೂ ತಿದ್ದಿ ಆನಂದೇಶ್ವರಿ ಎಂದೂ ನಿತ್ಯಾನಂದನಿಗೆ ಇನ್ನೂ ಹತ್ತಿರವಾದಂತೆಲ್ಲ ಆತನ ಖಯಾಲಿಗೆ ತಕ್ಕಂತೆ ಮಾ ನಿತ್ಯಾನಂದ ಪ್ರೇಮೇಶ್ವರಿ ಎಂದೂ ಮಾರ್ಮಿಕವಾಗಿ ಬದಲಿಸುತ್ತಲೇ ಇದ್ದರು. ಸ್ವಾಮಿಜೆಯನ್ನು ಸಖನಂತೆ, ಪ್ರಿಯಕರನಂತೆ ಭಾವಿಸಿದಾಗಲೇ ಜೀವನ್ಮುಕ್ತಿ ಸಾಧ್ಯ ಎಂದು ನಂಬಿಸುತ್ತಲೇ ಬಂದ ನಿತ್ಯಾನಂದ ಮೊದಮೊದಲು ಕೈಕಾಲು ಒತ್ತು, ಮಸಾಜ್ ಮಾಡು ಎಂದು ಒತ್ತಾಯಿಸುತ್ತಿದ್ದ. ಅದೊಮ್ಮೆ ರಾಗಿಣಿ ಕೊಠಡಿಯನ್ನು ಬಿಟ್ಟು ಹೋಗುವುದನ್ನೇ ಕಾದಿದ್ದು ಏಕಾಏಕಿ ಆರತಿಯನ್ನು ಬರಸೆಳೆದುಕೊಂಡು 'ನಿನ್ನ ಜೀವನದಲ್ಲಿ ಜ್ಯೋತಿಯಾಗಿ ಬಂದ ಸಾಕ್ಷಾತ್ ಶಿವನ ಅವತಾರ ನಾನು. ದೇವರ ಸೇವೆ ನಿಮಿತ್ತ ಮಾದುರ್ಯಕ್ಕೆಂದು ಆಯ್ಕೆಗೊಂಡ ಪುಣ್ಯವಂತ ಸೇವಕಿ ನೀನು. ಸೆಕ್ಸ್ ಅನ್ನೋದು ಜೀವನದ ಮುಕ್ತಿಗೆ ಮಾರ್ಗೋಪಾಯ...!' ಎಂದಿದ್ದೆ ಆಕೆಯನ್ನು ವಿವಸ್ತ್ರಗೊಳಿಸಿ ತನ್ನ ಪಶುವಾಂಛೆ ಮೆರೆದುಬಿಟ್ಟ.

ತಾಂತ್ರಿಕ್ ಸೆಕ್ಸ್

ನಿತ್ಯನ ಪಿತ್ತ ಇನ್ನೂ ನೆತ್ತಿಗೇರಿತ್ತಾದ್ದರಿಂದ ಆರತಿಗಿದು ದೈವಲೀಲೆಯೆಂದೇ ಎನಿಸಿತ್ತು, ಇದನ್ನು ಹೊರಜಗತ್ತಿಗೇನಾದರೂ ಬಹಿರಂಗಪಡಿಸಿದರೆ ಅದು ಗುರುದ್ರೋಹ ಮತ್ತು ದೈವದ್ರೋಹ. ನಿನ್ನ ಮರ್ಯಾದೆಯೇ ಹರಾಜಾಗುತ್ತದೆ ಎಂದೂ ನಿತ್ಯಾನಂದ ನಂಬಿಸಿಬಿಟ್ಟ. ಬಿಡದಿಯ ಆಶ್ರಮ ಬಿಟ್ಟು ಬೇರೆಲ್ಲಿಗೆ ಹೋದರೂ ಜೊತೆಗೆ ಆರತಿಯನ್ನು ಕರೆದೊಯ್ಯತೊಡಗಿದ. ಬೇಕೆಂದಾಗಲೆಲ್ಲಾ ಆಕೆಯನ್ನು ಬಳಸಿಕೊಳ್ಳುತ್ತಿದ್ದ. ಕಾಮಸೂತ್ರದ 112 ಶೈಲಿಗಳ ಪೈಕಿ ಆರು ಶೈಲಿಗಳಿಂದ ಖಂಡಿತಾ ದೈವಾರಾಧಿಸಬಹುದು ಮತ್ತು ಮುಕ್ತಿ ಪಡೆಯಬಹುದು ಎಂದು ಆರತಿಯನ್ನು ಯಾಮಾರಿಸಿದ್ದ.

ಆದರೆ ಆರತಿಯ ನಂಬಿಕೆಗಳು ಹೆಚ್ಚು ದಿನ ಬಾಳಲಿಲ್ಲ, ತಾನೊಬ್ಬಳೇ ಸ್ವಾಮೀಜಿಯ ಇಂಥ ಮುಕ್ತಿ ಸಾಧನೆಗೆ ಆಯ್ಕೆಯಾದವಳೆಂಬ ಆಕೆಯ ನಂಬಿಕೆ ಹುಸಿಯಾಗಿತ್ತು, ರಾಗಿಣಿ, ಗೋಪಿಕಾ, ರಶ್ಮಿ ಮುಂತಾದ ಖಾಯಂ ಸಖಿಯರಲ್ಲದೆ ಆಗಾಗ ವಿದೇಶಗಳಿಂದ ಬರುತ್ತಿದ್ದ ಭಕ್ತೆಯರನ್ನು ನಿತ್ಯಾನಂದ ಇದೇ ರೀತಿ ಬಳಸಿಕೊಳ್ಳುತ್ತಿದ್ದ. ಹೀಗೆ ಆಪ್ತ ವಲಯಕ್ಕೆ ಜಮೆಗೊಂಡ ಹೆಂಗಸರನ್ನೆಲ್ಲಾ ಪಳಗಿಸುತ್ತಿದ್ದುದು ಮಾ ನಿತ್ಯ ಗೋಪಿಕಾ ಅಲಿಯಾಸ್ ವಿದ್ಯಾ ವಿಶ್ವನಾಥನ್!

ಒಂದು ಹಂತದವರೆಗೆ ಪಳಗಿ ನಿತ್ಯಾನಂದ ಆಪ್ತ ಬಳಗಕ್ಕೆ ಜಮೆಗೊಂಡು ತಮ್ಮ ಮೂಲ ಹೆಸರು ತೊರೆದು ಮಾ ನಿತ್ಯ ಶೋಭಿತ, ಮಾ ನಿತ್ಯಾನಂದ ಪ್ರೇಮೇಶ್ವರಿ, ಮಾ ನಿತ್ಯಾನಂದ ದಾಸಿ, ಮಾ ನಿತ್ಯ ಪ್ರಿಯಕರಿ ಎಂದು ಬದಲಿಸಿಕೊಂಡದ್ದನ್ನೇ ಕಾದು ಅವರಿಗೆ ತಾಂತ್ರಿಕ್ ಸೆಕ್ಸ್ ಮತ್ತು ರಜನೀಶರ ಸಂಭೋಗದಿಂದ ಸಮಾಧಿ ಸಿದ್ಧಾಂತವನ್ನು ಅರೆಬರೆಯಾಗಿ ತಲೆಗೆ ತುಂಬುತ್ತಿದ್ದರು. ಸ್ವಾಮಿಜಿಗೆ ಪರಮಾಪ್ತರಾಗಲೂ ಮತ್ತು ಮುಕ್ತಿಯನ್ನು ಅತಿ ಸುಲಭವಾಗಿ ಪಡೆಯುವ ಉನ್ನತ ವಿಧಾನವೇ ತಾಂತ್ರಿಕ್ ಸೆಕ್ಸ್ ಎಂದು ನಂಬಿಸುತ್ತಿದ್ದರು.

ಹೀಗೆ ತಾಂತ್ರಿಕ್ ಸೆಕ್ಸ್‌ಗೆಂದು ಒಮ್ಮೆ ಹೆಂಗಸೊಬ್ಬಳನ್ನು ಪಳಗಿಸಿಬಿಟ್ಟರೆ ಆಕೆ ಅಜೀವ ಪರ್ಯಂತ ನಿತ್ಯಾನಂದನ ದಾಸಿಯಾಗಿರುತ್ತಾಳೆಂದು ನಿತ್ಯಾನಂದ ಭಾವಿಸಿದ್ದ. ಅದಕ್ಕೆಂದೇ ನಿತ್ಯ ಗೋಪಿಕಾ ಮತ್ತು ರಾಗಿಣಿಯನ್ನು ನೇಮಿಸಿಕೊಂಡಿದ್ದ. ಬರುಬರುತ್ತ ಆರತಿ ಸಖ್ಯ ಹಳತಾದಂತೆಲ್ಲ ನಿತ್ಯಾನಂದನ ವಿಕೃತಿ ಕೆರಳಿ ಹೊಸ ಹೊಸ ಹೆಂಗಸರಿಗಾಗಿ ಆತ ಹಂಬಲಿಸುವ ಸಂಗತಿ ಬಯಲಾಗಿದೆ. ಬಲೆಗೆ ಬಿದ್ದ ಬಹುತೇಕ ಅಸಹಾಯಕ ಹೆಂಗಸರನ್ನು ರಾಗಿಣಿ ಮತ್ತು ಗೋಪಿಕಾ ಸೇರಿಕೊಂಡೇ ತಾಂತ್ರಿಕ್ ಸೆಕ್ಸ್‌ಗೆ ಪುಸಲಾಯಿಸುತ್ತಿದ್ದರು. ಒಮ್ಮೆ ತಾಂತ್ರಿಕ್ ಸೆಕ್ಸ್‌ಗೆ ಸಮ್ಮತಿಸಿದರೆಂದರೆ ಗೋಪಿಕಾಳೇ ನಿಂತು ಸೆಕ್ಸ್ ಕಾಂಟ್ರಾಕ್ಟ್ ಒಪ್ಪಂದಕ್ಕೆ ಸಹಿ ಹಾಕಿಸಿಕೊಳ್ಳುತ್ತಿದ್ದಳು. ಸೆಕ್ಸ್ ಕಾಂಟ್ರಾಕ್ಟ್ ಅರ್ಥಾತ್ **Nondisclosure Agreement** ಅಂದರೆ ತಾಂತ್ರಿಕ್ ಸೆಕ್ಸ್ ಹೆಸರಲ್ಲಿ ನಿತ್ಯಾನಂದನ ಕಾಮತೃಷೆಗೆ ಈಡಾದ ಯಾವ ಹೆಂಗಸೂ ಅದನ್ನು ಹೊರ ಜಗತ್ತಿಗೆ ಬಹಿರಂಗಪಡಿಸುವಂತಿಲ್ಲ!

ನಾಪತ್ತೆಯ ರಹಸ್ಯ

ಹಾಗೊಮ್ಮೆ ರಹಸ್ಯ ಕಾಪಾಡದೇ ತಾಂತ್ರಿಕ್ ಸೆಕ್ಸ್ ಬಗ್ಗೆ ಬಾಯಿ ಬಿಟ್ಟದ್ದೇ ಆದರೆ ಅದರ ವಿರುದ್ಧ ಕಾನೂನು ಕ್ರಮ ಜರುಗಿಸುವ ಷರತ್ತಿಗೂ ಬಲಿಯಾದ ಮಹಿಳೆ ಸಹಿ ಹಾಕಿರುತ್ತಾಳಾದ್ದರಿಂದ ಮುಂದೆ ತನಗೆಲ್ಲಿ ಶಿಕ್ಷೆಯಾಗುತ್ತೋ ಎಂಬ ಭೀತಿ ಇದ್ದೇ ಇರುತ್ತದೆ. ಇಂಥ ಕರಾಳ ಒಪ್ಪಂದದ ರೂವಾರಿಯೇ ಮಾ ನಿತ್ಯ ಗೋಪಿಕಾ. ವಿದೇಶಗಳಿಗೆ ನಿತ್ಯಾನಂದ ಪ್ರವಾಸ ಹೊರಟಾಗಲೆಲ್ಲಾ ಈಕೆಯನ್ನೇ ಜೊತೆಗೊಯ್ಯುತ್ತಿದ್ದ. ತನ್ನ ಬಿಡದಿಯ ಧ್ಯಾನಪೀಠದ ಇಡೀ ಉಸ್ತುವಾರಿಯನ್ನೇ ಆಕೆಗೆ ವಹಿಸಿದ್ದ. ನಿತ್ಯಾನಂದ ಆಪ್ತಕಾರ್ಯದರ್ಶಿ ಎಂದೇ ಚಾಲ್ತಿಯಲ್ಲಿದ್ದ ಗೋಪಿಕಾ ಕೇವಲ ತಾಂತ್ರಿಕ್ ಸೆಕ್ಸ್ ಮತ್ತು ಸೆಕ್ಸ್ ಕಾಂಟ್ರಾಕ್ಟ್‌ನ ಉಸ್ತುವಾರಿಯಲ್ಲದೆ ನಿತ್ಯಾನಂದನ ರಿಯಲ್ ಎಸ್ಟೇಟ್ ವ್ಯವಹಾರ, ವಿದೇಶಿ ಹಣಕಾಸಿನ ಮೂಲಗಳೆಲ್ಲದರ ಹೊಣೆ ಹೊತ್ತವಳು.

2010 ರ ಮಾರ್ಚ್‌ನಲ್ಲಿ ನಿತ್ಯಾನಂದನ ಸೆಕ್ಸ್ ವೀಡಿಯೋ ಬಯಲಾಗಿದ್ದೇ ತಡ ಹಿಮಾಚಲ ಪ್ರದೇಶದ ಸೋಲನ್ ಎಂಬ ಪ್ರವಾಸಿ ತಾಣದಲ್ಲಿ ತಲೆಮರೆಸಿಕೊಂಡಿದ್ದ. ಆತನ ಜೊತೆಗೇ ಗೋಪಿಕಾ ಕೂಡ ಪರಾರಿಯಾಗಿದ್ದಳು. ಆನಂತರ ಸಿಐಡಿ ಪೊಲೀಸರು ನಿತ್ಯನನ್ನು ಅಲ್ಲಿಂದಲೇ ಹಿಡಿದು ತಂದರು. ಆದರೆ ಗೋಪಿಕಾ ಮಾತ್ರ ಸಿಗಲೇ ಇಲ್ಲ, ಆಕೆ ನಾಪತ್ತೆಯಾಗಿ ಇಲ್ಲಿಗೆ ಎರಡು ವರ್ಷಗಳೇ ಕಳೆದಿವೆ. ನಿತ್ಯಾನಂದನ ಪಿಪಾಸೆಯ ವಿರುದ್ಧ ಸಿಐಡಿ ಪೊಲೀಸರು ಚಾರ್ಜ್ ಶೀಟ್ ಕೂಡ ಹಾಕಿದ್ದಾರೆ. ಪ್ರಕರಣದಲ್ಲಿ ಗೋಪಿಕಾ ಕೂಡ ಪ್ರಮುಖ ಆರೋಪಿಯೆ. ಇವತ್ತು ಆರತಿ ಅಕ್ಷರಶಃ ಬೀದಿಪಾಲು. ಗಂಡ, ಮನೆ, ಕೂಡಿಟ್ಟ ಕಾಸು, ಮಾನ ಮರ್‍ಯಾದೆ ಎಲ್ಲವನ್ನೂ ನಿತ್ಯಾನಂದ ಕೊಳ್ಳೆ ಹೊಡೆದಿದ್ದಾನೆ.

ಆರತಿಯನ್ನು ಈ ಗತಿಗೆ ತಂದ ನಿತ್ಯಾನಂದನ ಜೊತೆ ಪ್ರಮುಖ ಪಾತ್ರಧಾರಿಯಾದ ಗೋಪಿಕಾ ಮಾತ್ರ ಇವತ್ತಿಗೂ ನಾಪತ್ತೆ. ಅದೆಷ್ಟು ಹೆಣ್ಣು ಮಕ್ಕಳನ್ನು ನಿತ್ಯಾನಂದ ಮುಕ್ಕಿದ್ದಾನೆಂಬ ಲೆಕ್ಕ ಸಿಗಬೇಕೆಂದರೆ ಗೋಪಿಕಾಳೇ ಬಂದು ಸಾಕ್ಷಿ ಹೇಳಬೇಕು ಅಥವಾ ಪೊಲೀಸರು ಆಕೆಯ ಬಾಯಿ ಬಿಡಿಸಬೇಕು ಬಹುಶಃ ನಿತ್ಯಾನಂದ ಆಕೆಯನ್ನು ಶಾಶ್ವತವಾಗಿ ಮುಗಿಸಿರಬಹುದೆ?

ಮಾ ನಿತ್ಯಗೋಪಿಕಾಳ ನಿಗೂಢ ನಾಪತ್ತೆಯ ಚಿದಂಬರ ರಹಸ್ಯವನ್ನು ಬಿಡಿಸುವರ್‍ಯಾರು? ಸಿಐಡಿ ಪೊಲೀಸರೇಕೆ ಈ ಬಗ್ಗೆ ಬಾಯಿ ಬಿಡುತ್ತಿಲ್ಲ?

• ರಾ. ಸೋಮನಾಥ್



ಆರತಿ

ಮಹಾಂತೇಶ್ ಕೊಲೆ: ಗೃಹಮಂತ್ರಿಯ ಬುಡಕ್ಕೆ! ಅನುಮಾನದ ಮುಳ್ಳು

...ನೆಗೂ ಕೆಎಎಸ್ ಅಧಿಕಾರಿ ಮಹಾಂತೇಶ್ ...ಸಿಕ್ಕಿಬಿದ್ದಿದ್ದಾರೆ. ಇನ್ನೂರು ಮಂದಿ ಪೊಲೀಸರು, ...ಪೆಕ್ಟರ್‌ಗಳು, ನಾಲ್ವರು ಎಸಿಪಿಗಳು, ...ಸಿಪಿಗಳು, ಓರ್ವ ಜಂಟಿ ಕಮಿಷನರ್ ಮತ್ತು ...ಖುದ್ದು ನೇತೃತ್ವ ವಹಿಸಿದ ಪೊಲೀಸ್ ...ರ್ ಸೇರಿಕೊಂಡು ಭೇದಿಸಿದ ಚಿದಂಬರ ರಹಸ್ಯಕ್ಕೂ ...ಮ ಇಲಿ ಹಿಡಿದಿದ್ದಕ್ಕೂ ದೊಡ್ಡ ವ್ಯತ್ಯಾಸವೇನಿಲ್ಲ. ...ದ್ದ ನಾಲ್ವರು ಹಂತಕರ ಪೈಕಿ ಸುಪಾರಿ ಕೊಟ್ಟ ...ಮಾರ್ ಸಹಕಾರ ನಗರದ ಪತ್ತಿನ ಸಹಕಾರ ...ಕೌಂಟೆಂಟ್. ಈತನ ಜೊತೆ ವೈಯಾಲಿಕಾವಲ್‌ನ ...ಮಲ್ಲೇಶ್ವರದ ಮುರಳಿ ಮತ್ತು ಸಂಪಂಗಿರಾಮನಗರದ ...ರ್ ಸೇರಿಕೊಂಡು ಮಾರ್ಚ್ 15 ರ ರಾತ್ರಿ ...ೇಶ್‌ರನ್ನು ಬೆನ್ನಟ್ಟಿ ಕೊಂದರೆಂಬುದು ಪೊಲೀಸ್ ...ರ್ ಮಿರ್ಜಿ ಸಾಹೇಬರ ಹೇಳಿಕೆ.

...ಗೆ ರಿಯಲ್ ಎಸ್ಟೇಟ್ ಮಾಫಿಯಾಕ್ಕೂ ...ೇಶ್ ಹತ್ಯೆಗೂ ಸಂಬಂಧವಿದೆಯೆಂಬ ಪತ್ರಿಕೆಗಳ ... ನಿಜವಾದಂತಾಗಿದೆ. ಶುರುವಿನಲ್ಲಿ ಅದೊಂದು ... ಎಂದು ಸಾಗಹಾಕಲು ಯತ್ನಿಸಿದ, ಆನಂತರ ...ೋ ಕಾಲ್‌ಗರ್ಲ್ ಕತೆ ಹೊಡೆದ ಪೊಲೀಸರ ... ಈಗ ಸಿಕ್ಕಿಬಿದ್ದ ಹಂತಕರ ಕತೆಗೂ ಮಧ್ಯೆ ...ೋ ಮಿಸ್ಸಿಂಗ್ ಲಿಂಕ್ ಹೊಡೆಯುತ್ತಿರುವುದು ...ಡೀ ಮಹಾಂತೇಶ್ ಕೊಲೆ ಪ್ರಕರಣದ ತನಿಖೆಯ ...ಯಂತಿದೆ.

... ಪೊಲೀಸರು ಪತ್ತೆಹಚ್ಚಿದ ನಾಲ್ವರು ಹಂತಕರ ...ಪಾರಿ ಕೊಟ್ಟ ಕಿರಣ್ ಕುಮಾರ್ ಸಹಕಾರ ...ಪಕ್ಕದ ಸಂಜೀವನಗರದವನು: ವಯಸ್ಸಿನ್ನೂ 23 ...ತೆ. ಇಂಥವನನ್ನು ಸಹಕಾರನಗರ ಪತ್ತಿನ ಸಹಕಾರ ...ಕೌಂಟೆಂಡ್ ಆಗಿ ಕಳೆದ ನಾಲ್ಕು ವರ್ಷಗಳಿಂದ ...ಕೊಂಡಿದ್ದರಂತೆ. ಇನ್ನೂ ತಲೆಮಾಸದ, ಲೋಕಜ್ಞಾನ ... ಅಕೌಂಟೆಂಟ್ ಆಗುವ ಯಾವುದೇ ಅರ್ಹತೆ, ...ತೆಯಿಲ್ಲದ ಕಿರಣ್‌ನನ್ನು ಕೋಟಿಗಟ್ಟಲೇ ವಹಿವಾಟಿ ...ಕಾರನಗರ ಪತ್ತಿನ ಸಹಕಾರ ಸಂಘದ ಅಕೌಂಟೆಂಟ್ ...ರಾದರೂ ಏಕೆ ಮತ್ತು ಹೇಗೆ ನೇಮಿಸಿಕೊಳ್ಳಲು ...ಂಬುದೇ ಮೊದಲ ಪ್ರಶ್ನೆ.

...ಮಂತ ಕೆಎಎಸ್ ಅಧಿಕಾರಿ ಮಹಾಂತೇಶ್ ಹತ್ಯೆಗೂ ...ರಿನ ಲ್ಯಾಂಡ್ ಮಾಫಿಯಾಕ್ಕೂ ಇರುವ ನಂಟಿನ ...ನ ಶುರುವಾಗುವುದೇ ಈ ಪ್ರಶ್ನೆಯಿಂದ. ಪೊಲೀಸರ ...ಕಿರಣ್ ಕಳೆದ ನಾಲ್ಕು ವರ್ಷಗಳಿಂದ ಸಹಕಾರನಗರ ... ಸಂಘಕ್ಕೆ ಅಕೌಂಟೆಂಟ್ ಆಗಿದ್ದ. ಕ್ಯಾಷಿಯರ್ ...ರಿಯನ್ನೂ ಈತನೇ ನಿರ್ವಹಿಸುತ್ತಿದ್ದ. ಸಂಘದ ...ಜಮೆಯಾಗಿದ್ದ ಲಕ್ಷಗಟ್ಟಲೆ ದುಡ್ಡನ್ನು ತನ್ನ ಜೋಬಿಗೆ ...ಂಡಿದ್ದ. ಯಾವತ್ತು ಸಂಘದ ಲೆಕ್ಕ ಪರಿಶೋಧನೆ ...ಸಹಕಾರ ಸಂಘಗಳ ಲೆಕ್ಕ ಪರಿಶೋಧನಾಧಿಕಾರಿಯಾಗಿ ...ತೇಶ್ ಬರಲಿದ್ದಾರೆಂದು ನೋಟೀಸು ಬಂತೋ ...ವ್ಯವಹಾರ ಬಯಲಾಗುವ ಆತಂಕಕ್ಕೆ ಬಿದ್ದ.

...ದರಂತೆ ಮಾರ್ಚ್ 15 ರಂದು ಮಹಾಂತೇಶ್ ...ಪರಿಶೋಧನೆಗೆಂದು ಬಂದೇ ಬಿಟ್ಟರು. ಲೆಕ್ಕ ...ೋಧನೆ ಮುಗಿಸಿಕೊಂಡು ಸಂಜೆ ಏಳರ ಸುಮಾರಿಗೆ ...ತೇಶ್ ವಾಪಸ್ಸಾಗುತ್ತಿದ್ದಂತೆ ತನ್ನ ವಂಚನೆ ಬಯ...ನ ಭಯದಲ್ಲಿ ಕಿರಣ್ ತನ್ನ ಸಹಚರರಾದ ಅಯ್ಯಪ್ಪ ... ಮತ್ತು ಶಿವಕುಮಾರ್‌ರನ್ನು ಕರೆಸಿಕೊಂಡ. ಅಯ್ಯಪ್ಪನ ... ಕಾರಿನಲ್ಲಿ ಮಹಾಂತೇಶ್‌ರನ್ನು ಹಿಂಬಾಲಿಸಿಕೊಂಡು ... ಸರ್ಕಲ್ ಬಳಿಯೇ ಅಟ್ಯಾಕ್ ಮಾಡಲು ...ಲಾಯಿತಾದರೂ ರಸ್ತೆಯಲ್ಲಿ ಜನಜಂಗುಳಿಯಿ...ಂದ ಎಲ್ಲಿ ಸಿಕ್ಕಿಬೀಳುತ್ತೇವೋ ಎಂದು ಅದನ್ನು ...ರು.

...ಗೇ ಹಿಂಬಾಲಿಸಿಕೊಂಡು ಬಂದವರಿಗೆ ಪ್ರಶಸ್ತವೆ... ವಿಟ್ರಿಯಾ ಹೋಟೆಲ್ ಮುಂಭಾಗದ ಪ್ಯಾಲೆಸ್ ... ನಿರ್ಜನ ತಾಣ. ಅಲ್ಲಿ ಏಕಾಏಕಿ ಹಿಂದಿನಿಂದ ...ದ್ದೆ ಮಹಾಂತೇಶ್ ಕಾರಿಗೆ ಗುದ್ದಿದ್ದಾರೆ. ತಕ್ಷಣವೇ ... ನಿಲ್ಲಿಸಿ ಏನಾಯಿತೆಂದು ಪ್ರಶ್ನಿಸಲು ಬಂದ ...ಂತೇಶ್‌ರನ್ನು ಜೊತೆ ತಂದಿದ್ದ ಕ್ರಿಕೆಟ್ ಸ್ಟಂಪುಗಳಿಂದ ...ದಿದ್ದಾರೆ. ಕೊಲೆ ಮಾಡದೇ ಕೇವಲ ಹೆದರಿಸುವ ...ಶದಿಂದ ಹಲ್ಲೆ ನಡೆಸಿದ್ದು, ದುರಾದೃಷ್ಟವಶಾತ್ ...ಂತೇಶ್ ತಲೆಗೆ ಬಿದ್ದ ತೀವ್ರ ಪೆಟ್ಟಿನಿಂದಾಗಿ ಪ್ರಾಣ ...ಬಿಟ್ಟರಂತೆ.

...ದು ಪೊಲೀಸರು ಹೇಳುತ್ತಿರುವ ಚಂದಮಾಮಾ ... ಪ್ರಕಾರ ಮಹಾಂತೇಶ್ ಹಂತಕರ ನೇತೃತ್ವ ವಹಿಸಿದ್ದ ...ಕುಮಾರ್ ದುಶ್ಚಟಗಳ ದಾಸನಾಗಿದ್ದ. ಕುಡಿತ, ಬಾರು, ...ಬ್ಬುಗಳು, ಆಗಾಗ ಗೋವಾದ ವೇಶ್ಯಾವಾಟಿಕೆಗಳಿಗೂ ... ಬರುತ್ತಿದ್ದ. ಇದಕ್ಕೆಲ್ಲ ಖರ್ಚಿಗೆಂದು ಸಂಘದ ... ಬಳಸಿಕೊಂಡಿದ್ದ (ಸರಿಸುಮಾರು ಯಾವ ಮೊತ್ತದ ...ಬ ಬಗ್ಗೆ ಪೊಲೀಸರಿಗೆ ಲೆಕ್ಕ ಗೊತ್ತಿಲ್ಲ). ಕಿರಣ್ ...ಗೆ ಆತನ ತಂದೆ ಶ್ರೀಕಾಂತ್ ಭಟ್‌ರ ಅಕಾಲ ಮೃತ್ಯುವಿನಿಂದಾಗಿ ಅವರು ನಿರ್ವಹಿಸುತ್ತಿದ್ದ ಕ್ಯಾಷಿಯರ್ ಹುದ್ದೆಯನ್ನೇ ನೀಡಲಾಗಿತ್ತಂತೆ.



ಮಹಾಂತೇಶ್


ಇದು ನಿಜವೇ ಆಗಿದ್ದರೆ ಇಂಥದೊಂದು ಸಣ್ಣ ಮಾಮೂಲಿನ ಎಲ್ಲಾ ಮಾಹಿತಿಯುಳ್ಳ ಪ್ರಕರಣದ ತನಿಖೆಗೆ ಮತ್ತು ಹಂತಕರ ಪತ್ತೆಗೆ ಇಷ್ಟೊಂದು ಮಂದಿ ಪೊಲೀಸರೂ ಇಷ್ಟೊಂದು ದಿನಗಳ ಕಾಲಾವಕಾಶವೂ ಏಕೆ ಬೇಕಿತ್ತು? ಮಾರ್ಚ್ 15ರಂದು ಹೇಗೂ ಮಹಾಂತೇಶ್ ಸಹಕಾರನಗರ ಪತ್ತಿನ ಸಂಘದ ಆಡಿಟ್‌ಗೆಂದು ಬಂದಿದ್ದು ಗೊತ್ತೇ ಇತ್ತು. ಆನಂತರ ಕಿರಣ್‌ಕುಮಾರ್‌ನ ಮೊಬೈಲಿನ ಟವರ್ ಗ್ರಹಿಕೆ ಮತ್ತು ಚಲನವಲನ ಗಮನಿಸಿದ್ದರೆ ಕೊಲೆಯಾಗುವ ವೇಳೆ ಕಿರಣ್ ಕೂಡ ವಿಟ್ರಿಯಾ ಬಳಿಯೇ ಇದ್ದದ್ದು ಸಲೀಸಾಗಿ ಗೊತ್ತಾಗಬೇಕಿತ್ತು.

ಸರಿ, ಗೊತ್ತಾಗಲಿಲ್ಲ ಎಂದೇ ಇಟ್ಟುಕೊಂಡರೂ ಮಹಾಂತೇಶ್ ಯಾವ ವಿಷಯದ ಆಡಿಟ್‌ಗೆಂದು ಬಂದಿದ್ದರೋ ಆ ವಿಷಯವನ್ನು ಕೆದಕಿ ಬಿಟ್ಟಿದ್ದರೆ ಸತ್ಯ ಗೊತ್ತಾಗಬೇಕಿತ್ತು. ಇದೆಲ್ಲ ಒತ್ತಟ್ಟಿಗಿಟ್ಟು ಮತ್ತೊಂದು ಮಗ್ಗಲಿನಿಂದ ಈ ಪ್ರಕರಣವನ್ನು ಕೆದಕಿ ನೋಡಿದರೆ ಇಡೀ ಪ್ರಕರಣಕ್ಕೆ ಬೇರೆಯದೇ ಭಯಾನಕ ಆಯಾಮವಿರುವುದು ಮತ್ತು ಪೊಲೀಸರು, ಗೃಹಮಂತ್ರಿ ಸೇರಿಕೊಂಡೇ ಅದನ್ನು ಮುಚ್ಚಿ ಹಾಕಲೆತ್ನಿಸುತ್ತಿರುವುದರ ವಾಸನೆ ಹತ್ತುತ್ತದೆ.



ಯಾವುದೇ ಸಂಘದಲ್ಲಿ ಹಣಕಾಸಿನ ಅವ್ಯವಹಾರ ನಡೆದಿದ್ದರೆ ಅಕೌಂಟೆಂಟ್ ಆದವನು ಅದರ ಲೆಕ್ಕ ಕೊಡಬೇಕಾದದ್ದು, ಭಯಪಡ ಬೇಕಾದದ್ದು ಆ ಸಂಘದ ಅಧ್ಯಕ್ಷನಿಗೇ ಹೊರತು ಆಡಿಟ್ಟಿಗೆ ಬಂದ ಅಧಿಕಾರಿಗಲ್ಲ. ಆಡಿಟ್ಟಿಗೆ ಬಂದ ಅಧಿಕಾರಿಯ ಬಗ್ಗೆ ಭಯ ಇರಬೇಕಾದದ್ದು ಸಂಬಂಧಪಟ್ಟ ಸಂಘದ ಪದಾಧಿಕಾರಿಗಳು ಮತ್ತು ಲೂಟಿ ಹೊಡೆದ ಡೈರೆಕ್ಟರುಗಳಿಗೆ ಮಾತ್ರ. ಹಾಗಾದರೆ ಸರ್ಕಾರಿ ಲೆಕ್ಕ ಪರಿಶೋಧನಾಧಿಕಾರಿ ಬಂದು ಲೆಕ್ಕ ಕೇಳುವ ತನಕ ಆ ಸಂಘದ ಯಾವೊಬ್ಬ ಪದಾಧಿಕಾರಿಗೂ ಇದು ಗೊತ್ತಾಗಲೇ ಇಲ್ಲವೆ? ಇದರರ್ಥ ಸಹಕಾರನಗರ ಪತ್ತಿನ ಸಹಕಾರ ಸಂಘದ ಯಾರೇ ಒಬ್ಬ ಡೈರೆಕ್ಟರ್, ಆಡಿಟರ್, ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಯಾರೂ ಕಳೆದ ಒಂದು ವರ್ಷದಿಂದ ಹಣಕಾಸಿನ ಲೆಕ್ಕಾಚಾರ ಮಾಡೇ ಇಲ್ಲವೆ?

ಹಾಳಾಗಲಿ, ಕನಿಷ್ಠ ಸರ್ಕಾರಿ ಆಡಿಟರ್ ಬರುತ್ತಿದ್ದಾರೆ ಎಂದ ಮೇಲಾದರೂ ಸಂಘದ ಪದಾಧಿಕಾರಿಗಳು ಹಾಜರಿಬೇಕಿತ್ತಲ್ಲವೆ? ಹಾಗೊಮ್ಮೆ ಲೆಕ್ಕ ಪರಿಶೋಧಕರು ಬರುತ್ತಿದ್ದಾರೆಂದು ನೋಟೀಸನ್ನು ಅಕೌಂಟೆಂಟ್ ಕಿರಣ್ ಸಂಘದ ಯಾವೊಬ್ಬ ಡೈರೆಕ್ಟರ್‌ಗೂ ತೋರಿಸಿರಲಿಲ್ಲ. ಅದನ್ನು ಯಾರ ಗಮನಕ್ಕೂ ತಂದೇ ಇರಲಿಲ್ಲ ಎಂದಿಟ್ಟುಕೊಳ್ಳೋಣ. ಹಾಗಿದ್ದರೆ ಮಹಾಂತೇಶ್ ನೀಡಿದ ಆಡಿಟ್ ವರದಿಯನ್ನೂ ಅಕೌಂಟೆಂಟ್ ಕಿರಣ್ ಯಾರ ಗಮನಕ್ಕೂ ತಾರದೇ



ಮಹಾಂತೇಶ್ ಕೊಲೆ ಆರೋಪಿಗಳು

ಮುಚ್ಚಿಡಬಹುದಿತ್ತಲ್ಲವೆ? ತನ್ನ ಅವ್ಯವಹಾರ ಮತ್ತು ಹಣದ ದುರುಪಯೋಗ ಬಯಲಾಗಿ ಅದರಿಂದ ತೊಂದರೆ ಬರಬಹುದಾದರೆ ಅದು ಸಂಘದ ಮುಖ್ಯಸ್ಥರಿಂದ ಬರಬೇಕೇ ಹೊರತು ಆಡಿಟ್ಟಿಗೆ ಬಂದವನಿಂದಲ್ಲ ಎಂಬುದು ತೀರ ಸರಳ ಸಂಗತಿ ಮಾತ್ರ.

ಆ ಪ್ರಕಾರ ಕಿರಣ್ ಕೊಲ್ಲಬೇಕಿದ್ದದ್ದು ಸಂಘದ ಅಧ್ಯಕ್ಷನನ್ನೇ ಹೊರತು ಆಡಿಟ್ಟಿಗೆ ಬಂದವನನ್ನಲ್ಲ. ತೀರ ಕೊಲ್ಲುವಷ್ಟು ಮೊತ್ತದ ದುಡ್ಡನ್ನು ಪತ್ತಿನ ಸಂಘವೊಂದರಲ್ಲಿ ಯಕಶ್ಚಿತ್ ಅಕೌಂಟೆಂಟ್ ಒಬ್ಬ ಹೊಡೆಯಲು ಸಾಧ್ಯ ಮತ್ತು ಅದರ ಪದಾಧಿಕಾರಿಗಳು ವರ್ಷಗಟ್ಟಲೇ ಲೆಕ್ಕ ಕೇಳುವುದೇ ಇಲ್ಲ ಎಂಬ ಸಂಗತಿಯೇ ಹಾಸ್ಯಾಸ್ಪದ ಮತ್ತು ಬಾಲಿಶವಾಗಿ ಕಾಣುತ್ತದೆ. ಕನಿಷ್ಠ ಗಣಿತಬಲ್ಲ ಜನಸಾಮಾನ್ಯರಿಗೆ ಇದು ವಿಚಿತ್ರವಾಗಿ ಕಾಣುತ್ತದೆಯೆಂದ ಮೇಲೆ ಪೊಲೀಸರೇಕೆ ಪೆದ್ದಂಭಟ್ಟರಂತೆ ಬಾಲಿಶವಾಗಿ ಕತೆ ಹೊಡೆಯುತ್ತಿದ್ದಾರೆ?

ಹಕೀಕತ್ತೇ ಬೇರೆಯಿದೆ. ಅದು ಸಹಕಾರನಗರದ ಪತ್ತಿನ ಸಹಕಾರ ಸಂಘ ಮತ್ತು ಅದನ್ನು ಮುಂದಿಟ್ಟುಕೊಂಡು ಈ ಭಾಗದ ಲ್ಯಾಂಡ್ ಮಾಫಿಯಾ ನಡೆಸುವ ಬೇನಾಮಿ ಅವ್ಯವಹಾರ. ಸದ್ಯ ಸಹಕಾರನಗರದ ಪತ್ತಿನ ಸಹಕಾರ ಸಂಘದ ಅಧ್ಯಕ್ಷನಾಗಿರುವುದು ಗುರುದಾಸ್ ರೈ ಎಂಬ ದಕ್ಷಿಣ ಕನ್ನಡ ಮೂಲದ ಆಸಾಮಿ. ಹೆಸರಿಗಷ್ಟೇ ಈತ ಅಧ್ಯಕ್ಷನಾದರೂ ಇದಕ್ಕೆ ತನ್ನ ಛೇಲಾಗಳನ್ನು ಡೈರೆಕ್ಟರ್‌ಗಳಾಗಿ ನೇಮಿಸಿ ಸಂಘದ ಅವ್ಯವಹಾರ, ಚುನಾವಣೆ, ಲೇವಾದೇವಿ ಎಲ್ಲವನ್ನೂ ನಿಯಂತ್ರಿಸುವವನು ಇದೇ ಸಹಕಾರನಗರದ ಲ್ಯಾಂಡ್ ಡೀಲರ್ ಬಿ.ಎಂ. ದೇವರಾಜಪ್ಪ!

ಒಂದಾನೊಂದು ಕಾಲಕ್ಕೆ ಸೈಕಲ್ಲಲ್ಲಿ ಕಾಫಿಪುಡಿ ಹೊತ್ತು ಮಾರುತ್ತಿದ್ದ ದೇವರಾಜಪ್ಪ ಇವತ್ತು ನೂರಾರು ಕೋಟಿಯ ಧಣಿ. ಇದೇ ಸಹಕಾರನಗರದಲ್ಲಿ ಗೋಲ್ಡ್ ಜಿಮ್ ಎದುರು ಈತನ ಐಷಾರಾಮಿ ಬಂಗಲೆಯಿದೆ. ಪಕ್ಕದಲ್ಲೇ ಈತನ ಒಡೆತನದ ಪ್ರತಿಷ್ಠಿತ ಕಾವೇರಿ ಕಾಲೇಜ್ ಮತ್ತು ಕಾವೇರಿ ಸ್ಕೂಲ್‌ಗಳು ತಲೆ ಎತ್ತಿನಿಂತಿವೆ. ದೇವನಹಳ್ಳಿ, ಯಲಹಂಕ, ಜಾಲ, ಚಿಕ್ಕಬಳ್ಳಾಪುರ ಸುತ್ತಮುತ್ತ ನೂರಾರು ಎಕರೆ ವಿಸ್ತೀರ್ಣದ ಖಾಸಗಿ ಲೇಔಟುಗಳನ್ನು ಮಾಡಿದ್ದಾನೆ. ಇನ್ನೂ ಹೇಳಬೇಕೆಂದರೆ ಸದ್ಯದ ಸಹಕಾರನಗರ ಎಂಬ ಬಡಾವಣೆಯ ಮೂಲಪುರುಷನೇ ದೇವರಾಜಪ್ಪ!

ಯಕಶ್ಚಿತ್ ಪೋಸ್ಟ್ ಮ್ಯಾನ್ ಆಗಿದ್ದ ದೇವರಾಜಪ್ಪ ಈ ಪಾಟಿ ಆಸ್ತಿ ಐಶ್ವರ್ಯ ಸಂಪಾದಿಸಲು ಕಾರಣವಾಗಿದ್ದೇ **Ministry of Communication Employees House Building Society** ಅಂದರೆ ದೂರಸಂಪರ್ಕ ಇಲಾಖೆ ನೌಕರರ ಗೃಹ ನಿರ್ಮಾಣ ಸಂಘದ ಮೂಲಕ. ಇಂಥದೊಂದು ಸಂಘವನ್ನು ಹುಟ್ಟುಹಾಕಿದ್ದೇ ದೇವರಾಜಪ್ಪ.

ಸಹಕಾರ ಬಡಾವಣೆಯನ್ನು ಹುಟ್ಟಿಹಾಕಿದ್ದೂ ಅಲ್ಲದೆ ಅಕ್ಕಪಕ್ಕದ ಗೋಮಾಳ, ಸರ್ಕಾರಿ ಭೂಮಿ ಎಲ್ಲವನ್ನೂ ಕಬಳಿಸಿದ ದೇವರಾಜಪ್ಪ ಆ ಕಾಲದಿಂದಲೂ ಪ್ರತಿಷ್ಠಿತ ರಾಜಕಾರಣಿಗಳು, ಮಂತ್ರಿಗಳು, ಪೊಲೀಸ್ ಅಧಿಕಾರಿಗಳು ಮತ್ತು ರೌಡಿಗಳಿಗೆ ಬಿಟ್ಟಿ ಸೈಟು ಕೊಟ್ಟುಕೊಂಡೇ ಬಂದಿದ್ದಾನೆ. ತೀರ ಇತ್ತೀಚೆಗೆ ತನ್ನ ಛೇಲಾಗಳನ್ನು ಡೈರೆಕ್ಟರ್‌ಗಳನ್ನಾಗಿ ಮಾಡಿ MCEHBS ಸೊಸೈಟಿಯನ್ನು ನಿಯಂತ್ರಿಸುತ್ತಿದ್ದಾನೆ.

ಅಕ್ಕಪಕ್ಕದ ಸರ್ಕಾರಿ ಜಮೀನನ್ನು ಕಬಳಿಸಿ ಅದಕ್ಕೆ ನಕಲಿ ದಾಖಲೆ ಸೃಷ್ಟಿಸಿ ಸೈಟುಗಳನ್ನಾಗಿ ವಿಂಗಡಿಸಿ ಅಂಥ ಸೈಟುಗಳ ಮೇಲೆ ಸಾಲ ಪಡೆಯಲು ಈತ ಬಳಸುತ್ತಿದ್ದದ್ದು ಸಹಕಾರನಗರ ಪತ್ತಿನ ಸಂಘವನ್ನು.

ಇಲ್ಲಿಗೆ ಐದು ವರ್ಷದ ಹಿಂದೆ ಈತ ನಡೆಸಿದ ಭಯಾನಕ ಭೂಕೊಳ್ಳೆಗೆ ಬಲಿಯಾಗಿದ್ದು ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ಹೊಸಳ್ಳಿ ಗ್ರಾಮದ ಸರ್ವೆ ನಂಬರ್ 21 ರ ಜಮೀನು. ಕಮ್ಮಿಯೆಂದರೂ ಇದು 250 ಎಕರೆಯ ಸೊತ್ತು. ಸದ್ಯದ ಮಾರುಕಟ್ಟೆ ರೇಟಿನ ಪ್ರಕಾರವೇ ಎಕರೆಯೊಂದಕ್ಕೆ ಐದರಿಂದ ಎಂಟು ಕೋಟಿ ಆರು ಬೆಲೆ ಇದೆ. ಸರಾಸರಿ ಕೋಟಿ ಎಂದೇ ಲೆಕ್ಕಹಾಕಿದರೂ ಅದು ಒಂದೂವರೆ ಸಾವಿರ ಕೋಟಿಯ ಸೊತ್ತಾಗುತ್ತದೆ.

ಹೇಳಿಕೇಳಿ ಹೊಸಳ್ಳಿ, ಸರ್ವೆ ನಂಬರ್ 21 ಸರ್ಕಾರಿ ಗೋಮಾಳ. ಹಿಂದೆ ಬಾಲಕೃಷ್ಣೇಗೌಡ (ದೇವೇಗೌಡರ ಮಗ) ವಿಶೇಷ ಜಿಲ್ಲಾಧಿಕಾರಿಯಾಗಿದ್ದಾಗ ಅದನ್ನು ಮುಂದಿಟ್ಟುಕೊಂಡೇ ಈ ಸೊತ್ತಿಗೆ ಕೈಹಾಕಿದ ದೇವರಾಜಪ್ಪ ಆನಂತರ ಬೇನಾಮಿಗಳನ್ನು ಬಿಟ್ಟೇ ಅದನ್ನು MCEHBS ಸೊಸೈಟಿಗೆ ಮಾರಿದಂತೆ ದಾಖಲೆ ಸೃಷ್ಟಿಸಿದ. ಹೀಗೆ ಸೊಸೈಟಿಗೆ ಸರ್ಕಾರಿ ಭೂಮಿ ಮಾರಿದ ದಾಖಲೆ ಸೃಷ್ಟಿಸಬೇಕೆಂದರೆ ಅಷ್ಟೂ ಭೂಮಿ ಕೃಷಿಭೂಮಿಯಿದ್ದು ವಸತಿ ಉದ್ದೇಶಕ್ಕೆ ಭೂಪರಿವರ್ತನೆಗೊಳ್ಳಬೇಕಲ್ಲ; ಆದಕ್ಕೆಂದು ಈತ ಬಳಸಿಕೊಂಡದ್ದು ರಾಮೇಗೌಡ ಎಂಬ ಕೆಎಎಸ್ ಅಧಿಕಾರಿಯನ್ನು!

ಸದ್ಯ ಐಎಎಸ್‌ಗೆ ಬಡ್ತಿ ಪಡೆದು ಗೃಹ ಮಂತ್ರಿ ಅಶೋಕ್‌ರ ಆಪ್ತ ಕಾರ್ಯದರ್ಶಿಯಾಗಿರುವ ರಾಮೇಗೌಡ ಆ ಹೊತ್ತಿಗೆ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣರ ಕೃಪೆಯಿಂದ ಬೆಂಗಳೂರು ನಗರದ ವಿಶೇಷ ಜಿಲ್ಲಾಧಿಕಾರಿಯಾಗಿದ್ದರು. 250 ಎಕರೆಯ ಸರ್ಕಾರಿ ಸೊತ್ತನ್ನು ಖಾಸಗಿ ವ್ಯಕ್ತಿಯ ಹೆಸರಿಗೆ ಭೂಪರಿವರ್ತನೆ ಮಾಡಿಸಿಕೊಡಬೇಕೆಂದರೆ ಅದರ ಹಿಂದಿನ ಲಾಭ, ಲಂಚ, ಪ್ರಭಾವ ಎಷ್ಟು ಕೋಟಿಗಳ ಲೆಕ್ಕದಲ್ಲಿರಬಹುದೆಂಬುದೇ ಊಹಾತೀತ!

ಹೀಗೆ ಸಲೀಸಾಗಿ ದೋಚಿದ 250 ಎಕರೆಯ ಹೊಸಳ್ಳಿ ಸರ್ವೆ ನಂಬರ್ 21 ರ ಸೊತ್ತನ್ನು MCEHBS ಸೊಸೈಟಿಗೆ ಮಾರಿದಂತೆ ಮಾಡಿ ಅಲ್ಲಿ ಸೈಟುಗಳನ್ನು ವಿಂಗಡಿಸಿ ಆ ಸೈಟುಗಳ ಮೇಲೆ ನೂರಾರು ಕೋಟಿ ಲೆಕ್ಕದ ಸಾಲ ಪಡೆಯಬೇಕೆಂದರೆ ಯಾವ ಬ್ಯಾಂಕುಗಳು ತಾನೇ ದಾಖಲೆ ಪರಿಶೀಲಿಸುವುದಿಲ್ಲ. ಅದಕ್ಕೆಂದೇ ಸೃಷ್ಟಿಸಿಕೊಂಡಿದ್ದು ಸಹಕಾರನಗರ ಪತ್ತಿನ ಸಹಕಾರ ಸಂಘವನ್ನು. ತಮ್ಮದೇ ಛೇಲಾಗಳು ಡೈರೆಕ್ಟರ್‌ಗಳಾಗಿರುವುದರಿಂದ ಕೊಟ್ಟ ನಕಲಿ ದಾಖಲೆಗಳ ಆಧಾರದ ಮೇಲೆ ಕೋಟಿಗಟ್ಟಲೇ ಸಾಲ ಪಡೆದರೆ ಕೇಳುವವರ್ಯಾರು?

ಹೀಗೆ ಸರ್ಕಾರಿ ಸೊತ್ತಿಗೆ ನಕಲಿ ದಾಖಲೆ ಹುಟ್ಟುಹಾಕಿ ನೂರಾರು ಕೋಟಿಯ ಸಾಲ ಎತ್ತಿ ನುಂಗಿಹಾಕಿದ್ದನ್ನು ಮೊದಲ ಬಾರಿ ಪತ್ತೆಹಚ್ಚಿದ್ದು ನಿಷ್ಠಾವಂತ ಕೆಎಎಸ್ ಅಧಿಕಾರಿ ಮಹಾಂತೇಶ್!

ಮಾರ್ಚ್ 15 ರಂದು ಸಂಘಕ್ಕೇ ಬಂದು ಆಡಿಟ್ ಮಾಡಬೇಕಿದ್ದ ಮಹಾಂತೇಶ್‌ಗೆ 250 ಎಕರೆಯ ಭೂಕಬಳಿಕೆಯ ಸ್ಪಷ್ಟ ಅರಿವಿತ್ತು. ಒಮ್ಮೆ ಆಡಿಟ್ ವರದಿಯಲ್ಲಿ ವಂಚನೆ ಬಯಲಾಯಿತೆಂದರೆ ಅದು ಇಡೀ MCEHBS ಸೊಸೈಟಿಯ 1500 ಕೋಟಿ ರೂಪಾಯಿಗಳ ಭೂಕೊಳ್ಳೆಯನ್ನೇ ಬಯಲಿಗೆಳೆಯುತ್ತಿತ್ತು. ಹಾಗಾಗದೇ ತಾವು ಬಚಾವಾಗಬೇಕೆಂದರೆ ಭೂಕೊಳ್ಳೆಯ ಸೂತ್ರಧಾರರು ಮತ್ತು ಅದರ ಫಲಾನುಭವಿಗಳಿಗಿದ್ದ ಒಂದೇ ದಾರಿಯೆಂದರೆ ಮಹಾಂತೇಶ್‌ರನ್ನು ಮುಗಿಸುವುದು.

ಇನ್ನೂ ವಿಕಟವೆಂದರೆ ಲೇಔಟ್ ದೇವರಾಜಪ್ಪನಿಗೆ ಲ್ಯಾಂಡ್ ಸಂಬಂಧಿ ನೆಂಟಸ್ತಿಯಿರುವುದು ಗೃಹಮಂತ್ರಿ ಅಶೋಕ್‌ರ ಖಾಸಾ ತಮ್ಮ ಮತ್ತು ಬ್ಯಾಟರಾಯನಪುರಕ್ಕೆ ಕಳೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಎಸ್. ರವಿಯ ಜೊತೆ. ಸಾಲದ್ದಕ್ಕೆ ದೇವರಾಜಪ್ಪ ಮಂತ್ರಿ ಅಶೋಕ್‌ಗೂ ಪರಮಾಪ್ತ. ಕಳೆದ ಚುನಾವಣೆಯಲ್ಲಿ ಅಶೋಕ್ ತಮ್ಮನ ಪರವಾಗೇ ಈತ ಮತ್ತು ಈತನ ನೆಲಗಳ್ಳ ಹಿಂಡು ಬಿಜೆಪಿ ಬಾವುಟ ಹಿಡಿದು ಪ್ರಚಾರ ನಡೆಸಿತ್ತು. ಭೂಕೊಳ್ಳೆಗೆ ನೇರವಾದ ಐಎಎಸ್ ಅಧಿಕಾರಿ ರಾಮೇಗೌಡರೇ ಈಗ ಗೃಹಮಂತ್ರಿ ಅಶೋಕ್‌ರ ಆಪ್ತ ಕಾರ್ಯದರ್ಶಿ ಬೇರೆ!

ಸದ್ಯ ಪ್ರಕರಣದ ತನಿಖೆ ನಡೆಸಿದ ಡಿಸಿಪಿ ರವಿಕಾಂತೇಗೌಡ ಕೂಡ ಈ ಹಿಂದೆ ಇದೇ ವಲಯಕ್ಕೆ ಡಿಸಿಪಿಯಾಗಿದ್ದು ಅಶೋಕ್ ತಮ್ಮ ಮತ್ತು ಆಪ್ತ ಕಾರ್ಯದರ್ಶಿ ರಾಮೇಗೌಡರ ಪಾಲಿಗೆ ಪರಮಾಪ್ತರು. ಮಹಾಂತೇಶ್ ಹತ್ಯೆ ಮತ್ತು ಹಂತಕರ ಪತ್ತೆಯ ವಿಪರ್ಯಾಸದ ಹಿಂದೆ ಈ ಎಲ್ಲಾ ಶಕ್ತಿಗಳ ಹಿತಾಸಕ್ತಿ ಅಡಗಿದೆಯೇ? ಅಸಲಿ ಹಂತಕರನ್ನು ಮರೆಮಾಚಿ ಯಾರ್‍ಯಾರೋ ಅಬ್ಬೇಪಾರಿಗಳ ತಲೆಗೆ ಕೊಲೆಯ ಪಟ್ಟ ಕಟ್ಟರಬಹುದೆ? ಅಕೌಂಟೆಂಟ್ ಓರ್ವ ಆಡಿಟ್ಟಿಗೆ ಬಂದವನನ್ನು ಕೊಂದು ತಾನು ಬಚಾವಾಗಬಹುದೆಂದು ಭಾವಿಸುವಷ್ಟು ಮೂರ್ಖನಾಗಿರಲು ಹೇಗೆ ಸಾಧ್ಯ?

ಮಹಾಂತೇಶ್ ಆಡಿಟ್ಟಿನಿಂದಾಗಿ ಅಕೌಂಟೆಂಟ್ ಕಿರಣ್ ಸಿಕ್ಕಿಬಿದ್ದು ಒಂದೆರಡು ವರ್ಷ ಜೈಲು ಪಾಲಾಗಿ ಬಚಾವಾಗುವ ಬದಲು ಆಜೀವ ಪರ್ಯಂತ ಜೈಲಲ್ಲೇ ಕಳೆಯುವ ದುಸ್ಸಾಹಸಕ್ಕೆ ಕೈಹಾಕಲು ಹೇಗೆ ಸಾಧ್ಯ?

ಮಹಾಂತೇಶ್‌ರ ವರದಿಯಿಂದ ಮುಳುಗುತ್ತಿದ್ದದ್ದು ಯಾರ ಸಾಮ್ರಾಜ್ಯ ಮತ್ತು ಎಷ್ಟು ಸಾವಿರ ಕೋಟಿಯ ಸಾಮ್ರಾಜ್ಯ?

ಪ್ರತಿಪಕ್ಷಗಳು, ಜನಪರ ಸಂಘಟನೆಗಳು ಇನ್ನೂ ಸುಮ್ಮನಿರಬೇಕೆ? ಪ್ರಾಮಾಣಿಕ ಅಧಿಕಾರಿಯೊಬ್ಬರ ಹತ್ಯೆಯ ಹಿಂದಿರುವ ಸಾವಿರ ಕೋಟಿಯ ರಿಯಲ್ ಎಸ್ಟೇಟ್ ಡೀಲಿನ ಮರ್ಮವನ್ನು ಸಿಬಿಐ ಮಾತ್ರವಲ್ಲದೇ ಅಶೋಕ್ ಅಧೀನ ಪೊಲೀಸರಿಂದ ಭೇದಿಸಲು ಸಾಧ್ಯವೇ?

ಕರಾವಳಿ: ಮೀನುಗಾರಿಕಾ ಬಂದರುಗಳಲ್ಲಿ 'ಬಾಡಿಗೆ' ಮಾಫಿಯಾ!

ಕರಾವಳಿ ತೀರಗಳಲ್ಲಿ ಅರಾಜಕತೆಯದೇ ಪ್ರಭುತ್ವ! ಕರ್ನಾಟಕದ ಮೀನುಗಾರಿಕಾ ಬಂದರುಗಳಲ್ಲಂತೂ ನಾನಾ ನಮೂನೆಯ ಮಾಫಿಯಾ ಬಡ ಬೆಸ್ತರ ಮೇಲೆ ತಾಂಡವ ನೃತ್ಯ ನಡೆಸಿವೆ. ಒಂದು ಸ್ಪಷ್ಟ-ನಿರ್ದಿಷ್ಟ ಮೀನುಗಾರಿಕಾ ನೀತಿ-ನಿಯಮ ರೂಪಿಸದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾತಕದಿಂದ ಮೀನುಗಾರರ ಬದುಕು ಬವಣೆಯಾಗಿದೆ! ಒಂದೆಡೆ ಎಡವಟ್ಟು ಸರ್ಕಾರೀ ಕಾನೂನಿನ ಗಂಡಾಂತರವಾದರೆ, ಮತ್ತೊಂದೆಡೆ ದಲ್ಲಾಳಿಗಳು-ದಾದಾಗಿರಿ ದಂಧೆದಾರರು ಪರಂಪರಾಗತವಾಗಿ ಹೇರಿರುವ ನಿಯಮಾವಳಿಗಳು ಅಸಹಾಯಕ ಕಡಲ ಮಕ್ಕಳನ್ನು ಕಂಗೆಡಿಸಿಬಿಟ್ಟದೆ....

ಮೀನುಗಾರರ ಗೋಳು ಒಂದೆರಡಲ್ಲ, ಕೇರಳದ ಕಡಲಲ್ಲಿ ಇಟಲಿ ವಾಣಿಜ್ಯ ಹಡಗಿನ ದುರುಳರು ನಿಶ್ಶಸ್ತ್ರಧಾರಿ ಮೀನುಗಾರರನ್ನು ಗುಂಡಿಟ್ಟು ಕೊಂದಿದ್ದು, ಕಡಲಲ್ಲಿ ಒಂದೆರಡು ಅಂಗುಲ ದಾರಿತಪ್ಪಿದರೆ ಕಾಲ್ಪನಿಕ ಗಡಿರೇಖೆಯನ್ನೇ ನೆಪವಾಗಿಟ್ಟುಕೊಂಡು ವಿದೇಶಿ ಸೈನಿಕರು ಮೀನುಗಾರರ ಎಳೆದೊಯ್ಯುವುದು, ದೈತ್ಯ ವಾಣಿಜ್ಯ ಹಡಗುಗಳು ರಾತ್ರಿ-ಹಗಲೆನ್ನದೆ ತೀರ ಪ್ರದೇಶ ಹೊಕ್ಕುವ ಭರದಲ್ಲಿ ಪುಟ್ಟ ಮೀನುಗಾರಿಕಾ ಬೋಟ್‌ಗಳನ್ನು ಧ್ವಂಸ ಮಾಡುವುದು, ಭದ್ರತೆಯ ಹೆಸರಲ್ಲಿ ಬೆಸ್ತರ ಪೀಡಿಸುವುದು ನಿರಂತರವಾಗಿ ನಡೆಯುತ್ತಲೇ ಇದೆ; ಪಾಪದ ಮೀನುಗಾರರು ಬಲಿಯಾಗುತ್ತಲೇ ಇದ್ದಾರೆ. ಇತ್ತ ರಾಜ್ಯದ ಪ್ರತಿ ಮೀನುಗಾರಿಕಾ ಬಂದರಿನಲ್ಲಿ ಶೋಷಕ ದಲ್ಲಾಳಿಗಳ ಹಾವಳಿ ಮಿತಿಮೀರಿ ಹೋಗಿದೆ; ಕೆಟ್ಟು ನಿಂತ ಬೋಟ್‌ಗಳನ್ನು ನೀರಿಂದ ದಂಡೆಗೆ ತಂದು ರಿಪೇರಿ ಮಾಡುವಾಗಲೂ ಕಾಡುವ ಮಾಫಿಯಾದ ಸುಲಿಗೆ ಪುಂಡಾಟವಂತೂ ಹೇಳತೀರದು.




ಅಸ್ನೋಟಿಕರ್

ಮಂಗಳೂರಿನ ಕಾರವಾರದವರೆಗೆ ಕರ್ನಾಟಕದ ಕರಾವಳಿ ಸುಮಾರು 320 ಕಿ.ಮೀ. ಉದ್ದಕ್ಕೆ ವ್ಯಾಪಿಸಿದೆ. ಈ ಕಡಲತಡಿಯಲ್ಲಿ ಏನಿಲ್ಲವೆಂದರೂ 5 ಲಕ್ಷ ವಿವಿಧ ಪಂಗಡ-ಧರ್ಮಕ್ಕೆ ಸೇರಿದವರು ಮೀನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡು ಜೀವಿಸುತ್ತಿದ್ದಾರೆ. ಈ ಮಂದಿಯ ಜೀವನಾಧಾರ ದುಡಿತದಿಂದಲೇ ಇವತ್ತು ಮಂಗಳೂರು, ಮಲ್ಪೆ, ಗಂಗೊಳ್ಳಿ, ಭಟ್ಕಳ, ಹೊನ್ನಾವರ, ಕುಮಟಾ, ಬೇಲೇಕೇರಿ, ಮುದುಗಾ, ಕಾರವಾರ ಬಂದರುಗಳು ವಾಣಿಜ್ಯ ಕೇಂದ್ರಗಳಾಗಿ ಗಿಜಿಗುಡುತ್ತಿವೆ. ಜೀವದ ಹಂಗು ತೊರೆದು ಭೋರ್ಗರೆವ ಕಡಲಲ್ಲಿ ಹಗಲಿರುಳೂ ಮೀನು ಹಿಡಿದು ನಾಡಿನ ಆಹಾರ ಮತ್ತು ಆರ್ಥಿಕ ಅಭಿವೃದ್ಧಿಗೆ ಕಾರಣರಾಗುತ್ತಿದ್ದಾರೆ ಈ ಬೆಸ್ತರು. ಕಳೆದೆರಡು ದಶಕದಿಂದ ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ಯಾಂತ್ರಿಕ ಮೀನುಗಾರರಿಗೆ ಈಗ ಬೃಹತ್ ಉದ್ಯಮವಾಗಿ ಮಾರುಕಟ್ಟೆಯಲ್ಲಿ ಮಹತ್ವದ ಟ್ರೆಂಡ್ ಸೃಷ್ಟಿಸಿದೆ!



ಇಷ್ಟಾದರೂ ಸರ್ಕಾರಿ ಪ್ರವೃತ್ತಿಗಳಿಗೆ ಮೀನುಗಾರರೆಂದರೆ ಒಂಥರಾ ಅಸಡ್ಡೆ. ರಾಜಕಾರಣಿಗಳಿಗೆ ಮೀನುಗಾರರು ಓಟಗಷ್ಟೇ ಬೇಕು. ಮೀನುಗಾರರಿಗೆ ಬೇಕಾದ ಇಂಧನ, ಬೋಟ್-ಬಲೆ ಖರೀದಿ, ಅಳಿವೆ ಹೂಳೆತ್ತುವ ಸಮಸ್ಯೆ ಶೈತ್ಯಾಗಾರದ ಬೇಡಿಕೆ, ಐಸ್ ಪ್ಲಾಂಟ್ ಪ್ರಾಬ್ಲಮ್, ಮೀನುಗಾರಿಕಾ ಜೆಟ್ಟಿ, ರಸ್ತೆ ಬೇಡಿಕೆ. ಮಾರುಕಟ್ಟೆಯಲ್ಲಿನ ದಗಾಕೋರರ ದಲ್ಲಾಳಿ ಪೀಡೆಗಳೆಲ್ಲ ಉದ್ಭವಿಸಿದಾಗ ಅಥವಾ ಉಲ್ಬಣಿಸಿದಾಗ ಕರಾವಳಿಯ ಶಾಸಕ-ಸಂಸದ-ಮಂತ್ರಿಗಳು ತಲೆ ತಪ್ಪಿಸಿಕೊಂಡಿದ್ದೇ ಹೆಚ್ಚು. ಈಗ ಮೀನುಗಾರಿಕಾ ಮಂತ್ರಿಯಾಗಿರುವ ಆನಂದ್ ಅಸ್ನೋಟಿಕರ್ ಕರಾವಳಿಯವನೇ ಆದರೂ ಆತನಿಗೆ ಮೀನುಗಾರರೆಂದರೆ ಅಲರ್ಜಿ. ಅಸ್ನೋಟಿಕರ್‌ಗೆ ಮೀನುಗಾರಿಕಾ ಇಲಾಖೆಯಲ್ಲಿನ ವರ್ಗಾವರ್ಗಿ ಬಗ್ಗೆ ಆಸಕ್ತಿ ವಿಪರೀತ. ಈತ ಅದೆಂಥ ಅಸಡ್ಡೆ ಮಂತ್ರಿಯೆಂದರೆ, ಈತನಿಂದ ಮೀನುಗಾರಿಕಾ ಇಲಾಖೆ ತಪ್ಪಿಸಿ ಎಂದು ಸಾಕ್ಷಾತ್ ಸಿಎಂ ಸಾಹೇಬರಿಗೇ ಕರಾವಳಿಯ ಮೀನುಗಾರರು ದೂರು ಕೊಟ್ಟಿದ್ದಾರೆ!

ಆಳುವವರಿಗೆ ಬೆಸ್ತರ ಬಗೆಗಿರುವ ಉದಾಸೀನತೆಯಿಂದಾಗಿಯೇ ಕಾರವಾರದಿಂದ ಮಂಗಳೂರಿನವರೆಗಿನ ಹತ್ತಾರು ಮೀನುಗಾರಿಕಾ ಬಂದರಿನ ಸುತ್ತ ತರತರದ ಮಾಫಿಯಾ ಅಡ್ಡೆ ಹಾಕಿಕೊಂಡಿವೆ. ಧಕ್ಕೆ ಮೇಲಿನ ರಿಪೇರಿ ಮತ್ತು ಬಾಡಿಗೆ ಮಾಫಿಯಾದ ಸುಲಿಗೆ-ಸತಾಯಿಸುವಿಕೆಯಿಂದ ದುರ್ಬಲ ಮೀನುಗಾರರು ಜರ್ಜರಿತರಾಗಿ ಹೋಗಿದ್ದಾರೆ! ಮಂಗಳೂರಿನಿಂದ ಕಾರವಾರ ತನಕದ ಯಾಂತ್ರಿಕ ಮೀನುಗಾರಿಕೆ ಮಳೆಗಾಲದ ಮೂರು ತಿಂಗಳು ನಿಲ್ಲಿಸಲಾಗುತ್ತದೆ. ಕರಾವಳಿಯಲ್ಲಿ ಧಾರಾಕಾರವಾಗಿ-ಬಿರುಸಾಗಿ ಸುರಿವ ಮಳೆಯಿಂದ ಈ ಕಾಲದಲ್ಲಿ ಮೀನುಗಾರರು ತಮ್ಮ ಯಾಂತ್ರಿಕ ದೋಣಿ-ದೊಡ್ಡ ಬೋಟುಗಳನ್ನು ರಕ್ಷಿಸಿಕೊಳ್ಳಬೇಕು; ಯಂತ್ರಗಳನ್ನು ಜತನದಿಂದ ಕಾಪಾಡಿಕೊಳ್ಳಬೇಕು. ಆಗವರು ಯಾಂತ್ರಿಕ ದೋಣಿ-ಬೋಟುಗಳನ್ನು ತೀರಕ್ಕೆ ತಂದು ಪ್ಲಾಸ್ಟಿಕ್ ಹಾಳೆ ಸುತ್ತಿಯೋ ಅಥವಾ ತೆಂಗಿನಗರಿಗಳ ಮಡ್ಲು ಮಾಡು ಕಟ್ಟಿಯೋ ನೀರು ತಾಗದಂತೆ ಕಾಪಾಡಿಕೊಳ್ಳುತ್ತಾರೆ.



ಮಳೆಗಾಲದಲ್ಲಿ ಬೋಟು ಸಂರಕ್ಷಿಸಿಕೊಳ್ಳಲು ಮೀನುಗಾರರಿಗೆ ಸರ್ಕಾರ ಯಾವ ಸೌಲಭ್ಯ-ಸೌಲತ್ತು ಲಾಗಾಯ್ತಿನಿಂದಲೂ ಕೊಡುತ್ತಿಲ್ಲ, ಬಂದರು ಇಲಾಖೆಗೆ ಸೇರಿದ ಜಾಗ ದಡದಲ್ಲಿ ಅಪಾರ ಇದ್ದರೂ ಬೆಸ್ತರಿಗೆ ಅದರಿಂದ ಪ್ರಯೋಜನವಾಗುತ್ತಿಲ್ಲ, ಏಕೆಂದರೆ ಈ ಭೂಮಿ ಉಳ್ಳವರು, ವ್ಯಾಪಾರಿಗಳು ಮೀನುಗಾರಿಕೆ-ಬಂದರು ಇಲಾಖೆಯ ಏಜೆಂಟರ ಹತ್ತಿರದವರ ಅತಿಕ್ರಮಿಸಿ ಅಥವಾ ಲೀಸಲ್ಲಿ ಪಡೆದು ತರಹೇವಾರಿ ವಹಿವಾಟು ನಡೆಸಿ ಮಜಾ ಉಡಾಯಿಸುತ್ತಿದ್ದಾರೆ. ನ್ಯಾಯವಾಗಿ ಮೀನುಗಾರರಿಗೆ ಸೇರಬೇಕಾದ ಈ ಜಾಗ ಮಾಫಿಯಾ ಮುಷ್ಟಿಯಲ್ಲಿ ಸಿಕ್ಕಿಕೊಂಡಿದೆ. ಹೀಗಾಗಿ ಮಳೆಗಾಲದಲ್ಲಿ ಅಥವಾ ಮೀನುಗಾರಿಕೆ ಹಂಗಾಮಿನಲ್ಲಿ ಬೋಟ್ ಕೆಟ್ಟರೆ ರಿಪೇರಿಗೆ ತೀರಕ್ಕೆ ತರುವುದೇ ಮೀನುಗಾರರಿಗೆ ದೊಡ್ಡ ಹಿಂಸಾತ್ಮಕ ಸಮಸ್ಯೆಯಂತಾಗಿದೆ. ಸರ್ಕಾರಿ ಭೂಮಿ ಕಬ್ಜಾ ಮಾಡಿಕೊಂಡಿರುವ ಅಥವಾ ತೀರದಲ್ಲಿ ಮಾಲ್ಕಿ ಜಮೀನು ಹೊಂದಿರುವವರ ಮರ್ಜಿಗೆ ಮೀನುಗಾರರು ಕಾಯಬೇಕಾಗಿದೆ. ತುತ್ತಿನ ಚೀಲಕ್ಕೆ ಆಧಾರವಾದ ಬೋಟು-ದೋಣಿ ಕಾಪಾಡಿಕೊಳ್ಳಬೇಕಾದ ಬಡ ಬೆಸ್ತರ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ಈ 'ಭೂಪತಿ'ಗಳು ಬ್ಲ್ಯಾಕ್‌ಮೇಲ್ ದಂಧೆಗಿಳಿದಿದ್ದಾರೆ.

ಅಧಿಕೃತ-ಅನಧಿಕೃತ ಭೂಒಡೆಯರು ಮತ್ತು ಬೋಟುಗಳನ್ನು ಕಡಲು-ನದಿಯಿಂದ ಮೇಲೆತ್ತಿ ದಂಡೆಗೆ ತರುವ ಯಂತ್ರ ಇರುವವರ ಗ್ಯಾಂಗ್ ಕರಾವಳಿ ಉದ್ದಕ್ಕೂ ಇದೆ. ಈ ಬೆರಳೆಣಿಕೆಯ ದೋಖಾಬಾಜಿಗಳು ಬೋಟ್ ಮಳೆಗಾಲದಲ್ಲಿ ದಂಡೆಯಲ್ಲಿ ನಿಲ್ಲಿಸಲು ಅಥವಾ ರಿಪೇರಿಗೆ ನಿಲ್ಲಿಸಲು ಭೂಮಿಯನ್ನು ಬಾಡಿಗೆ ಕೊಡುತ್ತಾರೆ. ಬಂದರು ಏರಿಯಾದಲ್ಲಿ ಸರ್ಕಾರಿ ನೆಲ ಖಾಸಗಿ ಖೂಳರ ಕೈಲೇ ಹೆಚ್ಚಿದೆ. ಇವರೆಲ್ಲ 20-40 ಸಾವಿರ ರೂಪಾಯಿ ಬಾಡಿಗೆಗೆ ಅಂಗೈ ಅಂಗಲದ ಜಾಗಕ್ಕೆ ಬರೀ ಎರಡೇ ತಿಂಗಳಿಗೆ ಅಥವಾ ರಿಪೇರಿಯ ಒಂದೆರಡು ದಿನಕ್ಕೆ ಫಿಕ್ಸ್ ಮಾಡಿದ್ದಾರೆ! ಈ ಮಾಫಿಯಾದ ಬಲೆಗೆ ಬೀಳದೆ ಬೇರೆ ದಾರಿಯೇ ಇಲ್ಲ ಬಡ ಬೆಸ್ತರಿಗೆ.

ಒಂದೆಡೆ ಮೊರೆವ ಕಡಲು; ಇನ್ನೊಂದೆಡೆ ಭೀಕರ ಜಡಿ ಮಳೆ. ದೋಣಿ-ಬೋಟು ಬಚಾಯಿಸಿಕೊಳ್ಳಲು ಈ ಲ್ಯಾಂಡ್ ಲಫಡಾದಾರರು ಹೇಳಿದಷ್ಟು ತೆರಲೇಬೇಕು. ಇದು ಮಳೆಗಾಲದ ಗೋಳಾಯ್ತು, ಸೀಜನ್ ಸಂಕಷ್ಟ ಇನ್ನೂ ಘೋರ. ಮೀನುಗಾರಿಕಾ ಹಂಗಾಮಿನಲ್ಲಿ ಬೋಟ್ ಕೈಕೊಟ್ಟರೆ ದಿನಕ್ಕೆ ಲಕ್ಷಾಂತರ ಲಾಸ್. ಬ್ಯಾಂಕ್ ಬಡ್ಡಿ-ಡೀಸೆಲ್ ಕಾಸೇ ಹುಟ್ಟದ ಇಂದಿನ ಪೈಪೋಟಿಯ ಫಿಶಿಂಗ್ ವ್ಯವಸ್ಥೆಯಲ್ಲಿ ಬೋಟ್ ಕೆಟ್ಟು ನಿಂತರೆ ಮೀನುಗಾರರಿಗೆ ಆಗುವ ತೊಂದರೆ ನೂರು-ನೂರು ತರಹ. ಬೆಸ್ತರ ಈ ಅಸಹಾಯಕತೆ ಅರ್ಥ ಮಾಡಿಕೊಂಡಿರುವ 'ಲ್ಯಾಂಡ್ ಮಾಫಿಯಾ' ರಿಪೇರಿಗೆಂದು ಬರುವ ಬೋಟ್ ಮಾಲೀಕರು ದಿವಾಳಿಯಾಗುವಂಥ 'ಬಾಡಿಗೆ' ವಿಧಿಸುತ್ತದೆ!!

ಪ್ರತಿ ಸೀಜನ್‌ನಲ್ಲೂ ಯಾಂತ್ರಿಕ ಬೋಟುಗಳು ಒಂದಲ್ಲ ಒಂದು ರೀತಿಯ ನಾದುರಸ್ತಿಗೆ ಒಳಗಾಗುತ್ತವೆ. ಮೊದಲೇ ನೀರಲ್ಲಿ ನಿಲ್ಲೋದು; ಅದರಲ್ಲೂ ಉಪ್ಪು ನೀರೆಂದರೆ ಕೇಳಬೇಕಾ? ಯಂತ್ರ, ಸ್ಟೇರಿಂಗ್, ಬೋಲ್ಟ್-ನಟ್‌ಗಳೆಲ್ಲ ಬಹುಬೇಗ ಉಪ್ಪಿನಂಶದಿಂದಾಗಿ ತುಕ್ಕುಹಿಡಿದು ಜಾಮ್ ಆಗಿಬಿಡುತ್ತವೆ. ಕೆಲವು ಸಲ ದಂಡೆಯಲ್ಲಿರುವ ಸಿಮೆಂಟ್-ಕಾಂಕ್ರೀಟ್ ಜೆಟ್ಟಿ ತಾಗಿಯೋ, ಕಡಲ ಮಧ್ಯದ ಹೂಳು-ರಾಶಿ-ಕಲ್ಲು ಬಂಡೆಗೆ ಅಪ್ಪಳಿಸಿಯೋ ಬೋಟಿನ ತಳದ ಹಲಗೆ ಸೀಳಿಹೋಗಿರುತ್ತದೆ. ಈ ಯಾವ ರಿಪೇರಿಯೂ ಕಡಲಲ್ಲಿ ಮಾಡಲಾಗದು. ದಡಕ್ಕೆ ತಂದೇ ಸರಿಪಡಿಸಬೇಕು. ಈ ಅನಿವಾರ್ಯ ಸಂದರ್ಭದಲ್ಲಿ ಬೋಟು ಮೇಲೆಳೆದು ತರುವ ಗುತ್ತಿಗೆ ಪಡೆದಿರುವ ಖಾಸಗಿ 'ಯಂತ್ರ ಮಾನವರು' ಲೂಟಿ ಕುತಂತ್ರ ಶುರು ಹಚ್ಚಿಕೊಳ್ಳುತ್ತಾರೆ. ಕೆಟ್ಟು ನಿಂತ ಬೋಟು ಸಮುದ್ರದಿಂದ ಎಳೆದು ತರಲು 20-30 ಸಾವಿರ ಕೇಳುತ್ತಾರೆ ಬೋಟ್ ಎಳೆದು ತರುವ ಯಂತ್ರದಾರರು.



ಮತ್ತೊಂದೆಡೆ ಕೆಟ್ಟುಹೋದ ಬೋಟು ನಿಲ್ಲಿಸಿ ರಿಪೇರಿ ಕೆಲಸ ಮಾಡಲು 'ಭೂಪತಿ'ಗಳಿಗೆ ದುಬಾರಿ ಬಾಡಿಗೆ ತೆರಬೇಕು. ರಿಪೇರಿ ಕೆಲಸ ಅರ್ಧ ಗಂಟೆಯದೇ ಇರಲಿ ಇಲ್ಲವೆ ಎರಡು ದಿನದ್ದೇ ಇರಲಿ ಕನಿಷ್ಠ 20 ಸಾವಿರದಿಂದ 50 ಸಾವಿರ ತನಕ ಈ ಬಾಡಿಗೆ ಮೀಟರ್ ಏರಿಳಿಯುತ್ತದೆ! ಇಡೀ ಹಂಗಾಮಿನ ದುಡಿತ ಒಂದೇ ದಿನದ ಬೋಟ್ ದುರಸ್ತಿಯ ಭೂ ಬಾಡಿಗೆ, ಬೋಟ್ ದಡಕ್ಕೆ ತರುವ ಯಂತ್ರ ಮಾನವ ಮತ್ತು ಮೆಕಾನಿಕ್‌ಗೆ ಕೊಡಬೇಕಾದ ಸಂದಿಗ್ಧಕ್ಕೆ ಮೀನುಗಾರರು ಸಿಲುಕಿದ್ದಾರೆ!!

ಪಾಪದ ಮೀನುಗಾರರ ಬದುಕು ಮೂರಾಬಟ್ಟೆ ಮಾಡುವ ಈ ಅನಿಷ್ಟ ಪದ್ಧತಿ ಕರ್ನಾಟಕ ಕರಾವಳಿ ಗುಂಟ ಸಂಪ್ರದಾಯವೆಂಬಂತೆ ಅನೂಚಾನಾಗಿ ನಡೆದು ಬಂದಿದೆ. ಈ ಕಡಲ್ಗಳ್ಳತನ ದೊಡ್ಡ ಉದ್ಯಮದಂ... ಬಡ ಮೀನುಗಾರರ ರಕ್ತ ಹೀರುತ್ತಿದೆ. ಒಂದು ಸ... ಬಂದರಿನ ಆಚೀಚೆ ಸೀಜನ್ ಒಂದರಲ್ಲಿ ಕನಿಷ್ಠವೆಂದ... 50-60 ಲಕ್ಷದ ಮಾಫಿಯಾ ಬಿಸಿನೆಸ್ ನಡೆಯುತ್ತದೆ... ಈ ಹಗಲು ದರೋಡೆ ಬಂದರು ಇಲಾಖೆ, ಮೀನುಗಾರಿ... ಇಲಾಖೆ, ಪೊಲೀಸ್ ಇಲಾಖೆ ಮತ್ತು ಮಂತ್ರಿ-ಶಾಸ... ಸಂಸದರ ಕಣ್ಣೆದುರೇ ರಾಜಾರೋಷವಾಗಿ ನಡೆಯುತ್ತಿ... ಈ ಕಡಲುಗಳ್ಳರ ಹಿಡಿವ ಉಸಾಬರಿಗೆ ಯಾವ ಅಧಿಕಾ... -ಜನಪ್ರತಿನಿಧಿ-ಮೀನುಗಾರ ಮುಖಂಡ ಹೋಗುತ್ತಿ... ಇವರಿಗೆಲ್ಲ ಈ 'ಅಲಿಖಿತ ಸುಲಿಗೆ ಕಾನೂನು' ನಿಲ್ಲಿಸಿದ... ತಮ್ಮ ಕಳ್ಳ ವರಮಾನಕ್ಕೆ ಕತ್ತರಿ ಬೀಳುತ್ತದೆಂಬ ದುರಾ... ಮೀನುಗಾರಿಕಾ ಮಂತ್ರಿ ಆನಂದ್ ಅಸ್ನೋಟಿಕರ್‌ಗೆ ಬಂದ... ದೋನಂಬರ್ ದಂಧೆದಾರರೆಂದು ಮೊದಲಿಂದಲ... ಆತ್ಮೀಯತೆ ಅಪಾರ! ಈಗ ಮೀನುಗಾರಿಕಾ ಮಂತ್ರಿಯಾ... ನಂತರವಂತೂ ಅಸ್ನೋಟಿಕರ್ ಹೆಸರು ಈ ಭ... ಮಾಫಿಯಾದಲ್ಲಿ ಸೇರಿರುವ ಸುದ್ದಿಯಿದ್ದೆ!! ಮೀನುಗಾರಿ... ನಿಗಮ ಇದ್ದೂ ಇಲ್ಲದಂತಾಗಿದೆ. ಮೀನುಗಾರಿಕಾ ನಿಗ... ವೆಂದರೆ ನಿರಾಶ್ರಿತ ಪುಢಾರಿಗಳ ಪುನರ್ವಸತಿ ಕೇಂದ್ರದಂತ... ಅದ್ಯಾವುದೋ ಕಾಲವಾಗಿಹೋಗಿದೆ.

ಮೀನುಗಾರಿಕಾ ಇಲಾಖೆಯ ಪಂಡಿತರು, ಕರಾವ... ಶಾಸಕ-ಸಂಸದ-ಮಂತ್ರಿವರ್ಯರು ತಕ್ಷಣ ಇತ್ತ ಕ... ಹಾಯಿಸಬೇಕಿದೆ. ರೋಸತ್ತು ಹೋಗಿರುವ ನಿಸ್ಸಹಾಯ... ಮೀನುಗಾರರು ಸಿಡಿದೇಳುವ ಮೊದಲೇ ಸಂಬಂಧಿಸಿದವ... ಎಚ್ಚೆತ್ತರೆ ಕ್ಷೇಮಕರ. ಸಮುದ್ರದಲ್ಲಿ ಕೆಟ್ಟು ನಿಲ್ಲು... ಬೋಟುಗಳನ್ನು ಮೇಲೆತ್ತಿ ರಿಪೇರಿಗೆ ತರುವ ಕೆ... ಮೀನುಗಾರಿಕೆ ಅಥವಾ ಬಂದರು ಇಲಾಖೆಗೆ ಸಹಾ... ವಹಿಸಬೇಕಾಗಿದೆ. ಖಾಸಗಿಯವರೊಂದಿಗಿರುವ ಅಗ್ರಿಮೆಂ... ತಕ್ಷಣ ರದ್ದುಪಡಿಸಬೇಕಿದೆ. ಹಾಗೆಯೇ ಮೀನುಗಾರಿ... ಬಂದರು ಮತ್ತಿತರ ಬೋಟು ನಿಲ್ಲುವ ಕಡಲ ತಡಿಯು... ಅನಧಿಕೃತವಾಗಿ ಬೀಡುಬಿಟ್ಟಿರುವ ಅಥವಾ ಅಗ್ಗದ ಬಾಡಿ... ಲೀಸ್ ಪಡೆದಿರುವ ಲಫಡಾದಾರರ ತೆರವುಗೊಳಿಸಿ... ಬೆಸ್ತರ ಬೋಟು ಇಡಲು ಅವಕಾಶ ಕಲ್ಪಿಸಬೇಕಿದೆ. ಬಾ... ಭಂಟರನ್ನು ಕಾನೂನಿನ ಇಕ್ಕಳಕ್ಕೆ ಸಿಲುಕಿಸಿ ಮೀನುಗಾರ... ರಕ್ಷಿಸಬೇಕಿದೆ.

ಹೇತ್ಲಾಂಡಿ ಮೀನುಗಾರಿಕಾ ಮಂತ್ರಿ ಅಸ್ನೋಟಿಕರ್‌ನ... ಇದೆಲ್ಲ ಸಾಧ್ಯವೇ ಇಲ್ಲ. ಆತನ ಮಾತು ಕೇಳದ ಮೀ... ಗಾರಿಕಾ ಇಲಾಖಾಧಿಕಾರಿಗಳಿಗೆ ಕಡಲ ಮಕ್ಕಳ ಕ... ಕೇಳಿಸುತ್ತಿಲ್ಲ. ಹಾಗಾಗಿ ಕರಾವಳಿಯವರೇ ಆದ ಸಾ... ಸಿಎಂ ಸದ್ದಣ್ಣನೇ ಮೀನುಗಾರರ ಕಷ್ಟ ಪರಿಹರಿ... ಮುಂದಾಗಬೇಕಾಗಿದೆ. ಹಾಗಂತ ಕರಾವಳಿಯ ಮೀನುಗಾ... ಹೇಳುತ್ತಿದ್ದಾರೆ.

• ನಹು...

ಪೋಲೀಸ್ ಪರದೆಯಲ್ಲಿ ಕೇಸರಿ ಕವಾಯತು!



ಎಸ್ಪಿ ಅಭಿಷೇಕ್ ಗೋಯಲ್

...ದೇನು ಪೊಲೀಸ್ ಇಲಾಖೆಯ ...ರ್ಯವೋ, ಅವಿವೇಕತನವೋ ಒಟ್ಟಿನಲ್ಲಿ ...ಇಲಾಖೆಯನ್ನೆ ಅನುಮಾನಿಸುವಂತಹ ...ದಕ್ಷಿಣ ಕನ್ನಡ ಪೊಲೀಸರ ವೆಬ್‌ಸೈಟ್ ...ಸಾಕ್ಷಿಯಾದದ್ದು ಮಾತ್ರ ವಿಪರ್ಯಾಸ.

...ಕ್ಷಿಣ ಕನ್ನಡ ಜಿಲ್ಲಾ ಪೊಲೀಸರ ಅಧಿಕೃತ ...ಸೈಟ್ www.dkpolice.orgನ ...ಮ್‌ಪೇಜ್‌ನಲ್ಲಿ ಆರ್.ಎಸ್.ಎಸ್ ನ ...ಟೋ ರಾರಾಜಿಸಿ ಅಚ್ಚರಿ ಮೂಡಿಸಿದ್ದರೆ, ...ನಷ್ಟು ಅಧಿಕಾರಿಗಳ 'ನಮ್ಮ ಗಮನಕ್ಕೇ ...'ವೆಂಬ ಸಬೂಬುಗಳು ಆಘಾತ ...ಸುವಂತಿವೆ. ಈಗಾಗಲೇ ಕರಾವಳಿ ತೀರದ ...ಧರ್ಮದ ಕಂಟ್ರ್ಯಾಕ್ಟರುಗಳು ...ರಕ್ಷಣೆಯ ಸೋಗಿನಲ್ಲಿ ಅಲ್ಪಸಂಖ್ಯಾತರ ...ನಡೆಸುತ್ತಿರುವ ದೌರ್ಜನ್ಯಗಳಿಗೆ ...ಸಮ್ಮತಿ ನೀಡುತ್ತಿರುವ ಪೊಲೀಸರ ಮೇಲಿನ ...ಋ ಅನುಮಾನವನ್ನು ಇದು ಮತ್ತಷ್ಟೂ ...ಕರಿಸುವಂತಿದೆ.

...ರೆಸ್ಸೆಸ್ಸಿನ ಪಕ್ಕಾ ಪ್ರಮೋಷನಲ್ ...ರಾತಿನಂತಿದ್ದ ಆ ಫೋಟೋದಲ್ಲಿ ಒಂದಷ್ಟು ...ಲಾಗಳು ದೊಣ್ಣೆ ಸಮೇತ ಕವಾಯತು ...ರೆ ಪಕ್ಕದಲ್ಲಿ ಆದರ ಸೋ ಕಾಲ್ಡ್ ...ಜಸೇವೆ(?)ಯ ತುಣುಕುಗಳನ್ನೂ ...ಲಾಗಿತ್ತು.

...ಮಾಧ್ಯಮದವರಿಗೆ ವಿಷಯ ...ಯುತ್ತಿದ್ದಂತೆಯೇ ದಕ್ಷಿಣ ಕನ್ನಡ ಜಿಲ್ಲಾ



...ಪಿ.ಅಭಿಷೇಕ್ ಗೋಯಲ್‌ರನ್ನು ...ರ್ಕಿಸಿದಾಗ ಘಟನೆಯ ಬಗ್ಗೆ ತಮಗೆ ತಿಳಿದೇ ... ಇದೊಂದು ದೊಡ್ಡ ಅಚಾತುರ್ಯ ...ಯದಾಗಿ ಹೇಳಿ ನುಣುಚಿಕೊಂಡಿದ್ದರು. ಅದಾದ ...ಕ್ಷಣದಲ್ಲಿ ಇಡೀ ವೆಬ್‌ಸೈಟನ್ನು ಬ್ಲಾಕ್ ... This Site is under ...struction, now ಅನ್ನುವ ಮೆಸೇಜನ್ನು ...ಬಿಡಲಾಗಿತ್ತು.

...ಪೊಲೀಸರ ಕೇಸರಿ ಪುಟಕ್ಕೆ ವ್ಯಾಪಕ ...ರೋಧ ವ್ಯಕ್ತವಾಗುತ್ತಿದ್ದಂತೆಯೇ ಖಾಕಿ ಚೆಡ್ಡಿಗಳ ...ದದಲ್ಲಿ ಖಾಕಿ ಸಮವಸ್ತ್ರದ ಪೊಲೀಸರು ...ರವರ ಕರ್ತವ್ಯ ನಿರ್ವಹಣೆಯ ಸ್ಯಾಂಪಲ್ ...ಟೋ ಲಗತ್ತಿಸಿ ಹೋಮ್‌ಪೇಜ್ ಅಪ್‌ಡೇಟ್ ಮಾಡಲಾಗಿದೆ. ಆದರೂ ಇಲಾಖೆಯ ಗೌರವಕ್ಕೆ ಆದ ಜಖಮ್ ಮತ್ತು ಪೊಲೀಸರ ಕೇಸರೀಕರಣದ ಅನುಮಾನಗಳು ಮಾತ್ರ ದಟ್ಟವಾಗಿ ಹಾಗೇ ಉಳಿದಿವೆ.

ಸಾರ್ವಜನಿಕ ಕರ್ತವ್ಯದ ಮುಂದೆ ವೈಯಕ್ತಿಕ ನಂಬಿಕೆ ಸ್ವಾರ್ಥಗಳಿಗೆ ಬೆಲೆ ಇಲ್ಲ, ಇರಲೂಬಾರದು. ಹಾಗಂತಲೇ ವಚನಕ್ಕೆ ಕೈ ಆನಿಸಿ ಪ್ರಮಾಣವನ್ನೂ ಸ್ವೀಕರಿಸುತ್ತಾರೆ. ಜಾತ್ಯತೀತ ತತ್ವದ ನಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಅಂಗವಾದ ಪೊಲೀಸ್ ಇಲಾಖೆ ಇದಕ್ಕೆ ಬದ್ಧವಾಗೇ ಇರಬೇಕು. ಅವರ ಕಾರ್ಯವೈಖರಿಗಳು ಅಲ್ಪಸಂಖ್ಯಾತರಲ್ಲಿ, ಬಲಹೀನರಲ್ಲಿ, ಧಮನಿತರಲ್ಲಿ ಭರವಸೆ ಮೂಡಿಸುವಂತಿರಬೇಕೆ ವಿನಾ ಆತಂಕ, ಗೊಂದಲಗಳನ್ನು ಹುಟ್ಟುಹಾಕುವಂತಿರಬಾರದು. ಜನತೆಯಲ್ಲಿ ಇಷ್ಟೆಲ್ಲಾ ನಿರೀಕ್ಷೆಗಳನ್ನು ಸೃಷ್ಟಿಸಿರುವ ಮತ್ತು ಆ ಎಲ್ಲಾ ಜವಾಬ್ದಾರಿಗಳ ಅರಿವಿರುವ ಇಲಾಖೆ ಯಃಕಶ್ಚಿತ್ ಕೋಮುವಾದಿ ಧೋರಣೆಯ ಆರೆಸ್ಸೆಸ್ ಪ್ರಚಾರಕನಂತೆ ಅದರ ಭಿತ್ತಿಚಿತ್ರಗಳನ್ನು ಮೈಗಂಟಿಸಿಕೊಂಡದ್ದು ಮಹಾನ್ ಪ್ರಮಾದ.

ಉನ್ನತಾಧಿಕಾರಿಗಳು ಇದಕ್ಕೆ ಅಚಾತುರ್ಯತೆಯಂತಹ ಸಾವಿರ ಸಬೂಬು ನೀಡಬಹುದಾದರೂ ಸಮಾಜದ ರಕ್ಷಣೆಗೆ ಸದಾ ಜಾಗೃತವಾಗಿರಬೇಕಾದ ಇಲಾಖೆ ತನ್ನ ಕುರಿತೇ ಈ ಪರಿ ಮೈಮರೆತದ್ದಾಗಲಿ, ಅಚಾತುರ್ಯಕ್ಕೆ ಆಸ್ಪದ ಕೊಟ್ಟದ್ದಾಗಲಿ ಅಕ್ಷಮ್ಯ ಅಪರಾಧವಾಗುವುದರಲ್ಲಿ ಸಂಶಯವೇ ಇಲ್ಲ.

ತಪ್ಪಿಗೆ ಒಪ್ಪಿಗೆ ಸಿಕ್ಕಂತಾಯ್ತು

ಬಹುಶಃ ಕರ್ನಾಟಕದಲ್ಲೇ ಪ್ರಥಮ ಬಾರಿಗೆ ಸೈಬರ್ ಲೋಕ ಹೊಕ್ಕಿದ್ದು ದಕ್ಷಿಣ ಕನ್ನಡ ಪೊಲೀಸರು. 2005ರಲ್ಲಿ ಆಗಿನ ಎಸ್.ಪಿ. ಬಿ.ದಯಾನಂದ್ spdk.blogspot.com ಉದ್ಘಾಟಿಸಿ ಈ ಹೆಗ್ಗಳಿಕೆಗೆ ಮುನ್ನುಡಿ ಬರೆದಿದ್ದರು. ಅದಾದ ನಾಲ್ಕು ವರ್ಷಗಳ ನಂತರ, ಅಂದರೆ 2009ರಲ್ಲಿ ಬ್ಲಾಗ್‌ನಿಂದ ತನ್ನದೇ ಆದ ವೆಬ್‌ಸೈಟ್‌ಗೆ ಬಡ್ತಿ ಹೊಂದುವ ಮೂಲಕ ಜಿಲ್ಲೆಯ ಅಪರಾಧ ಪ್ರಕರಣ, ಸಾರ್ವಜನಿಕ ಜಾಗೃತಿ ಮತ್ತು ಪೊಲೀಸರ ಕಾರ್ಯದಕ್ಷತೆಯನ್ನು ಜನತೆಯ ಮುಂದಿಡುವ ದಿಟ್ಟ ಪ್ರಯತ್ನಕ್ಕೂ ಮುಂದಾಗಿತ್ತು.

ಆಮೇಲೆ ವೆಬ್‌ಸೈಟ್‌ನತ್ತ ನಿರ್ಲಕ್ಷ್ಯ ಬೆಳೆಸಿಕೊಂಡ ದಕ್ಷಿಣ ಕನ್ನಡ ಪೊಲೀಸರು ಅದನ್ನು ಸಮಯಕ್ಕೆ ಸರಿಯಾಗಿ ಅಪ್‌ಡೇಟ್ ಮಾಡುತ್ತಲೇ ಇರಲಿಲ್ಲ. ಈ ಕುರಿತು ಸಾಕಷ್ಟು ಆಕ್ಷೇಪಣೆಗಳೂ ಕೇಳಿಬಂದಿದ್ದವು. ಆಗಿದ್ದ ವೆಬ್‌ಸೈಟ್ ನವೀಕರಣಗೊಳಿಸಿ ಅದನ್ನು ರೆಗ್ಯುಲರ್ ಅಪ್‌ಡೇಟ್ ಮಾಡಲು ಖಾಸಗಿ ಐ.ಟಿ ಕಂಪನಿಗೆ ವಹಿಸುವ ಇರಾದೆ ಇತ್ತಾದರು ದುಬಾರಿ ವೆಚ್ಚದ ಕಾರಣಕ್ಕೆ ಅದಕ್ಕಿನ್ನೂ ಕೈಹಾಕಿರಲಿಲ್ಲ.


ಇಲ್ಲಿಗೆ ಮೂರ್‍ನಾಲ್ಕು ತಿಂಗಳ ಹಿಂದೆ ಹೈದ್ರಾಬಾದ್ ಮೂಲದ ಜೆಸ್ಟ್‌ವಿಂಗ್ ಎಂಬ ವೆಬ್ ಡಿಸೈನಿಂಗ್ ಅಂಡ್ ಡೆವಲಪರ್ ಸಂಸ್ಥೆ ಪುಕ್ಕಟೆಯಾಗಿ ದಕ್ಷಿಣ ಕನ್ನಡ ಪೊಲೀಸರ ವೆಬ್‌ಸೈಟನ್ನು ಪರಿಷ್ಕರಿಸಿ ಕೊಡುತ್ತೇನೆಂದು ಮುಂದೆ ಬಂದಿದ್ದೇ ತಡ, ಹಿಂದೆ-ಮುಂದೆ ಯೋಚಿಸದೆ ಅದರ ಮಡಿಲಿಗೆ ವೆಬ್‌ಸೈಟ್ ವರ್ಗಾಯಿಸಿದ್ದೇ ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣವಾಗಿದೆ.

ನವೀಕರಣದ ಉಸ್ತುವಾರಿ ಹೊತ್ತುಕೊಂಡ ಜೆಸ್ಟ್‌ವಿಂಗ್ ಸಂಸ್ಥೆ ಹಾಲಿ ವೆಬ್‌ಸೈಟ್‌ಗೆ ವಿನೂತನ ಅಪ್ಲಿಕೇಷನ್‌ಗಳನ್ನು ಇನ್‌ಸ್ಟಾಲ್ ಮಾಡುವುದಲ್ಲದೆ, ಗೂಗಲ್ ನಕ್ಷೆ, ಜಿಲ್ಲಾ ಪೊಲೀಸ್ ಸರಹದ್ದು, ಇಲಾಖೆಗೆ ಸಂಬಂಧಿಸಿದ ಸಕಾಲ ಯೋಜನೆಯ ಮಾಹಿತಿ, ವಿಸ್ತಾರವಾದ ಫೋಟೋ ಅಪ್‌ಲೋಡಿಂಗ್ ಮೆಮೊರಿ ಮುಂತಾದವುಗಳನ್ನು ಅಪ್‌ಡೇಟ್ ಮಾಡುವುದರಲ್ಲಿತ್ತು. ಈ ಬಗ್ಗೆ ಖುದ್ದು ಎಸ್.ಪಿ. ಅಭಿಷೇಕ್ ಗೋಯಲ್‌ರೇ ತಿಂಗಳ ಹಿಂದೆ ಪತ್ರಿಕೆಗಳಿಗೆ ವಿಷಯ ತಿಳಿಸುವಷ್ಟರ ಮಟ್ಟಿಗೆ ಇಲಾಖೆ ವೆಬ್‌ಸೈಟ್‌ನ ನವೀಕರಣದಲ್ಲಿ ಆಸಕ್ತಿ ತಳೆದಿತ್ತು ಮತ್ತು ಆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿತ್ತು ಕೂಡಾ.

ಆದರೆ ವೆಬ್-ಪೇಜ್‌ನಲ್ಲಿ ಚಡ್ಡಿ ಫೋಟೋ ಕಾಣಿಸಿಕೊಳ್ಳುತ್ತಿದ್ದಂತೆ ಇದರ ಬಗ್ಗೆ ನಮಗೆ ವಿಷಯವೇ ತಿಳಿದಿಲ್ಲ, ನವೀಕರಣದ ಉಸ್ತುವಾರಿ ಹೊತ್ತಿರುವ ಸಂಸ್ಥೆಯ ಅಚಾತುರ್ಯದಿಂದ ಹೀಗಾಗಿದೆ ಎಂಬುದಾಗಿ ಹೇಳಿದ್ದ ಹಿರಿಯ ಅಧಿಕಾರಿಗಳು ಇದು ಘೋರ ಅಪರಾಧವಾಗಿದ್ದು ಕಾರಣವಾದವರಿಗೆ ಶಿಕ್ಷೆ ನೀಡುವುದಾಗಿಯೂ ಘೋಷಿಸಿದ್ದರು.

ಆ ಘೋಷಣೆಯಲ್ಲಿ ನಿಜಕ್ಕೂ ತಿರುಳಿದ್ದಿದ್ದರೆ ಅವರೇ ಹೇಳುವಂತೆ ಈ ಅಚಾತುರ್ಯಕ್ಕೆ ಕಾರಣವಾದ ಜೆಸ್ಟ್‌ವಿಂಗ್ ಸಂಸ್ಥೆಯನ್ನು ವೆಬ್ ನಿರ್ವಹಣೆಯಿಂದ ತಕ್ಷಣವೇ ವಜಾಗೊಳಿಸಬೇಕಿತ್ತು. ಆದರೆ ಇಲ್ಲಿಯವರೆಗೂ 'ಶಿಕ್ಷೆ'ಗೆ ಇಲಾಖೆ ಮುಂದಾಗಿಲ್ಲ. ಇದಕ್ಕೆ ಸಂಬಂಧಿಸಿ ಕರ್ನಾಟಕ ಕೋಮುಸೌಹಾರ್ದ ವೇದಿಕೆಯ ಜಿಲ್ಲಾಧ್ಯಕ್ಷರಾದ ಸುರೇಶ್ ಭಟ್ ಬಾಕ್ರಬೈಲ್‌ರವರು ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗಕ್ಕೆ ದೂರು ನೀಡಿರುವಷ್ಟು ವಿಷಯ ಗಂಭೀರತೆ ಪಡೆದಿದ್ದರೂ ಪೊಲೀಸರು ಕ್ರಮಕ್ಕೆ ಮುಂದಾಗಿಲ್ಲ. ಖಾಲಿ ಹೇಳಿಕೆಗಳ ಹೊರತಾಗಿ. ಆ ಮೂಲಕ ಪರೋಕ್ಷವಾಗಿ ಇದೆಲ್ಲ ತನ್ನ ಒಪ್ಪಿಗೆಯಲ್ಲೇ ನಡೆದಿದೆ ಇಲ್ಲವೆ ಈ ತಪ್ಪಿಗೆ ನಮ್ಮ ಸಂಪೂರ್ಣ ಸಮ್ಮತಿಯಿದೆ ಅನ್ನುವ ಸಂದೇಶ ನೀಡುತ್ತಿರುವುದು ಇಲಾಖೆಯ ಕಳಂಕವನ್ನು ಮತ್ತಷ್ಟೂ ಹೆಚ್ಚಿಸುತ್ತಿದೆ.

ಸೈಬರ್ ಕ್ರೈಮ್ ಪಟ್ಟಿಯಲ್ಲಿ ಅಗ್ರಸ್ಥಾನ ತಲುಪುತ್ತಿರುವ ಕರ್ನಾಟಕವನ್ನು ಅಪಖ್ಯಾತಿಯಿಂದ ಮುಕ್ತ ಮಾಡಲು ಇನ್ನಿಲ್ಲದಂತೆ ಕಸರತ್ತು



ನಡೆಸುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಪೊಲೀಸರು ತಮ್ಮದೇ ಸೈಬರ್ ಸೈಟ್‌ನಲ್ಲಿ ಸೆಕ್ಯುಲರ್ ತತ್ವದ ಕಗ್ಗೊಲೆ ನಡೆದಿದ್ದರೂ ಗಮನಕ್ಕೆ ಬಂದಿಲ್ಲ, ಅಚಾತುರ್ಯ, ದೊಡ್ಡ ಅಪರಾಧ, ಶಿಕ್ಷೆ ನೀಡಲಾಗುತ್ತೆ ಎಂಬಂತಹ ಹೇಳಿಕೆಗಳಿಂದಲೇ ಸಮಾಧಾನಪಡಿಸುತ್ತಿರುವುದು ಗಮನಿಸಿದರೆ ಇಲಾಖೆ ಇಡಿಯಾಗಿ ಕೇಸರೀಕರಣಗೊಳ್ಳುತ್ತಿದೆಯೇನೊ ಎಂಬ ಅನುಮಾನ ಮೂಡುತ್ತದೆ. ಆರೆಸ್ಸೆಸ್ ಸೋಂಕಿನಿಂದ ಮುಕ್ಕಾಗಿರುವ ಮರ್ಯಾದೆಯನ್ನು ಸರಿಪಡಿಸಿಕೊಳ್ಳುವ ಪ್ರಯತ್ನಕ್ಕಾದರೂ ಮುಂದಾಗದಿದ್ದಲ್ಲಿ ಜನಸಾಮಾನ್ಯರು ಪೊಲೀಸ್ ಇಲಾಖೆ ಮೇಲಿನ ಕಿಂಚಿತ್ ನಂಬಿಕೆಯನ್ನೂ ಮರೆತು ಬಿಡಬೇಕಾಗುತ್ತೆ.

• ಗಿರೀಶ್ ತಾಳಿಕಟ್ಟೆ

ಕೇಸರಿ ರಿಪಬ್ಲಿಕ್


ದಕ್ಷಿಣ ಕನ್ನಡ ಜಿಲ್ಲೆ ಒಂದು ಕೇಸರಿ ರಿಪಬ್ಲಿಕ್ ಆಗಿದೆ ಮತ್ತು ಇಲ್ಲಿನ ಪೊಲೀಸ್ ಇಲಾಖೆ ಬಹುತೇಕವಾಗಿ ಕೇಸರೀಕರಣಕ್ಕೆ ತುತ್ತಾಗಿದೆ ಎಂಬ ಅನುಮಾನಕ್ಕೆ ಹಲವಾರು ಉದಾಹರಣೆಗಳಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ:

* ಸಂಘ ಪರಿವಾರದ ಅನೇಕ ತೋಲಾಂಡ ಮುಖಂಡರು ಅತ್ಯಂತ ಕೋಮು ಪ್ರಚೋದನಕಾರಿ ಭಾಷಣಗಳನ್ನು ಮಾಡಿಯೂ ಕಾನೂನಿನ ಕುಣಿಕೆಯಿಂದ ಪಾರಾಗುತ್ತಿದ್ದಾರೆ.
* 2006ರ ಕೋಮು ದಾಳಿ, 2008ರ ಚರ್ಚ್ ದಾಳಿಗಳನ್ನೂ ಒಳಗೊಂಡಂತೆ ಜಿಲ್ಲೆಯಲ್ಲಿ ಸಂಭವಿಸಿರುವ ಹೆಚ್ಚುಕಡಿಮೆ ಪ್ರತಿಯೊಂದು ಕೋಮು ದುರ್ಘಟನೆಯ ಸಂದರ್ಭದಲ್ಲಿ ಪೊಲೀಸರ ಪಕ್ಷಪಾತೀಯ ವರ್ತನೆ ಹಲವಾರು ಸ್ವತಂತ್ರ ತನಿಖೆಗಳ ಮೂಲಕ ದೃಢಪಟ್ಟಿದೆ.
* ಕಳೆದ ದಸರಾ ಹಬ್ಬದ ವೇಳೆ ಶಂಕಿತ ಹಿಂದೂ ಭಯೋತ್ಪಾದಕಿ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರಳ ಬ್ಯಾನರ್ ಕಟೌಟೊಂದು ಉಳ್ಳಾಲದಲ್ಲಿ ಮೂರು ದಿನಗಳ ಕಾಲ ಅನಿರ್ಬಂಧಿತವಾಗಿ ರಾರಾಜಿಸುತ್ತಿತ್ತು.
* ಕ್ರೈಸ್ತ ಪಾಸ್ಟರ್‌ಗಳನ್ನು ಪೊಲೀಸ್ ಠಾಣೆಗಳಿಗೆ, ಕೇಂದ್ರ ಕಚೇರಿಗೆ ಕರೆಸಿ, ಅವರು ಮನೆಗಳಲ್ಲಿ ಮತ್ತು [illegible] ಮಾಡಬಾರದು ಎಂದು ಧಮಕಿ ಹಾಕಲಾಗಿತ್ತು.



* ಕೆಲವು ತಿಂಗಳ ಹಿಂದಷ್ಟೆ ಸನಾತನ ಸಂಸ್ಥೆ ಎಂಬ ಶಂಕಿತ ಭಯೋತ್ಪಾದಕ ಸಂಘಟನೆ ಮೊಬೈಲ್ ಮಳಿಗೆಯೊಂದರ ಮೂಲಕ ಮಂಗಳೂರಿನ ಸ್ಟೇಟ್ ಬ್ಯಾಂಕ್ ವೃತ್ತದ ಬಳಿ ಪುಸ್ತಕ ಮಾರಾಟದಲ್ಲಿ ತೊಡಗಿತ್ತು. ಈ ಪ್ರದೇಶ ಜಿಲ್ಲಾಡಳಿತ ಕಚೇರಿ ಮತ್ತು ಪೊಲೀಸ್ ಇಲಾಖೆಯ ಕೇಂದ್ರ ಕಾರ್ಯಾಲಯದಿಂದ ಕೂಗಳತೆಯ ದೂರದಲ್ಲಿದೆ. ಅಷ್ಟೇ ಅಲ್ಲ, ಎಸ್‌ಬಿಐ ವೃತ್ತದಲ್ಲಿ ನಡೆಯುವ ಸಕಲ ವಿದ್ಯಮಾನಗಳನ್ನೂ ಪೊಲೀಸರು ಸಿಸಿಟಿವಿ ಕ್ಯಾಮರಾ ಮೂಲಕ ಕಚೇರಿಯಲ್ಲೇ ಕುಳಿತು ವೀಕ್ಷಿಸಲೂ ಸಾಧ್ಯವಿದೆ. ಆ ಮಳಿಗೆಯಲ್ಲಿ ಲವ್ ಜೆಹಾದ್, ಮತಾಂತರ ಬಗ್ಗೆ ಕಪೋಲಕಲ್ಪಿತ ಮಾಹಿತಿಗಳಿರುವ ಪುಸ್ತಕಗಳು, ಹಿಂದೂ ರಾಷ್ಟ್ರ ಕ್ಯಾಲೆಂಡರ್ ಇತ್ಯಾದಿಗಳನ್ನು ಇತರ ಸಾಹಿತ್ಯದ ನಡುವೆ ಇರಿಸಿ ರಾಜಾರೋಷವಾಗಿ ಮಾರಾಟ ಮಾಡಲಾಗುತ್ತಿತ್ತು. ಆದರೂ ಪೊಲೀಸರಾಗಲಿ ಜಿಲ್ಲಾಡಳಿತವಾಗಲಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ.
* ಇತ್ತೀಚೆಗೆ ಆರೆಸ್ಸೆಸ್ ಜೊತೆ ನಿಕಟ ಸಂಬಂಧವುಳ್ಳ ಕಲ್ಲಡ್ಕದ ಶಾಲೆಯೊಂದರ ಕಾರ್ಯಕ್ರಮದಲ್ಲಿ ಭಾಗವಹಿಸಿದ ಜಿಲ್ಲಾಧಿಕಾರಿ ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳು ಕೇಸರಿ ಶಾಲು ಹೊದೆದು ಸ್ಥಾನೀಯ ಆರೆಸ್ಸೆಸ್ ನಾಯಕನೊಂದಿಗೆ ವೇದಿಕೆಯಲ್ಲಿ ಕುಳಿತಿದ್ದರು.
* ಸಂಘ ಪರಿವಾರದ ರೌಡಿಗಳಿಂದ ಜಾನುವಾರು ಸಾಗಾಟಗಾರರ ಮೇಲೆ ಪೊಲೀಸರ ಸಮ್ಮುಖದಲ್ಲೇ ಸಶಸ್ತ್ರ ದಾಳಿಗಳಾಗುತ್ತವೆ.
* ನೈತಿಕ ಪೊಲೀಸ್‌ಗಿರಿ, ಮತಾಂತರದ ಆರೋಪದಲ್ಲಿ ಕಿರುಕುಳ, ಹಲ್ಲೆ, ಸುಲಿಗೆ ಇತ್ಯಾದಿ ಸಂವಿಧಾನಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ ಸಂಘ ಪರಿವಾರ ಸಂಘಟನೆಗಳಿಗೆ ಶ್ರೀರಕ್ಷೆ ಸಿಗುತ್ತದೆ.
* ಅಡ್ವಾನಿಯವರ ಜನಚೇತನ ಯಾತ್ರೆಗೆ ಮೂರು ದಿನ ಮೊದಲು ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದ ಕೋಮುಸೌಹಾರ್ದ ಪ್ರಿಯ ಸಂಘಟನೆಗಳಿಗೆ ಅವಕಾಶ ನಿರಾಕರಿಸಲಾಗಿತ್ತು.
* ಆರೆಸ್ಸೆಸ್ ಈಶಾನ್ಯ ರಾಜ್ಯಗಳಿಂದ ಮಕ್ಕಳನ್ನು ಕರ್ನಾಟಕಕ್ಕೆ ಅನಧಿಕೃತವಾಗಿ ಸಾಗಿಸಿ ತನ್ನ ಸರಸ್ವತಿ ಶಿಶುಮಂದಿರ ಮತ್ತಿತರ ಶಾಲೆಗಳಲ್ಲಿ ವೈದಿಕೀಕರಣಕ್ಕೆ ಒಳಪಡಿಸುವ ವಿಚಾರವನ್ನು ತೆಹೆಲ್ಕಾ ನಿಯತಕಾಲಿಕ ಬಯಲುಗೊಳಿಸಿದೆಯಾದರೂ ಇದುವರೆಗೆ ಯಾವುದೇ ಕಾನೂನು ಕ್ರಮ ಜರುಗಿಲ್ಲ.
* ಪ್ರೊ. ಪಟ್ಟಾಭಿ ಮೇಲೆ ಸಾಗಿದ ಹಿಂಸೆ [illegible] ತಪ್ಪೊಪ್ಪಿಕೊಂಡ ಬಜರಂಗ ದಳದ ವಿರುದ್ಧ ಕಾನೂನುಕ್ರಮ ಕೈಗೊಳ್ಳಲಾಗಿಲ್ಲ.

ಮಂಗಳೂರು: ಜಿಲ್ಲಾಧಿಕಾರಿಯೇ ಎಸ್‌ಇಝೆಡ್‌ನ ದಲ್ಲಾಳಿ!




ಮಂಗಳೂರು ನಗರದ ಹೊರವಲಯದಲ್ಲಿರುವ ಗುರುಪುರ, ಕಾವೂರು, ಮರವೂರು ಎಂಬ ಕೃಷಿ ಸಮೃದ್ಧ ಪ್ರದೇಶಗಳಿಗೆ ಫಲ್ಗುಣಿ ಜೀವನದಿ. ಫಲ್ಗುಣಿಯ ನೀರನ್ನು ಆಧರಿಸಿಯೇ ಈ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆ ನಡೆಯುತ್ತದೆ. ಮಂಗಳೂರಿನ ಸುತ್ತಮುತ್ತ ದಟ್ಟ ಕಾಂಕ್ರೀಟು ಕಾಡುಗಳು ತುಂಬಿದ್ದಾಗ್ಯೂ ಗುರುಪುರ, ಕಾವೂರು, ಮರವೂರು ಬಜ್ಪೆ ಮುಂತಾದೆಡೆ ಕಾಣಸಿಗುವ ಅಲ್ಪಸ್ವಲ್ಪ ಹಸಿರು ಪರಿಸರದ ಉಳಿಕೆಯಲ್ಲಿ ಇಲ್ಲಿನ ರೈತರ ಪಾಲಿನ ಜೀವನಾಡಿಯಾಗಿರುವ ಜೀವನದಿ ಫಲ್ಗುಣಿಯ ಪಾತ್ರ ದೊಡ್ಡದಿದೆ.

ಮಂಗಳೂರಿನ ಸುತ್ತಮುತ್ತ ಇದ್ದ ಫಲವತ್ತಾದ ಕೃಷಿ ಭೂಮಿಗಳನ್ನೆಲ್ಲಾ ಆಪೋಷನ ತೆಗೆದುಕೊಳ್ಳುತ್ತಲೇ ಬಂದ ಎಸ್‌ಇಝೆಡ್ ಎಂಬ ರಕ್ಕಸನ ಮಾರಿಕಣ್ಣು ಇತ್ತೀಚೆಗೆ ಫಲ್ಗುಣಿಯ ಮೇಲೂ ಬಿದ್ದಿದೆ. ಕಾರಿಡಾರ್ ರಸ್ತೆ-ಪೈಪ್‌ಲೈನ್ ಕಾಮಗಾರಿಯ ಹೆಸರಲ್ಲಿ ಮಂಗಳೂರು 'ವಿಷ' ಆರ್ಥಿಕ ವಲಯದ ಸೈತಾನರು ಫಲ್ಗುಣಿ ನದಿಯ ತುಂಬಾ ಮಣ್ಣು ತುಂಬಿಸುತ್ತಿದ್ದಾರೆ. ಇದರಿಂದಾಗಿ ನದಿಪಾತ್ರವು ಕಿರಿದಾಗುತ್ತಿದೆ. ಹರಿವು ಕುಂಠಿತಗೊಳ್ಳುತ್ತಿದೆ. ಹರಿವಿನ ದಿಕ್ಕು ತಪ್ಪುತ್ತಿದೆ. ನದಿಯ ಮತ್ಸ್ಯ ಸಂಕುಲದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಫಲ್ಗುಣಿಯ ನೀರನ್ನೇ ಆಧರಿಸಿ ಸುತ್ತಮುತ್ತಲ ಪ್ರದೇಶಗಳಲ್ಲಿ ನಡೆಯುತ್ತಿರುವ ಕೃಷಿ ಚಟುವಟಿಕೆಗಳಿಗೆ ಮಾರಕ ಹೊಡೆತ ಬೀಳುತ್ತಿದೆ. ಎಸ್‌ಇಝೆಡ್‌ಕಾರಿಡಾರ್ ರಸ್ತೆ-ಪೈಪ್‌ಲೈನ್ ಯೋಜನೆಯಿಂದ ಫಲ್ಗುಣಿಯ ತೀರದ ಅತ್ರಬೈಲ್ ಮತ್ತು ಮೇಲ್‌ಕೊಪ್ಪಳ ಪ್ರದೇಶದ ಜನ ನೆರೆ ಭೀತಿಯಿಂದ ತತ್ತರಿಸುತ್ತಿದ್ದಾರೆ. ಇವೆಲ್ಲಾ ಸಮಸ್ಯೆಗಳನ್ನು ಸಂತ್ರಸ್ತರು ಮತ್ತು ಜನಪರ ಹೋರಾಟಗಾರರು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ಮತ್ತೆ ಮತ್ತೆ ಮನವರಿಕೆ ಮಾಡಿಕೊಟ್ಟು ಅನೇಕ ಬಾರಿ ದೂರು ನೀಡಿದ್ದಾರೆ. ಆದರೆ ಮಂಗಳೂರು 'ವಿಷ' ಆರ್ಥಿಕ ವಲಯದ ಅಮೇಧ್ಯಕ್ಕಾಗಿ ನಾಲಿಗೆ ಹೊರಚಾಚಿ ಜೊಲ್ಲು ಸುರಿಸುವ ಪರಮಭ್ರಷ್ಟ, ಚೆಡ್ಡಿಗಳ ಡಾರ್ಲಿಂಗ್, ಎಸ್‌ಇಝೆಡ್ ಏಜೆಂಟ್ ಮತ್ತು ಜನದ್ರೋಹಿ ಜಿಲ್ಲಾಧಿಕಾರಿ ಚನ್ನಪ್ಪ ಗೌಡನಿಗೆ ಇದೆಲ್ಲಾ ಹೇಗೆ ಅರ್ಥವಾಗುತ್ತದೆ? ಎಸ್‌ಇಝೆಡ್ ದರೋಡೆಕೋರರ ಪಾಪದ ದುಡ್ಡು ಯಾವ ಅಡೆತಡೆಯೂ ಇಲ್ಲದೇ ಕ್ಲಪ್ತ ಸಮಯಕ್ಕೆ ಸಂದಾಯವಾಗುತ್ತಿದ್ದರೆ, ಈ ಚನ್ನಪ್ಪ ಗೌಡ ಯಾಕಾಗಿಯಾದರೂ ಸಂತ್ರಸ್ತರ ಅಹವಾಲು ಆಲಿಸಬೇಕು? ಯಾಕಾಗಿಯಾದರೂ ತನ್ನ ತಿಜೋರಿ ದುಂಡಗಾಗಿಸುವ ಎಸ್‌ಇಝೆಡ್ ಸೈತಾನನಿಗೆ ದ್ರೋಹ ಬಗೆಯಬೇಕು?

ರಾಷ್ಟ್ರೀಯ ಸಂಪತ್ತೆಂದು ಪರಿಗಣಿಸಲಾಗುವ ನದಿಗೆ ಎಸ್‌ಇಝೆಡ್ ಸೈತಾನರು ನಿರಂತರವಾಗಿ ಮತ್ತು ನಿಯಮಬಾಹಿರವಾಗಿ ಮಣ್ಣು ತುಂಬಿಸುತ್ತಾ ಹಾಳುಗೆಡುವುದರ ವಿರುದ್ಧ ಎಸ್‌ಇಝೆಡ್ ವಿರೋಧಿ ಹೋರಾಟಗಾರ್ತಿ ವಿದ್ಯಾ ದಿನಕರ್ ನೇತೃತ್ವದಲ್ಲಿ ಸಂತ್ರಸ್ತರು ಸಂವಿಧಾನಬದ್ಧ ಹೋರಾಟ ಮಾಡುತ್ತಾ ಬಂದಿದ್ದಾರೆ. ಎಸ್‌ಇಝೆಡ್‌ನ ಈ ಅಕ್ರಮದ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು 23.05.12ರ ಬುಧವಾರ ಹೋರಾಟಗಾರರು ಪಟ್ಟುಹಿಡಿದು ಜಿಲ್ಲಾಧಿಕಾರಿ ಕಚೇರಿಯ ಬಳಿ ಜಮಾಯಿಸಿದ್ದರು. ಅಲ್ಲಿಗೆ ಜಿಲ್ಲಾಧಿಕಾರಿಯ ಕರೆಯ ಮೇರೆಗೆ ಆಗಮಿಸಿದ ಪಾಂಡೇಶ್ವರ ಠಾಣೆಯ ಖಾಕಿಗಳು ನೇರವಾಗಿ ಸಂತ್ರಸ್ತರ ಕೊರಳ ಪಟ್ಟಿಗೆ ಕೈಹಾಕಿದರು. ಮಾತ್ರವಲ್ಲದೇ 'ಕರಾವಳಿ ಅಲೆ' ಪತ್ರಿಕೆಯ ವರದಿಗಾರ ಸತೀಶ್‌ರ ಕೊರಳಪಟ್ಟಿಗೆ ಕೈಹಾಕುವಷ್ಟು ಉದ್ಧಟತನ ತೋರಿದರು. ಇದರ ವಿರುದ್ಧ ಜಿಲ್ಲಾಧಿಕಾರಿಯ ಮುಂದೆ ಗುಡುಗಿದ ವಿದ್ಯಾ ದಿನಕರ್ ಆತನ ಬೆವರಿಳಿಸಿದ್ದರು. ವಿದ್ಯಾ ಮತ್ತು ಸಂತ್ರಸ್ತರ ನ್ಯಾಯದ ಪರ ಕೂಗಿನ ಅಬ್ಬರಕ್ಕೆ ಬೆದರಿದ ಚನ್ನಪ್ಪ ಗೌಡ ಮರುದಿನ 24.5.12 ರಂದು ಫಲ್ಗುಣಿ ತೀರದ ಹಳ್ಳಿಗಳಾದ ಅತ್ರಬೈಲ್ ಮತ್ತು ಮೇಲ್‌ಕೊಪ್ಪಳಕ್ಕೆ ಭೇಟಿ ನೀಡುವ ಭರವಸೆಯನ್ನು ನೀಡಿದ್ದ. ಆದರೆ ಮರುದಿನ ಅಲ್ಲಿಗೆ ಭೇಟಿ ನೀಡದೇ ಜನರನ್ನು ವಂಚಿಸಿದ. ಮಾತ್ರ ವಲ್ಲದೇ ಜನರ ಮೇಲೆ ದೌರ್ಜನ್ಯವೆಸಗುತ್ತಿರುವ ಎಸ್‌ಇಝೆಡ್ ಸೈತಾನರಿಗೆ ಮತ್ತು ಅವರ ಬಿಸ್ಕೆಟ್ ತಿನ್ನುವ ಹಿಂದೂ ಜಾಗರಣ ವೇದಿಕೆಯ ಗೂಂಡಾಗಳಿಗೆ ರಕ್ಷಣೆ ನೀಡಲು ಪೊಲೀಸ್ ಬಂದೋಬಸ್ತ್ ಮಾಡಿಸಿದ. ಎಸ್‌ಇಝೆಡ್ ಸೈತಾನರು ದಿಗ್ವಿಜಯದ ನಗೆಬೀರಿ ಅಟ್ಟಹಾಸಗೈಯುತ್ತಾ ಫಲ್ಗುಣಿಯ ಒಡಲಿಗೆ ಮಣ್ಣು ತುಂಬಿಸುತ್ತಾ ಫಲ್ಗುಣಿಯನ್ನು ಬಂಜೆಗೈಯುವ ದುಸ್ಸಾಹಸವನ್ನು ಸಾಂಗವಾಗಿ ಮುಂದುವರಿಸುವುದನ್ನು ಸಹಿಸದ ಸಂತ್ರಸ್ತರು ರೊಚ್ಚಿಗೆದ್ದಿದ್ದರಿಂದ ಸುಮಾರು 75 ಪ್ರತಿಭಟನಾಕಾರರನ್ನು ಪಣಂಬೂರು ಮತ್ತು ಸುರತ್ಕಲ್ ಪೊಲೀಸರು ಬಂಧಿಸಿದರು. ಬಂಧನಕ್ಕೊಳಗಾದವರಲ್ಲಿ ಕೆಲವು ಪುಟ್ಟಪುಟ್ಟ ಮಕ್ಕಳು, 80 ವರ್ಷದ ಓರ್ವ ವೃದ್ಧೆ 85 ವರ್ಷದ 'ಇನ್ನೋರ್ವ ವೃದ್ಧೆ ಮಾತ್ರವಲ್ಲದೇ ಒಂದೂವರೆ ವರ್ಷದ ಹಾಲುಗೂಸೂ ಸೇರಿತ್ತು. ವಿದ್ಯಾ ದಿನಕರ್ ಮತ್ತವರ ಸಂಗಡಿಗರ ತಾಳ್ಮೆಯ ಕಟ್ಟೆ ಸಹಜವಾಗಿಯೇ ಒಡೆಯಿತು.


ಹೋರಾಟಗಾರರೊಂದಿಗೆ ನೇರವಾಗಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಅಲ್ಲಿ ಆತನ ಭೇಟಿಗಾಗಿ ಕಾಯುತ್ತಿದ್ದರು. ಇದನ್ನರಿತ ರಣಹೇಡಿ ಜಿಲ್ಲಾಧಿಕಾರಿ ಚನ್ನಪ್ಪ ಗೌಡ ತನ್ನ ಕಚೇರಿಯ ದ್ವಾರಕ್ಕೆ ಒಳಗಿಂದಲೇ ಚಿಲಕ ಹಾಕಿದ. ತನ್ನ ಸಹಾಯಕ ಸುಧಾಕರ್ ಎಂಬುವವರ ಮೂಲಕ 'ನಾಳೆ ಸ್ಥಳಕ್ಕೆ ಭೇಟಿ ನೀಡುವೆ' ಎಂದು ಹೇಳಿ ಕಳುಹಿಸಿದ. ವಿದ್ಯಾ ಮತ್ತು ಸಂಗಡಿಗರು 'ಜಿಲ್ಲಾಧಿಕಾರಿಯವರು ಇವತ್ತು ಸ್ಥಳಕ್ಕೆ ಭೇಟಿ ನೀಡುವುದಾಗಿ ಭರವಸೆ ನೀಡಿಯೂ ನಮಗೆ ಮೋಸ ಮಾಡಿದ್ದಾರೆ. ಆದುದರಿಂದ ನಾವೇ ಖುದ್ದಾಗಿ ಅವರ ಜೊತೆ ಮಾತನಾಡಬೇಕು' ಎಂದು ಪಟ್ಟು ಹಿಡಿದಾಗ ಒಳನಡೆದ ಸುಧಾಕರ್ ಚನ್ನಪ್ಪ ಗೌಡನಿಗೆ ವಿಷಯ ತಿಳಿಸಿದರು. ರಣಹೇಡಿ ಚನ್ನಪ್ಪ ಗೌಡ ಹಿಂದಿನ ಬಾಗಿಲಿನಿಂದ ಕಚೇರಿಯಿಂದ ಹೊರನಡೆದ. ಇದನ್ನು ಗಮನಿಸಿದ ವಿದ್ಯಾ ಮತ್ತು ಸಂಗಡಿಗರು ಕೆಳ ಅಂತಸ್ತಿನ ಕಾರಿಡಾರ್‌ನಲ್ಲಿ ಆತನನ್ನು ತಡೆದು ನಿಲ್ಲಿಸಿದರು. ಆಗ ಆತ ಪುನಃ 'ನಾಳೆ ಸ್ಥಳಕ್ಕೆ ಭೇಟಿ ನೀಡುತ್ತೇನೆ' ಎಂದ. 'ತಾವು ಭೇಟಿ ನೀಡುವ ಸಮಯ ತಿಳಿಸಿ' ಎಂದು ವಿದ್ಯಾ ಪಟ್ಟುಹಿಡಿದಾಗ ಅವರ ಜೊತೆ ಇದ್ದ ಜೆಸಿಂತಾ ಎಂಬ ಮಹಿಳೆಯನ್ನು ಒಂದು ಹಂತದಲ್ಲಿ ಸ್ವತಃ ಜಿಲ್ಲಾಧಿಕಾರಿಯೇ ನೂಕಿದ. ಆ ಬಳಿಕ ಆತನ ಜೊತೆಗಿದ್ದ ಕಾನ್‌ಸ್ಟೇಬಲ್ ಕೂಡ ಆಕೆಯನ್ನು ನೂಕಿದ. ಇದನ್ನು ಕಂಡ ಕ್ರುದ್ಧರಾದ ವಿದ್ಯಾ "ನೀವು ನಮ್ಮ ಮೈ ಮುಟ್ಟುವಂತಿಲ್ಲ ಬೇಕಿದ್ದರೆ ಮಹಿಳಾ ಪೊಲೀಸರನ್ನು ಕರೆಸಿ" ಎಂದರು. ಆದರೆ ಅಲ್ಲಿಗೆ ಬಂದದ್ದು ಚೆಡ್ಡಿ ಚತುರ ಎಸಿಪಿ ಜಗನ್ನಾಥ್. ಆತ ಬಂದವನೇ ವಿದ್ಯಾ ಅವರ ಎದೆಯ ಮೇಲೆ ಕೈಹಾಕಿ ಅವರನ್ನು ಹಿಂದಕ್ಕೆ ದೂಡಿದ. ಸಹಜವಾಗಿಯೇ ಸಿಟ್ಟಾದ ವಿದ್ಯಾ "ನೀವೇನು ಮಾಡು ಇದ್ದೀರಿ ಎಂಬ ಪ್ರಜ್ಞೆ ನಿಮಗಿದೆಯಾ?" ಎಂದಾಗ ತನ್ನ ಕೈಯಲ್ಲಿದ್ದ ಲಾಠಿಯನ್ನು ಎರಡು ಕೈಗಳಲ್ಲಿ ಅಡ್ಡ ಹಿಡಿದು ಅದನ್ನು ವಿದ್ಯಾರ ಎದೆಯ ಭಾಗಕ್ಕೆ ಒತ್ತಿಹಿಡಿದು ಪುನಃ ಅವರನ್ನು ನೂಕಿದ. ಅದೇ ಹೊತ್ತಿಗೆ ಹಿಂದಿನಿಂದ ಇಬ್ಬರು ಪೇದೆಗಳು ವಿದ್ಯಾ ಪೃಷ್ಠಕ್ಕೆ ಕೈಹಾಕಿ ಮುಂದಕ್ಕೆ ನೂಕಿದರು. ವಿದ್ಯಾ ಹಿಂದೆ ತಿರುಗಿ ಆವಾಜ್ ಹಾಕಿದ ಬಳಿಕ ಅವರ ಪೃಷ್ಠ ಲಾಠಿಯ ತುದಿಯಿಂದ ಗುದ್ದಲಾರಂಭಿಸಿದರು. ಇಷ್ಟೆಲ್ಲಾ ನಡೆಯುತ್ತಿರುವಾಗಲೂ ಅಲ್ಲಿ ಒಂದೇ ಒಂದು ಮಹಿಳಾ ಪೊಲೀಸರಿರಲಿಲ್ಲ. ಮಾತ್ರವಲ್ಲ ಜಿಲ್ಲಾ ಮ್ಯಾಜಿಸ್ಟ್ರೇಟ್ ಕೂಡ ಆದ ಜಿಲ್ಲಾಧಿಕಾರಿ ಯ ಮುಂದೆಯೇ ಇದೆಲ್ಲ ನಡೆಯುತ್ತಿದ್ದರೂ ಆತ ತಮಾಷೆ ನೋಡುತ್ತಿದ್ದ. ಇದಾದ ಸ್ವಲ್ಪ ಹೊತ್ತಿನ ಬಳಿಕ ಅಲ್ಲಿಗೆ ಬಂದ 'ಅಭಿನವ ಮಾಲಾಶ್ರೀ





ಫೋಟೊಗಳು: ಸಂತ್ರಸ್ತರಿಂದ ಸೆಝ್ ಕಚೇರಿಗೆ ಮುತ್ತಿಗೆ, ಪ್ರತಿಭಟನೆ ಮತ್ತು ಜೈಲಿನಿಂದ ಬಿಡುಗಡೆಗೊಳ್ಳುತ್ತಿರುವ ವಿದ್ಯಾ ದಿನಕರ್.

ಫೋಟೊ ಕೃಪೆ: ಡೈಜಿ ವರ್ಲ್ಡ್




ಕಾಲ ಯಾರ ಸುಖಕ್ಕೂ, ದುಃಖಕ್ಕೂ ಕಾಯುತ್ತಾ ನಿಲ್ಲುವುದಿಲ್ಲ. ಹಾಗೆಯೇ ತೀರ್ಪಿನ ದಿನ ಬಂದೇಬಿಟ್ಟಿತು. ದಣಿದಿದ್ದ ಮನಸ್ಸುಗಳಿಗೆಲ್ಲಾ ಅಂತೂ ನಿರಾಳವೆನಿಸಿತು. ಸುಮಾರು ಮೂರು ವರ್ಷದ ವನವಾಸ ಕೊನೆಗೊಂಡಿತು. ಸ್ಫೋಟ ಪ್ರಕರಣದ ತೀರ್ಪಿನಲ್ಲಿ ಕೋರ್ಟ್ ಮಂದಹಾಸ ಬೀರಿತ್ತು.

ಪರಿಣಾಮ

ನನ್ನ ಕೈಗಳಿಗೆ ಹಚ್ಚುತ್ತಿರುವ ಮೆಹಂದಿಯ ಚಿತ್ತಾರದೊಂದಿಗೆ, ಗೆಳತಿಯರ ಮಾತುಗಳು ನನ್ನ ಕನಸುಗಳಿಗೆ ಇನ್ನಷ್ಟು ಮೆರುಗು ನೀಡುತ್ತಿದ್ದ ಆ ಕ್ಷಣ. ನಮ್ಮ ಮನೆಯಲ್ಲಿ ನಡೆಯುತ್ತಿರುವ ಮೊದಲ ಮದುವೆಯಾದುದರಿಂದಲೋ ಏನೋ ಮನೆಯವರಿಗೆಲ್ಲಾ ಸಂಭ್ರಮವೋ ಸಂಭ್ರಮ. ಮನೆಗೆ ಬಂದ ಹಿರಿ-ಕಿರಿಯರಿಗೂ ಮದುವೆಯ ಖುಷಿ ಒಂದೆಡೆಯಾದರೆ, ನಾನೇ ಇಷ್ಟಪಟ್ಟ ಯುವಕನನ್ನು ಮದುವೆಯಾಗುತ್ತಿರುವುದರಿಂದ ಕುತೂಹಲ ಇನ್ನೊಂದೆಡೆ!

ಅಬ್ಬ! ಎಷ್ಟು ಕಷ್ಟಪಟ್ಟೆ ಇಷ್ಟಪಟ್ಟವನನ್ನು ತನ್ನವನನ್ನಾಗಿಸಲು! ನಾನಾಗ ಪಿಯು ಕಲಿಯಲು ಕಾಲೇಜಿಗೆ ಹೋಗುತ್ತಿದ್ದಾಗ ಚಿಗುರು ಮೀಸೆಯ ಅವನು ನನ್ನ ಹಿಂದೆಯೇ ಸುತ್ತುತ್ತಲೇ ಇದ್ದ. ನನಗೆ ಅವನನ್ನು ಕಂಡರೆ ಆಗ ಇದ್ದದ್ದು ತಾತ್ಸಾರವಾದರೂ, ದ್ವೇಷವಿರಲಿಲ್ಲ. ನಂತರದಲ್ಲಿ ಕುತೂಹಲಕ್ಕೆಂದು ಅವನ ಬಗ್ಗೆ ತಿಳಿಯಬೇಕೆಂದು ಅನ್ನಿಸಿ, ನನಗರಿವಿಲ್ಲದೇ ಅವನಲ್ಲಿ ಅನುರಕ್ತಳಾಗಿ ಬಿಟ್ಟಿದ್ದೆ! ಮತ್ತು ...ಗೋ ಮನೆಯವರಿಗೆ ತಿಳಿದು ರಂಪಾಟವೋ ರಂಪಾಟ! ಸಿಟ್ಟಿನ ಭರದಲ್ಲಿ ನನಗೆ ಬೇರೆ ಮದುವೆ ಮಾಡಲು ಹೊರಟದ್ದರು. ಆದರೆ ಇವನು ಬಿಡಬೇಕೆ. ಅದನ್ನು ಹೇಗೆ ಸಾಧಿಸಿದನೋ?! ಅವನು ನಮ್ಮ ಮನೆಮಂದಿಯ ಮನ ಗೆದ್ದಿದ್ದಲ್ಲದೆ, ನನಗಿಂತಲೂ ಅವರೆಲ್ಲರಿಗೂ ಇಷ್ಟವಾಗಿ ಬಿಟ್ಟಿದ್ದ.

ಇದೆಲ್ಲವೂ ಮೊನ್ನೆ ಮೊನ್ನೆ ನಡೆದ ಹಾಗೆ ಅನ್ನಿಸುತ್ತದೆ. ಕಾಲ ಎಷ್ಟು ಬೇಗ ಓಡೋದಿ ಮಾಯವಾಗಿದೆ. ಅದೆಷ್ಟು ಸುಂದರವಾದ ಸಮಯ. ಕನಸುಗಳು ರೆಕ್ಕೆ ಬಿಚ್ಚಿ ಹಾರಾಡಿದ ದಿವಸಗಳು, ನಲ್ಲನ ಪ್ರೇಮದ ಬಿಸಿಯಪ್ಪುಗೆಯಲ್ಲಿ ಮೈಮರೆತ ದಿನಗಳವು. ಮದುವೆಯಾಗಿ ಎಲ್ಲೆಲ್ಲೂ ನಾ ಕೇಳರಿಯದ ಊರಿಗೆ ಸುತ್ತಾಡಿಸಿದ. ಮತ್ತೆ ನಾ ಕೇಳದೇನೆ ನನ್ನ ಇಷ್ಟಗಳನ್ನು ಪೂರೈಸಿದ. ನನ್ನ ವಾರಗೆಯ ಗೆಳತಿಯರ ಮನದಲ್ಲಿ ಆದರ್ಶ ಹುಡುಗನಾಗಿದ್ದವ, ಪಾಪ ಈಗ ಅದೆಷ್ಟು ಕಷ್ಟದ ಜೀವನವನ್ನು ಸವೆಸುತ್ತಾ ಇದ್ದಾನೋ ಏನೊ ಅಂತ ಯೋಚಿಸುವಾಗ ಕರುಳು ಚುರುಕ್ ಅಂತ ಅನ್ನಿಸುತ್ತದೆ.



ಕತೆ

• ಆಸಿಫ್ ಅಬ್ದುಲ್ಲ
ಮಂಗಳೂರು

ಮನೆಯ ವರಾಂಡದಲ್ಲಿ ಕೂತು ತನ್ನ ಗಂಡನ ಬಗ್ಗೆ ಚಿಂತಿಸುತ್ತಿದ್ದ ಸಮೀರಳ ಕಣ್ಣಂಚಿನಲ್ಲಿ ನೀರು ಜಿನುಗಿತ್ತು, ಉಕ್ಕಿ ಬರುವ ಕಣ್ಣೀರನ್ನು ಒರೆಸುತ್ತಾ ಹೌದು ಕಣ್ಣೀರು ಹಾಕಬಾರದು. ಅದು ಅವನಿಗೆ ಇಷ್ಟವಾಗಲ್ಲ, ಕಣ್ಣೀರಿಗಿಂತ ಶಾಪ ಹೆಣ್ಣಿನ ಜೀವನದಲ್ಲಿ ಇನ್ನೊಂದಿಲ್ಲ ಅಂತ ಹೇಳುತ್ತಲೇ ಇದ್ದ. ಕಷ್ಟ ಸುಖ ಎರಡನ್ನೂ ಒಟ್ಟಿಗೆ ಜಯಿಸುವ ಮನೋಧೈರ್ಯ ನಮ್ಮಲ್ಲಿ ಬೆಳೆಸಬೇಕು ಅನ್ನುತ್ತಿದ್ದ ಅವನ ಮಾತು ಈಗ ಅರ್ಥವಾಗುತ್ತಿದೆ.

ಹೊರಗೆ ಆಕಾಶದೆತ್ತರಕ್ಕೆ ನೋಡುತ್ತಾ ಶೂನ್ಯದತ್ತ ಮುಖ ನೆಟ್ಟದ್ದನ್ನು ನೋಡಿ "ಮಗೂ.. ಅದೇನು ಅಂತ ಅಲ್ಲಿ ಕೂತು ಯೋಚನೆ ಮಾಡುತ್ತಿದ್ದೀಯ? ಚಿಂತಿಸಿದ್ದಷ್ಟು ನೋವೆ ಅಲ್ಲವೇ ಎಂದು ಅತ್ತೆ ಹೇಳಿದಾಗ ಸಮೀರ ಎಚ್ಚೆತ್ತಳು. ಸ್ನಿತಪುಷ್ಪಳಂತೆ ಅತ್ತೆ ಕುಳಿತಿದ್ದ ಜಾಗಕ್ಕೆ ಹೋಗಿ ಕೂತಳು. ಸಾರಮ್ಮ ತನ್ನ ಸೊಸೆಯ ಮುಖವನ್ನೊಮ್ಮೆ ದಿಟ್ಟಿಸಿ "ಅದೆಷ್ಟು ಮನಸ್ಸು ಕಲ ಮಾಡುತ್ತೀಯಮ್ಮ, ಅತ್ತು ಬಿಡು. ಸ್ವಲ್ಪ ನಿರಾಳವಾಗುತ್ತದೆ" ಅಂತ ತನ್ನ ಸೆರಗಿನ ತುದಿಯಿಂದ ಕಣ್ಣೀರನ್ನು ಒರೆಸುತ್ತಾ ಹೇಳಿದರು.

"ದೇವರು ಸುಖ ಕೊಡುವಾಗ ಮಾತ್ರವಲ್ಲಮ್ಮಾ, ಕಷ್ಟ ಕೊಡುವಾಗಲೂ ಅದನ್ನು ಸ್ವೀಕರಿಸುವಷ್ಟು ಮನಸು ಗಟ್ಟಿ ಮಾಡಿಕೊಳ್ಳಬೇಕು. ಎಲ್ಲವೂ ಸೃಷ್ಟಿಕರ್ತನ ಲೀಲೆ ಅಷ್ಟೆ, ಬಂದದ್ದನ್ನು ಎದುರಿಸಲೇಬೇಕು."

ಯಾರು ಏನು ಹೇಳಿದ್ದರೂ ನನಗೆ ಅವನಿರುವಾಗಿನ ಧೈರ್ಯ ಈಗ ಇಲ್ಲ, ನನಗೆ ಬಿಡು, ಊರವರಿಗೆ ಎಲ್ಲದಕ್ಕೂ ಬೇಕಾಗಿದ್ದವ. ಈಗ ಅವನು ಜೈಲಲ್ಲಿದ್ದರೆ ಅವನು ಬಿಡು, ಅವನ ಮನೆಯವರೂ ಯಾರಿಗೂ ಬೇಡವಾಗಿದ್ದಾರೆ. "ಪಾಪ ಅವರೇನು ಮಾಡುತ್ತಾರೆ ಅಲ್ಲವೇ? ಅವನ ಗೆಳೆಯರು ಅಂತ ಅವರನ್ನೂ ಪೊಲೀಸರು ಎತ್ತಿಕೊಂಡು ಹೋದರೆ?! ಅದೂ ಹೌದು, ನಮ್ಮ ಸ್ಥಿತಿ ಅವರಿಗೂ ಬರಬಾರದು. ಅವರಾದರೂ ಊರವರಿಗೆ, ಅವರ ಸಂಬಂಧಿಕರಿಗೆ ಮುಖ ತೋರಿಸಲಿ" ಎಂದು ಹೇಳುತ್ತಾ ಸಡಿಲಗೊಂಡಿದ್ದ ತಲೆಯ ರುಮಾಲನ್ನು ಸರಿಪಡಿಸಿ ಮತ್ತೊಮ್ಮೆ ಬಿಚ್ಚಿ ಕಟ್ಟಿದರು.

ನಸ್ಥಾನ ಒಡೆಯಲು ಹೊರಟ ಹಿಂದೂ ವೀರರು...!

ಸ್'ಇರ್ಝುಡ್ ಸೈತಾನರ ಬಿಸ್ಕಿಟ್ ತಿನ್ನುವ ಮಂಗಳೂರಿನ ಹಿಂದೂ ಜಾಗರಣ ವೇದಿಕೆಯ ಗೂಂಡಾಗಳು ಹೂರಿನ ಬಜ್ಪೆ ಸಮೀಪದ ನೆಲ್ಲಿವಡಿಗುತ್ತು ಎಂಬಲ್ಲಿರುವ ದೈವಸ್ಥಾನವೊಂದನ್ನು ಒಡೆಯಲು ಸಜ್ಜಾಗಿದ್ದರು. ಝುಡ್ ಆಕ್ರಮಿಸಿಕೊಂಡ ನೆಲ್ಲಿದಡಿಗುತ್ತು ಪ್ರದೇಶದ ಜನರು ಕಾಮಗಾರಿಗೆ ತಡೆಯೊಡ್ಡುತ್ತಿದ್ದಾರೆಂದು ಗಿದ್ದೇ ತಡ, ಅಲ್ಲಿಗೆ ಹಾರೆ, ಗುದ್ದಲಿ, ಪಿಕಾಸಿಗಳೊಂದಿಗೆ ಆಗಮಿಸಿದ ಹಿಂದೂ ವೀರರು (!) ಅಲ್ಲಿರುವ ಸ್ಥಾನವನ್ನೇ ಒಡೆದು ಎಸ್'ಇರ್ಝುಡ್ ಸೈತಾನರಿಗೆ ನೆರವಾಗಲು ಸಜ್ಜಾದರು. ಆದರೆ ಸ್ಥಳೀಯರ ಪ್ರಬಲ ಧದ ಮುಂದೆ ಈ ಹಿಂದೂ ರಣಹೇಡಿಗಳು ಬಂದ ದಾರಿಗೆ ಸುಂಕವಿಲ್ಲದಂತೆ ಹಿಂದಿರುಗಬೇಕಾಯಿತು. ಇವರ ಹಿಂದೂ ಧರ್ಮ ರಕ್ಷಣೆಯ ಪುಣ್ಯ ಕೈಂಕರ್ಯದ ಪರಿ....?

ಭಾರತಿ "ಜಿಲ್ಲಾಧಿಕಾರಿಯ ಕರ್ತವ್ಯಕ್ಕೆ ತಡೆ" ಪದಲ್ಲಿ ಹೋರಾಟಗಾರರನ್ನು ಬಂಧಿಸಲು ಅನು ಇದರ ಸೂಚನೆ ಸಿಕ್ಕಿದ ತಕ್ಷಣ ಈಕೆ ಮಹಿಳಾ ಎಂಬ ಧೈರ್ಯದಿಂದ ವಿದ್ಯಾ ಮತ್ತು ಕೆಲವು ರುಹು ಆಕೆಯ ವಾಹನವೇರಿದರು. ಅಲ್ಲಿಂದ ವಾದ ಈ 'ಅಭಿನವ ಮಾಲಾಶ್ರೀ'ಯ ಬೈಗುಳ ಷ್ಟು ಅಸಹ್ಯವಾಗಿದ್ದವೆಂದರೆ "ಬೇ.... ರಂ......" ಗಿ ಅಸ್ಖಲಿತವಾಗಿ ಸಾಗಿತ್ತು.

ವಿದ್ಯಾ ಮತ್ತು ಸಂಗಡಿಗರಿಗೆ ಜಾಮೀನು ಸಿಕ್ಕಿದೆ. ನ್ನ ಎಸ್'ಇರ್ಝುಡ್ ಕಾಮಗಾರಿಗೂ ಹೈಕೋರ್ಟ್ ಜ್ಞೆ ನೀಡಿದೆ. ಆದರೆ ಹೈಕೋರ್ಟ್ ತಡೆಯಾಜ್ಞೆಯ ಎಸ್'ಇರ್ಝುಡ್ ಸೈತಾನರು ತಮ್ಮ ಕಾಮಗಾರಿ ಮುಂದುವರಿಸುವ ಮೂಲಕ ನ್ಯಾಯಾಂಗ ನಿಂದನೆ ದ್ದಾರೆ. ಈ ಕುರಿತಂತೆ ವಿದ್ಯಾ ಅವರು ಮೇ 29ರಂದು ಕಾರಿ, CRZ ಅಧಿಕಾರಿಗಳಿಗೆ ಮತ್ತು ಸ್ಥಳೀಯ ಸರಿಗೆ ದೂರು ನೀಡಿದ್ದರೂ 30ರಂದು ಸಂಜೆ ಗಂಟೆಯವರೆಗೆ ನ್ಯಾಯಾಂಗದ ಆದೇಶವನ್ನು ವಂತೆ ಅವರ್‍ಯಾರೂ ಎಸ್'ಇರ್ಝುಡ್ ಸೈತಾನರಿಗೆ ಡಲಿಲ್ಲ. ಹೋರಾಟಗಾರರ ಒತ್ತಡ ಹೆಚ್ಚಾಗಿದ್ದರಿಂದ ಪರಿಸ್ಥಿತಿ ಕೈ ಮೀರಬಹುದೆಂಬ ಭಯದಿಂದ ಕಾರಿ 30ರಂದು ಸಂಜೆ 4ಗಂಟೆಗೆ ಕಾಮಗಾರಿ ವಂತೆ ಸೂಚಿಸಿದ್ದಾರೆ. ನ್ಯಾಯಾಲಯದ ಆದೇಶವನ್ನು ಖಾಸಗಿ ಕಂಪೆನಿ ಎರಡು ದಿನಗಳ ಕಾಲ ಮೀರಲು ನೀಡಿದ ಜಿಲ್ಲಾಧಿಕಾರಿಯೂ ಪರೋಕ್ಷವಾಗಿ ಂಗ ನಿಂದನೆ ಮಾಡಿದ್ದಾರೆ. ಜೂನ್ 4ರಂದು ರ್ಟ್ ವಿಭಾಗೀಯ ಪೀಠದ ಇನ್ನೊಂದು ಣೆಯಲ್ಲಿ ಎಸ್'ಇರ್ಝುಡ್ ಸೈತಾನರ ವಕೀಲ ಗಾರಿ ಕೈಗೊಳ್ಳಲು ಪರ್ಯಾಯ ಜಾಗವಿಲ್ಲದ ಯಲ್ಲಿ ಅನಿವಾರ್ಯವಾಗಿ ಯೋಜನೆಯ ದಿಕ್ಕನ್ನು ಪ್ರಮಾಣದಲ್ಲಿ ಬದಲಾಯಿಸಲಾಗಿದೆ" ಎಂದು ಝುಡ್ ಎಸಗಿರುವ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ವಿಚಾರಣೆ ಕುರಿತಂತೆ ಹೈಕೋರ್ಟಿನ ಮುಖ್ಯ ಮೂರ್ತಿ ವಿ.ಜಿ.ಸೇನ್ ಅವರು "ಅಭಿವೃದ್ಧಿ ಯೋಜನೆ ತ ಪರಿಸರ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕು. ರಾಷ್ಟ್ರೀಯ ಸಂಪತ್ತಾದ ನದಿಯ ಒಳಹರಿವಿಗೆ ತೊಂದರೆ ಉಂಟು ಮಾಡುವ ಮತ್ತು ನದಿ ಪಾತ್ರ ನಾಶಪಡಿಸುವ ಕಾರ್ಯ ಕಾನೂನುಬಾಹಿರ" ಎಂದು ತೀರ್ಪು ನೀಡಿದ್ದಾರೆ.

ಆದರೆ ಪ್ರಭುತ್ವವೇ ಎಸ್'ಇರ್ಝುಡ್ ಸೈತಾನರ ಗುಲಾಮರಾದರೆ....? ಜನವಿರೋಧಿ ಪ್ರಭುತ್ವವೇ ನ್ಯಾಯಾಂಗ ನಿಂದನೆ ಎಸಗಿದರೆ....? ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ. ಯಾಕೆಂದರೆ ಪ್ರಭುತ್ವವೇ ನ್ಯಾಯಾಂಗ ನಿಂದನೆಗೈದ ಬೇಕಾದಷ್ಟು ಉದಾಹರಣೆಗಳು ಈ ದೇಶದಲ್ಲಿ ಇವೆ. ಒಂದೆಡೆ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕಾ ಉದ್ದೇಶಕ್ಕೆ ಸ್ವಾಧೀನಪಡಿಸಿಕೊಳ್ಳಲಾಗುವುದಿಲ್ಲ ಮತ್ತು ಮಾಲೀಕರ ಒಪ್ಪಿಗೆಯ ಹೊರತಾಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಗುವುದಿಲ್ಲ ಎಂದು ಪ್ರಭುತ್ವವೇ ಹೇಳುತ್ತದೆ. ಆದರೆ ಇನ್ನೊಂದೆಡೆ ಪ್ರಭುತ್ವವೇ ತನ್ನ ಕಾಲಾಳುಗಳಾದ ಅಧಿಕಾರಿಗಳಿಂದ ಮತ್ತು ಪ್ರಭುತ್ವ ಪೋಷಿತ ಗೂಂಡಾಗಳಿಂದ ಜನರ ಮೇಲೆ ಬಲಪ್ರಯೋಗಿಸಿ ಭೂಮಿಯನ್ನು ಅಕ್ರಮವಾಗಿ ಕಸಿದುಕೊಳ್ಳುತ್ತಿದೆ.

ಪ್ರಭುತ್ವ ಮತ್ತು ಎಸ್'ಇರ್ಝುಡ್ ಸೈತಾನರ ಗುತ್ತಿಗೆ ಪಡೆದಿರುವ ಮಂಗಳೂರಿನ ಗೂಂಡಾಗಳು ಬೇರಾರೂ ಅಲ್ಲ, 'ದೇಶರಕ್ಷಕ ಹಿಂದೂ' ಗೂಂಡಾಗಳು (ಹಿಂಜಾವೇ ಗೂಂಡಾಗಳು). ಪ್ರಭುತ್ವದ ಜನ ವಿರೋಧಿ ಯೋಜನೆಗಳ ವಿರುದ್ಧ ಏಳುವ ಧ್ವನಿಗಳಿಗೆ ಸಮಾಜದ್ರೋಹಿ, ಅಭಿವೃದ್ಧಿ ವಿರೋಧಿ, ದೇಶದ್ರೋಹಿಗಳೆಂಬ ಹಣೆಪಟ್ಟಿ ಹಚ್ಚುವುದು ಹೊಸ ಬೆಳವಣಿಗೆಯೇನಲ್ಲ. ಜನರ ಸಂವಿಧಾನಬದ್ಧ, ಶಾಂತಿಯುತ ಪ್ರತಿರೋಧಕ್ಕೆ ಕವಡೆ ಕಾಸಿನ ಕಿಮ್ಮತ್ತೂ ಸಿಗದಿದ್ದಾಗ ಜನ ಏನು ಮಾಡಬೇಕು?

ಒಂದಂತೂ ಸತ್ಯ ಜನ ಕಾನೂನನ್ನು ಕೈಗೆತ್ತಿಕೊಳ್ಳಬೇಕೆಂದೇ ಪ್ರಭುತ್ವ ಬಯಸುತ್ತದೆ. ಅದಕ್ಕಾಗಿಯೇ ಹೋರಾಟಗಾರರ ಮೇಲೆ ಮತ್ತು ಸಂತ್ರಸ್ತರ ಮೇಲೆ ಪ್ರಭುತ್ವದ ಆಳುಗಳು ದೌರ್ಜನ್ಯವೆಸಗುತ್ತಿದ್ದಾರೆ. ಒಮ್ಮೆ ಜನ ಕಾನೂನನ್ನು ಕೈಗೆತ್ತಿಕೊಂಡರೆ ಮುಂದೆ ಇಡೀ ಹೋರಾಟವನ್ನು ದಮನಿಸಲು ಪ್ರಭುತ್ವಕ್ಕೆ ಕಾನೂನಿನ ಸಮರ್ಥನೆ ಸಿಗುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡೇ ಜನರು ಕಾನೂನನ್ನು ಕೈಗೆತ್ತಿಕೊಳ್ಳುವಂತೆ ಪ್ರಭುತ್ವ ಪ್ರೇರೇಪಿಸುತ್ತಿದೆ....

• ಇಸ್ಮತ್ ಫಜೀರ್



ಪರಿಣಾಮ

ದರೆ ಅದ್ಯಾವುದಕ್ಕೂ ಉತ್ತರಿಸದೆ ಏನ್ನೋ ಯೋಚಿಸುತ್ತಾ "ಹೌದು ಹೂ ಯಾರ ಮನೆಗೂ ದದೆ ಎಷ್ಟು ದಿವಸವಾಯಿತು. ವೆ, ಮೆಹಂದಿ ಯಾವುದಕ್ಕೂ ಗಲು ಮನಸ್ಸು ಬರುತ್ತಿಲ್ಲ. ಜನರ ಂಪದ ನುಡಿಗೆ, ನೋಟಕ್ಕೆ ತ್ತೇನೆ.. ನಿಶ್ಯಬ್ಧವಾಗಿರುವ ದಲ್ಲಿ ರಾಡಿ ಎಬ್ಬಿಸುವುದಾದರೂ ?! ಮುಂದಿನ ತೀರ್ಪಿನ ಸಾದರೂ ದೇವರು ನನ್ನ ಮೇಲೆ ತೋರಿಸಬಹುದು" ಅಂತ ದಲ್ಲಿ ಅಂದುಕೊಳ್ಳುತ್ತಿರುವಾಗಲೇ ದಿಯಿಂದ ಮಧ್ಯಾಹ್ನದ ಬಾಂಗ್‌ನ ಕರೆ ಪ್ರಾರಂಭಿಸಿತು. ಅಲ್ಲಿಂದ ಎದ್ದು ಸಮೀರ ಗೆ ಮನೆಯತ್ತ ನಡೆದಳು. ಗ್ಯಾಸಿನ ಮೇಲೆ ನ್ನ ಅನ್ನದ ಪಾತ್ರೆಯ ಮುಚ್ಚಳವನ್ನು ಸರಿಸಿ, ಹಾಕಿ ಅದರಿಂದ ಎರಡು ಅನ್ನದ ಗಳನ್ನು ಕೈಯ ಬೆರಳಿನಿಂದ ಅಮುಕಿ ದೆಯಾ ಅಂತ ನೋಡಿದಳು. "ಇಲ್ಲ ಇನ್ನು ಬೇಯಬೇಕು" ಅಂತ ಅಲ್ಲಿಂದ ಪುನಃ ಅತ್ತೆ ಲ್ಲಿಗೆ ಬಂದು ಕುಳಿತಳು.

ಮತ್ತೆ ತನ್ನ ಚಿತ್ತವನ್ನು ಹೊಸ್ತಿಲತ್ತ ನೆಟ್ಟು ದಲ್ಲಿ ಹೇಳಿದ್ದೆ ನಮಗೆ ಬೇಡ ಈ ರಿಯಲ್ ಟ್ ಉದ್ದಿಮೆ, ಬೇರೆಯೇನಾದರೂ ಸಣ್ಣ ರವಾದರೂ ಸಾಕು. ಜನರ ದ್ವೇಷ, ದೃಷ್ಟಿ ಳ್ಳುವುದು ಬೇಡ ಅಂತ. ಆದರೆ ಇವರು ಕೇ? ಅದೇ ಇವತ್ತು ನಮಗೆ ಾಯಿತು. ಜಾಗ ಮಾರಿದ ಮೇಲೂ ಅದರ ನ್ನು ಸ್ಥಳ ಹಿಡಿಯಬೇಕೆ?!" ಹೀಗೆ ಅವಳ ಸೆಯು ಸರಮಾಲೆಗೆ ಮೂರುವರೆ ವರುಷದ ಮಗುವಿನ ಅಳು ಬ್ರೇಕ್ ಹಾಕಿತು. ಬೆಡ್ ನ ಹಾಸಿಗೆಯಲ್ಲಿ ಮಲಗಿದ್ದ ಮಗುವನ್ನು ಎತ್ತಿಕೊಂಡು ಬಚ್ಚಲ ಮನೆಯ ಕಡೆಗೆ ಹೊರಟಳು. ಅವಳ ಈ ಮುದುಡಿದ ಬದುಕಿನಲ್ಲಿ ಜೀವನೋತ್ಸಾಹಕ್ಕೆ ಮಗುವೊಂದೇ ಕಾರಣ.

****

ಕಾಲ ಯಾರ ಸುಖಕ್ಕೂ, ದುಃಖಕ್ಕೂ ಕಾಯುತ್ತಾ ನಿಲ್ಲುವುದಿಲ್ಲ. ಹಾಗೆಯೇ ತೀರ್ಪಿನ ದಿನ ಬಂದೇಬಿಟ್ಟಿತು. ದಣಿದಿದ್ದ ಮನಸ್ಸುಗಳಿಗೆಲ್ಲಾ ಅಂತೂ ನಿರಾಳವೆನಿಸಿತು. ಸುಮಾರು ಮೂರು ವರ್ಷದ ವನವಾಸ ಕೊನೆಗೊಂಡಿತು. ಸ್ಫೋಟ ಪ್ರಕರಣದ ತೀರ್ಪಿನಲ್ಲಿ ಕೋರ್ಟ್ ಮಂದಹಾಸ ಬೀರಿತ್ತು. ಜಾಗವನ್ನು ಮಾರಿಯಾದ ನಂತರ ಆ ಜಾಗದಲ್ಲಿ ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿರುವವರೆಂಬ ಶಂಕಿತರು ಬಂದು ನೆಲೆಸಿದ್ದರೂ, ಇವನಿಗೂ ಸ್ಫೋಟಕ್ಕೂ ಯಾವುದೇ ಸಂಬಂಧವಿಲ್ಲವೆಂದು ಕೋರ್ಟ್ ನಿರ್ದೋಷಿಯೆಂದು ಬಿಡುಗಡೆ ಮಾಡಿತು.


ಹಾಗೆ ದಿನಗಳುರುಳಿದವು. ಗಂಡನ ಬಿಡುಗಡೆಯ ನಂತರ ಹೊಸ ಆತ್ಮ ವಿಶ್ವಾಸಗಳಿಸಿ, ಸುಖಸಂಸಾರಕ್ಕೆ ಮರಳುವ ಯತ್ನದಲ್ಲಿ ಸಮೀರ ಇದ್ದಳು. ತನ್ನ ಮಗುವಿನ ಭವಿಷ್ಯದ ಕನಸನ್ನು ಹೊತ್ತು ಶಾಲೆಗೆ ಸೇರಿಸುವ ಉತ್ಸಾಹದಲ್ಲಿದ್ದಳು. ಶಾಲೆಗೆ ಸೇರಿಸುವ ಸಮಯವೂ ಹತ್ತಿರ ಬಂತು. ಮಗನನ್ನು ಹಲವಾರು ಶಾಲೆಗೆ ಸೇರಿಸಲೆಂದು ಅಲೆದರು. ಕೆಲವು ಶಾಲೆಗಳು ನಾನಾಕಾರಣ ಹೇಳಿ ನುಣುಚಿಕೊಂಡವು. ಮತ್ತೆ ಕೆಲವರು ಮುಖಕ್ಕೆ ಹೊಡೆದ ಹಾಗೆ ತಿರಸ್ಕರಿಸಿದರು.

ಒಟ್ಟಿನಲ್ಲಿ ಅವಳ ಮಗ ಎಲ್ಲರ ಪಾಲಿಗೆ ಈಗ ಭಯೋತ್ಪಾದಕನ ಮಗನಾಗಿದ್ದ!



ಮದರಾಸಿನ ಜಸ್ಟಿಸ್ ಪಾರ್ಟಿಯನ್ನು ಕುರಿತು

ನನ್ನ ಅಧ್ಯಯನದ ಮಟ್ಟಿಗೆ ತಿಳಿದಿರುವಂತೆ ಭಾರತದ ಇತಿಹಾಸದಲ್ಲಿ ಅಬ್ರಾಹ್ಮಣ ಪಕ್ಷವೊಂದು ಜನ್ಮ ತಳೆದಿರುವುದು ಇದೇ ಮೊದಲ ಬಾರಿ. ಈ ಅಬ್ರಾಹ್ಮಣ ಪಕ್ಷದ ಮೂಲ ನೆಲೆಗಟ್ಟು 'ಅಬ್ರಾಹ್ಮಣ' ಎಂಬ ಪದ ಸೂಚಿಸುವ ಪದಶಃ ಅರ್ಥದಲ್ಲಿಲ್ಲವೆಂದು ಬಹಳಷ್ಟು ಜನ ಈ ವೇಳೆಗೆ ತಿಳಿದುಕೊಂಡಿರಬಹುದು. ಈ ಪಕ್ಷವನ್ನು ಅವರು ಕರೆಯುವಂತೆ ಬ್ರಾಹ್ಮಣ ಮತ್ತು ಅಸ್ಪೃಶ್ಯರ ನಡುವೆ ಬರುವ ಮಧ್ಯಮ ಜಾತಿಗಳು ಅಥವಾ ಯಾರು ಬೇಕಾದರೂ ನಡೆಸುತ್ತಿರಲಿ, ಪ್ರಜಾಪ್ರಭುತ್ವವಾದಿ ಅಲ್ಲದಿದ್ದರೆ ಈ ಪಕ್ಷಕ್ಕೆ ಅಸ್ತಿತ್ವ ಇರುತ್ತಿರಲಿಲ್ಲ. ಆದ್ದರಿಂದ ಪ್ರಜಾಪ್ರಭುತ್ವದ ಬಗೆಗೆ ಕಳಕಳಿಯುಳ್ಳವರೆಲ್ಲ ಈ ಪಕ್ಷದ ಆಸಕ್ತಿ ಮತ್ತು ಭವಿಷ್ಯದ ಕುರಿತು ಕಾಳಜಿ ಹೊಂದಿದ್ದರು. ಅಬ್ರಾಹ್ಮಣ ಪಕ್ಷವೊಂದರ ಸಂಘಟನೆ ಈ ದೇಶದ ಇತಿಹಾಸದಲ್ಲಿಯೇ ಒಂದು ಅಪೂರ್ವ ಘಟನೆ. ಅದರ ಅವನತಿಯೂ ದುಃಖದಿಂದ ನೆನೆಯಬೇಕಾದ ಐತಿಹಾಸಿಕ ಘಟನೆಯೇ ಸರಿ. 1937ರ ಚುನಾವಣೆಯಲ್ಲಿ ಪಕ್ಷ ಏಕೆ ನೆಲಕಚ್ಚಿತು ಎನ್ನುವುದರ ಬಗ್ಗೆ ಪಕ್ಷದ ನಾಯಕರು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ಈ ಚುನಾವಣೆ ಬರುವ ಮುನ್ನ 24 ವರ್ಷದಿಂದ ಮದರಾಸಿನಲ್ಲಿ ಈ ಅಬ್ರಾಹ್ಮಣ ಪಕ್ಷವೇ ಆಡಳಿತ ನಡೆಸಿದೆಯೆಂಬುದನ್ನು ತಿಳಿದುಕೊಳ್ಳಬೇಕು. ಇಷ್ಟು ದೀರ್ಘ ಕಾಲ ಆಡಳಿತ ನಡೆಸಿಯೂ ಚುನಾವಣೆಯಲ್ಲಿ ಇಸ್ಪೀಟು ಎಲೆಯಲ್ಲಿ ಕಟ್ಟಿದ ಮನೆಗಳಂತೆ ಉದುರಿಬೀಳಲು ಕಾರಣವೇನು? ಬಹುಸಂಖ್ಯಾತರಾಗಿರುವ ಅಬ್ರಾಹ್ಮಣರೆದುರೇ ಏಕೆ ಈ ಪಕ್ಷ ಜನಪ್ರಿಯತೆ ಕಳೆದುಕೊಂಡಿತು?



ನನ್ನ ಪ್ರಕಾರ ಸೋಲಿಗೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ಅವರಿಗೆ ಬ್ರಾಹ್ಮಣರ ಜೊತೆಗಿದ್ದ ಭಿನ್ನಮತದ ಅರಿವೇ ಇರಲಿಲ್ಲ. ಬ್ರಾಹ್ಮಣರ ಕಟುಟೀಕೆ ಮಾಡುತ್ತಿದ್ದಾಗ್ಯೂ ಭಿನ್ನಮತ ಕೇವಲ ಸೈದ್ಧಾಂತಿಕ ಎಂದು ಹೇಳುವ ಧೈರ್ಯ ಅಲ್ಲಿ ಯಾರಿಗಾದರೂ ಇತ್ತೆ? ತಮ್ಮಲ್ಲಿ ಅವರು ಎಷ್ಟು ಬ್ರಾಹ್ಮಣ್ಯ ಹೊಂದಿದ್ದರು? ತಾವೂ ನಾಮ ಎಳೆದುಕೊಂಡು ಎರಡನೆಯ ದರ್ಜೆ ಬ್ರಾಹ್ಮಣರೆಂದು ತಿಳಿದುಕೊಂಡಿದ್ದರು. ಬ್ರಾಹ್ಮಣ್ಯ ನಿರಾಕರಿಸುವುದರ ಬದಲು ತಾವು ತಲುಪಬೇಕಾದ ಗುರಿ ಅದೇ ಎಂಬ ಆದರ್ಶ ಹೊಂದಿದ್ದರು. ಬ್ರಾಹ್ಮಣರ ವಿರುದ್ಧ ಅವರ ಸಿಟ್ಟೆಲ್ಲ ತಮಗೆ ಎರಡನೆಯ ದರ್ಜೆ ಕೊಡುತ್ತಾರೆನ್ನುವುದು ಬಿಟ್ಟರೆ ಬೇರೇನಲ್ಲ.

ತಾವು ಯಾವ ಪಕ್ಷದಲ್ಲಿದ್ದೇವೋ ಆ ಪಕ್ಷವು ಸೈದ್ಧಾಂತಿಕವಾಗಿ ವಿರೋಧ ಪಕ್ಷಕ್ಕಿಂತ ಏಕೆ, ಹೇಗೆ ವಿಭಿನ್ನವೆನ್ನುವುದನ್ನು ಅದರ ಕಾರ್ಯಕರ್ತರು ತಿಳಿದುಕೊಳ್ಳದ ಮೇಲೆ ಅಂಥ ಪಕ್ಷ ಸಮಾಜದಲ್ಲಿ ಬೇರೂರಲು ಹೇಗೆ ಸಾಧ್ಯ? ಆದ್ದರಿಂದ ಬ್ರಾಹ್ಮಣರು ಮತ್ತು ಅಬ್ರಾಹ್ಮಣರ ನಡುವಿನ ಸೈದ್ಧಾಂತಿಕ ವ್ಯತ್ಯಾಸಗಳನ್ನು ಗುರುತಿಸುವಲ್ಲಿ ವಿಫಲವಾಗಿದ್ದು ಪಕ್ಷದ ಸೋಲಿಗೆ ಬಲವಾದ ಕಾರಣವಾಗಿದೆ. ಅದರ ಸೋಲಿಗೆ ಎರಡನೆಯ ಕಾರಣ ಅದರ ಸಂಕುಚಿತ ಉದ್ದೇಶದ ರಾಜಕೀಯ ಕಾರ್ಯಕ್ರಮಗಳು. ತನ್ನ ವಿರೋಧಿಗಳಿಂದ 'ಉದ್ಯೋಗಾಕಾಂಕ್ಷಿಗಳ ಪಕ್ಷ' ಎಂದು ಅದು ಲೇವಡಿಗೊಳಗಾಗಿದೆ. 'ದಿ ಹಿಂದೂ' ಪತ್ರಿಕೆ ಆಗಾಗ ಬಳಸಿದ ಪದಪುಂಜ ಇದು. ಈ ಟೀಕೆಗೆ ನಾನು ಹೆಚ್ಚು ಬೆಲೆ ಕೊಡುವುದಿಲ್ಲ; ಏಕೆಂದರೆ ನಾವು ಉದ್ಯೋಗದ ಬೇಟೆಯಲ್ಲಿರುವವರಾದರೆ ನಮ್ಮ ಎದುರಾಳಿಗಳು ಅದಕ್ಕಿಂತ ಕಡಿಮೆಯಿಲ್ಲ. ಈ ಅಬ್ರಾಹ್ಮಣ ಪಕ್ಷದ ರಾಜಕೀಯ ಕಾರ್ಯಕ್ರಮದ ಒಂದು ಕೊರತೆಯೆಂದರೆ ತನ್ನ ತರುಣರಿಗೆ ಸರ್ಕಾರಿ ಉದ್ಯೋಗ ಕೊಡಿಸುವುದನ್ನೇ ಮುಖ್ಯ ಕಾಳಜಿಯನ್ನಾಗಿ ಮಾಡಿಕೊಂಡಿತು. ಅದು ಖಂಡಿತ ನ್ಯಾಯ ಸಮ್ಮತವೇ. ಆದರೆ ಆ ಅಬ್ರಾಹ್ಮಣ ತರುಣರು - ಯಾರಿಗೆ ಸರ್ಕಾರಿ ಉದ್ಯೋಗ ಕೊಡಿಸುವುದೇ ತನ್ನ ಮುಖ್ಯ ಗುರಿ ಎಂದು ಪಕ್ಷ ಭಾವಿಸಿತ್ತೋ ಅವರು - ನಿಯಮಿತ ಸಂಬಳ ಬರುತ್ತಿರುವಾಗ ಪಕ್ಷವನ್ನು ನೆನಪಿನಲ್ಲಿಟ್ಟುಕೊಂಡರೆ? 20 ವರ್ಷ ಆಡಳಿತದಲ್ಲಿದ್ದ ಪಕ್ಷವು ಹಳ್ಳಿಗಳ ಅತಿ ಬಡವ ಮತ್ತು ಲೇವಾದೇವಿಗಾರರ ಹಿಡಿತದಲ್ಲಿ ನರಳುತ್ತಿದ್ದ 90% ಅಬ್ರಾಹ್ಮಣರನ್ನು ಮರೆತೇಬಿಟ್ಟಿತ್ತು.

ಈ ಅವಧಿಯಲ್ಲಿ ಕೆಲಸ ಮಾಡಿದ ಪಕ್ಷದ ಶಾಸಕರ ಕಾರ್ಯಸೂಚಿಯನ್ನು ನೋಡಿದೆ. ಭೂಸುಧಾರಣೆಯ ಒಂದೇ ಒಂದು ಸಣ್ಣ ಪ್ರಯತ್ನ ಹೊರತುಪಡಿಸಿದರೆ ಅಬ್ರಾಹ್ಮಣರ ಪಕ್ಷ ರೈತರ ಮತ್ತು ಗೇಣಿದಾರರ ಚಿಂತೆಯನ್ನೇ ಮಾಡಿಲ್ಲ. ಹೀಗಾಗಿಯೇ ಕಾಂಗ್ರೆಸ್ ಮನುಷ್ಯ ಅವರ ಬಟ್ಟೆಗಳನ್ನು ಸದ್ದಿಲ್ಲದೆ ಕಳಚಲು ಸಾಧ್ಯವಾಯಿತು.

ಈ ಘಟನೆಗಳು ತೆಗೆದುಕೊಂಡ ತಿರುವುಗಳಿಂದ ನನಗೆ ನೋವಾಗಿದೆ. ಒಂದು ವಿಷಯವನ್ನು ಸ್ಪಷ್ಟಪಡಿಸಲು ಬಯಸುತ್ತೇನೆ: ಒಂದು ಪಕ್ಷ ಮಾತ್ರ ಅವರನ್ನು ರಕ್ಷಿಸಬಲ್ಲದು. ಪಕ್ಷಕ್ಕೆ ಒಬ್ಬ ಒಳ್ಳೆಯ ನಾಯಕ, ಸಂಘಟನೆ, ರಾಜಕೀಯ ವೇದಿಕೆ ಎಲ್ಲ ಬೇಕು.

ಆದರೆ ನಮ್ಮ ನಾಯಕರ ಕುರಿತು ನಾವು ತೀರಾ ವಿಮರ್ಶಾತ್ಮಕವಾಗಿ ನೋಡುವುದು ಬೇಡ. ಕಾಂಗ್ರೆಸ್ ನೋಡಿ. ಇನ್ಯಾವ ದೇಶದಲ್ಲಿ ಗಾಂಧಿಯನ್ನು ತಮ್ಮ ನಾಯಕನೆಂದು ಒಪ್ಪುತ್ತಿದ್ದರು? ಯಾವುದೇ ದೂರದೃಷ್ಟಿ, ಜ್ಞಾನ, ಯುಕ್ತಾಯುಕ್ತ ವಿವೇಚನೆಯಿಲ್ಲದ ಮನುಷ್ಯ ಆತ. ತನ್ನ ಜೀವಮಾನವಿಡೀ ಸಾರ್ವಜನಿಕ ಜೀವನದಲ್ಲಿ ಸೋಲನು ಭವಿಸಿದ ವ್ಯಕ್ತಿ ಆತ. ಗಾಂಧಿ ಏನೋ ಒಳ್ಳೆಯದನ್ನು ಮಾಡಿ ಭಾರತ ಯಶಸ್ಸಿನತ್ತ ಹೆಜ್ಜೆಯಿಟ್ಟ ಯಾವುದೇ ಸಂದರ್ಭದ ಉದಾಹರಣೆ ಇಲ್ಲ. ಎರಡು ಮೂರು ವರ್ಷಗಳಿಂದೀಚೆಗೆ ಜಿನ್ನಾ ಪಾಕಿಸ್ತಾನದ ವಿಷಯ ಎತ್ತಲು ಶುರು ಮಾಡಿದಾಗ ಗಾಂಧಿ ಅದನ್ನೊಂದು ಪಾಪವೆಂದು ಜರೆದರು. ಆ ಬಗ್ಗೆ ಕಿವುಡಾದರು. ಕೊನೆಗೂ ನಡುವಿನ ಕಂದರ ಬೆಳೆಯುತ್ತಲೇ ಹೋಯಿತು. ಗಾಂಧಿಗೆ ಆಗ ಹೆದರಿಕೆಯಾಯ್ತು, ಈಗ ಸಂಪೂರ್ಣ ಉಲ್ಟಾ ಹೊಡೆದು ಅದರ ಜೊತೆ ಹೋರಾಡುತ್ತಿದ್ದಾರೆ. ಆದರೂ ಕಾಂಗ್ರೆಸ್ಸಿನ ನಾಯಕನಾಗೇ ಮುಂದುವರೆದಿದ್ದಾರೆ. ಏಕೆಂದರೆ ಕಾಂಗ್ರೆಸ್ ತನ್ನ ನಾಯಕನನ್ನು ಪರೀಕ್ಷೆಗೆ ಒಳಪಡಿಸಲೇ ಇಲ್ಲ.

ಜಿನ್ನಾ ವಿಷಯ ಏನೆಂದು ನೋಡೋಣ. ಆತನೊಬ್ಬ ಸರ್ವಾಧಿಕಾರಿ ನಾಯಕ. ನಿಮಗಿದು ಆಶ್ಚರ್ಯ ಎನಿಸಬಹುದು - ಇಡೀ ಮುಸ್ಲಿಂಲೀಗ್ ಆತನೊಬ್ಬನದೇ ಶೋ. ಹಾಗೆಯೇ ಮುಸಲ್ಮಾನರೂ ತಕ್ಕದಾಗಿ ಅವರ ಮೇಲೆ ವಿಶ್ವಾಸವಿರಿಸಿದರು. ಕಾಂಗ್ರೆಸ್ಸಿಗೆ ಗೊತ್ತಿತ್ತು ತನ್ನ ನಾಯಕರ ವಿರುದ್ಧ ತೆಗೆದುಕೊಳ್ಳುವ ಯಾವುದೇ ಕ್ರಮ ಪಕ್ಷದ ಬುಡವನ್ನು ಅಲುಗಾಡಿಸುತ್ತದೆ ಎಂದು. ಹಾಗಾಗಿಯೇ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದ್ದರೂ ಎಷ್ಟೊಂದನ್ನು ಸುಮ್ಮನೆ ಸಹಿಸಿದರು. ಆದ್ದರಿಂದ ಅಬ್ರಾಹ್ಮಣರಿಗೆ ಹೇಳುತ್ತಿದ್ದೇನೆ, ಐಕ್ಯತೆಯೇ ಅತಿಮುಖ್ಯವಾದದ್ದು. ಕಾಲ ಮಿಂಚುವ ಮೊದಲೇ ಪಾಠ ಕಲಿಯಿರಿ.

(ಸೆ.23, 1944ರಂದು ಸಂಡೆ ಅಬ್ಸರ್ವರ್ ಸಂಪಾದಕ ಪಿ. ಬಾಲಸುಬ್ರಮಣ್ಯಂ ಅವರು ಮದರಾಸಿನಲ್ಲಿ ನೀಡಿದ ಭೋಜನಕೂಟದಲ್ಲಿ ಆಡಿದ ಮಾತುಗಳು. ಚಿತ್ರ: ಕೃಪೆ: ಅಂಬೇಡ್ಕರ್; ಸಂ. ಭಗವಾನ್ ದಾಸ್)

ಕನ್ನಡಕ್ಕೆ: ಡಾ. ಎಚ್.ಎಸ್.ಅನುಪಮಾ

ಬರದ ಬೇಗೆಯಲ್ಲಿ ಬುಳುಬುಳು ಅಳುತ್ತಿರುವ ಹಳ್ಳಿ





ಬರ ರಾಯಚೂರು ಜಿಲ್ಲೆಯಲ್ಲಿ ಹೆಚ್ಚಿನ ಗಾಯಗಳನ್ನು ಮಾಡುತ್ತಿದೆ. ಕೂಲಿ ಸಿಗದೇ ಅಲ್ಲಿನ ಅನೇಕ ಜನರು ಬೆಂಗಳೂರು, ಮಂಗಳೂರು, ಪೂನಾ, ಗೋವಾದ ದಾರಿ ಹಿಡಿಯುತ್ತಿದ್ದಾರೆ. ಹೆಚ್ಚಾಗಿ ಲಂಬಾಣಿಗರು, ದಲಿತರು ವಾಸಿಸುವ ಲಿಂಗಸುಗೂರು ತಾಲ್ಲೂಕಿನ ಜಕ್ಕೇರಮಡು ಗ್ರಾಮದಲ್ಲಿನ ನೈಜಸ್ಥಿತಿಯನ್ನು ಬಿಂಬಿಸುವ ಲೇಖನ ಇಲ್ಲಿದೆ.

■ ಬಸವರಾಜ ಹಳ್ಳಿ, ಹಸಮಕಲ್

ಊರಲ್ಲಿ ಯಾರೂ ಇಲ್ಲ

ನಾವು ಅಲ್ಲಿಗೆ ಹೋದಾಗ ಬಿಸಿಲು ಸುರಿಯುತ್ತಿತ್ತು, ತೂತು ಬಿದ್ದ ಬೇನೇ ಗಿಡದ ನೆರಳಲ್ಲಿ ಎತ್ತುಗಳು ದಂಟು ನಮಲುತ್ತಿದ್ದವು. ಆಡುಮರಿಗಳು ಬಿದ್ದ ಎಲೆಯನ್ನು ಆರಿಸಿ ತಿನ್ನುತ್ತಿದ್ದರೆ, ಬಾಜೂಕ ತಾಟಿಡಿದು ಹೊರಟಿದ್ದ ಸಣ್ಣ ಹುಡುಗಿಯರ ಕಾಲಲ್ಲಿ ಚಪ್ಪಲಿಯೂ ಇರಲಿಲ್ಲ. 'ಬರ'ಗಾರ ಈ ಊರಿಗೆ ಬಂದು ಮೊಕ್ಕಾಂ ಹೂಡಿದ್ದಾನೆ. ಊರಿಗೆ ಊರೇ ಝಳಕ್ಕೆ 'ಯಪ್ಪೋ ಯವ್ವೋ' ಅಂತ ಹೊಯ್ಕೊಳ್ಳುತ್ತಿರುವ ಹಾಗೆ ಕಂಡಿತು. ಅಲ್ಲೊಂದು ಇಲ್ಲೊಂದು ಮನೆಗಳ ಹೊರತುಪಡಿಸಿ ಉಳಿದ ಬಾಗಿಲುಗಳಿಗೆ ಕೀಲಿಪತ್ತ ಬಿದ್ದಿದೆ.

ಇರಿಬಿಗತೆ ಮುದುರಿಕೊಂಡು ಅಡ್ಡಾಡುತ್ತಿದ್ದ ಕೆಲ ಯಜಮಾನರು ಬತ್ತಿ ಎಳೆಯುತ್ತಲೇ ಕೆಂಡದ ಕೊಡಪಾನಗಳನ್ನು ಹೊತ್ತು ಹೆಜ್ಜೆ ಇಡುತ್ತಿದ್ದರು. ಶೆಡ್ಡಿನ ತಗಡುಗಳ ಮೇಲೆ ಜಾರಿಕಿ ಆಟ ಆಡುತ್ತಿದ್ದ ಸೂರ್ಯ ಕಣ್ಣಿಗೆ ಪಟಕ್ಕನೆ ಕುಕ್ಕುತ್ತಿದ್ದ. ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಜಕ್ಕೇರಮಡುವು ಎಂಬ ಊರು ಬರಗಾಲದ ಉಪಟಳಕ್ಕೆ ಮುಕುಳಿ ಸುಟ್ಟ ಬೆಕ್ಕಿನಂತಾಗಿದೆ. ಲಂಬಾಣಿಗರು ಮತ್ತು ದಲಿತರು ಹೆಚ್ಚಾಗಿ ವಾಸಿಸುವ ಇಲ್ಲಿ ಕೂಲಿ ಕೆಲಸ ಕೂಡ ದೊರೆಯದೆ ಬಹುತೇಕರು ಊರು ತೊರೆದಿದ್ದಾರೆ. ಈ ಚಿಕ್ಕ ಊರು ಈಗ ಖಾಲಿ.. ಖಾಲಿ... ಹೊಡೆಯುತ್ತಿದೆ.

****

ಚರ್ಮ ಸುಲಿದ ಮನೆಗಳು ಮುಚ್ಚಿದ ಬಾಗಿಲುಗಳಿಂದ ಸ್ವಾಗತಿಸುತ್ತಿದ್ದವು. ಅಂಗಳದಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಪುರಲೇ ಕಟಿಗೆ ಹೊರತು ನೀರು ಚೆಲ್ಲಿದ ಹಸಿಯೂ ಕಾಣಲಿಲ್ಲ. ಕತ್ತಲೆಗುಹೆಗಳಂತಿರುವ ಓಣಿಗಳಲ್ಲಿ ಸದ್ದಿಗೂ ಉರುಲು ಬಿಗಿಯಲಾಗಿತ್ತು. ಮನೆಗಳು ತಮ್ಮ ಯಜಮಾನರನ್ನು, ಹುಡ್ರು-ಉಪ್ಪಡಿಗಳನ್ನು ಬೆಂಗಳೂರಿನ ಏರಿಯಾಗಳಲ್ಲಿ ಕಳೆದುಕೊಂಡು ದಿನಗಳೇ ಉರುಳಿವೆ. ಕಿಟಕಿಗಳಿಗೆ ಹತ್ತಿದ್ದ ಜೇಡಿ; ಗಾಳಿಗೆ ತೆರೆದುಕೊಂಡಿದ್ದ ಗಬಾಂಚಿ, ಸೀಳಿಕೊಂಡು ಕುಂತ ಕುಂಬಿಯ ಅರನಾಳಿಗಿಗಳು ಮನೆಯೊಡೆಯ ಇಲ್ಲ ಎಂದು ಕೂಗಿ ಹೇಳುತ್ತಿದ್ದವು. ಅಘೋಷಿತ ಕರ್ಫ್ಯೂ ಹೇರಿದಂತಿರುವ ಊರಲ್ಲಿ ಹುರಿದ ಬಿಸಿಲ ಹೊರತು, ಕುಡಿಯಲು ಕೇಳಿದರೆ ಸಟ್ಟನೇ ಚೆಂಬಿಗಿ ನೀರು ಸಿಗುವುದಿಲ್ಲ.

****

ಜಳಕ ಮಾಡಿದ ನೀರಿಗೆ ಬಚ್ಚಲು ಮೋರೆಯ ಬಳಿ ಬೆಳೆದ ಸಣ್ಣ ಜೇಕು ಬಿಟ್ಟು, ಹಸಿರೆಂದರೆ ಜಾಲಿ ಗಿಡದ ತಪ್ಪ, ಬೇನೇ ಎಲೆ ಮಾತ್ರ. ಗೈರಾಣಿಯಲ್ಲಿ ತೀರಿಕೊಂಡ ಕರ್ಕಿಯ ಎಲುಬುಗಳಷ್ಟೇ ದೊರೆಯುತ್ತವೆ. ಇನ್ನು ಮಸಾರಿ ಹೊಲದಲ್ಲಿ ಬುಡುಸು ಬಿಟ್ಟು ಏನೂ ಉಳಿದಿಲ್ಲ. ಕುರಿ, ಆಡು ಸಾಕಿದ ಬೆರಳೆಣಿಕೆಯ ಕುಟುಂಬಗಳು ಅವುಗಳಿಗೆ ಉಣಿಸಲು ದಿನ ಯುದ್ಧವೇ ಮಾಡಬೇಕು. ಕೆಲವರು ಕಿ.ಮೀ.ಗಟ್ಟಲೇ ದೂರದ ಹೊಲಗಳಿಗೆ ಗಾಡಿಯಲ್ಲಿ ಸಾಗಿಸಿ ಬೇವಿನಗಿಡದ ಕೊಲ್ಲಿಗಳನ್ನು ಮುರಿದು ಮೇಯಿಸುತ್ತಾರೆ. ಎತ್ತು, ಆಕಳುಗಳು ಹೊಟ್ಟೆ ತುಂಬ ಮೇವು ಕಾಣದೇ ಬಹಳ ದಿನಗಳೇ ಆಗಿವೆ. ದನಗಳ ಪರಿಸ್ಥಿತಿ ನೋಡಲಾಗದವರು ಮುದಗಲ್ ಸಂತೆಗೆ ದಾಟಿಸಿದ್ದಾರೆ. ನಾವು ಊರೊಳಗೆ ಹೋದಾಗ ಡೊಂಕು ಬೇವಿನಗಿಡಕ್ಕೆ ಕುಳಿತಿದ್ದ ಕೆಲವರು ಆಕಾಶವೇ ತಲೆ ಮೇಲೆ ಬಿದ್ದವರಂತೆ ಜೋಲು ಮುಖ ಹೊತ್ತು ನಮ್ಮನ್ನು ನೋಡುತ್ತಿದ್ದರು. ಬರ ಅವರ ಮೇಲೆ ಎಳೆದಿರುವ 'ಬರೆ'ಗೆ ಮನತುಂಬ ಬೊಬ್ಬೆಗಳೆದ್ದಿವೆ.

****

ಸಣ್ಣ ಊರು. ಬೆಂಗಳೂರಿನ ಕೂಲಿಯನ್ನು ನೆಚ್ಚಿಕೊಂಡಿದೆ. ಅಲ್ಲಿ ಸಿಮೆಂಟಿನ ಪುಟ್ಟಿ ತಲೆ ಮೇಲೆ ಹೊತ್ತರೆ ಇಲ್ಲಿನ ಜೀವಗಳು ಅಗುಳು ಕಾಣುತ್ತವೆ. ಬರ ಬಂದ ಮೇಲೆ ಇಲ್ಲಿನ ಅನೇಕ ಕುಟುಂಬಗಳು ಹತ್ತಿರದ ಪಟ್ಟಣದಿಂ[...] ತಂದದ್ದು ಎರಡೇ ವಸ್ತುಗಳನ್ನು, ಒಂದು ಪತ್ತ, ಇನ್ನೊಂದು ಪ್ಲಾಸ್ಟಿಕ್ ಚೀಲ. ಒಂದರಲ್ಲಿ ಮನೆಗೆ ಬೀಗ ಜಡಿದರೆ, ಇನ್ನೊಂದರಲ್ಲಿ ಸಾಮಾನ[...] ಸರಂಜಾಮು ಕಟ್ಟಿಕೊಂಡು ಬೆಂಗಳೂರು ಬಸ್ ಹಿಡಿದಿವೆ. ಕೂಲಿ ಕೆಲಸವಿಲ್ಲ[...] ಉಸಿರುಗಟ್ಟಿದ ಬಡ, ದಲಿತ ಕುಟುಂಬಗಳು ನಿರ್ವಾಹವಿಲ್ಲದೆ ಊ[...] ಕಡೆಗೆ ಬೆನ್ನು ಮಾಡಿ ದೂರ ಸಾಗಿವೆ. ಉಳಿದವರು ಮಳೆರಾಯನಿ[...] ದಿನವೂ ಕಾಯುತ್ತಿದ್ದರೆ, ಅಲ್ಲೊಂದು ಇಲ್ಲೊಂದು ಹೊಲದಲ್ಲಿ ಎತ್ತುಗಳ[...] ಮಡಿಕಿ ಎಳೆಯುವುದು ಕಾಣುತ್ತದೆ. ಈಗ ಊರು ನಿಶಕ್ತಗೊಂಡು ವಿಲ[...] ವಿಲ.. ಅಂತ ಒದ್ದಾಡುತ್ತಿದೆ. ಉರಿ ಬಿಸಿಲಿಗೆ ಅದಕ್ಕೆ ತಲೆಮಟ್ಟ ಜ್ವ[...] ಏರಿರಬಹುದು ಅನಿಸುತ್ತಿದೆ. ಅದರ ದಾಹ ತೀರಿಸಲು ಕೊಳವೆಬಾವಿಗಳ[...] ಸರಿಯಾಗಿ ನೀರು ಬರುತ್ತಿಲ್ಲ.

****

ಮಳೆ ಬೆಳೆಯಿದ್ದಾಗ ಸಂಕ್ಟಿ-ಕಾರಪುಡಿಯಾದರೂ ಉಂಡು ಹೊ[...] ಹೊರೆಯುತ್ತಿದ್ದ ಜನರಿಗೆ ದುರ್ಬರ ದಿನಗಳ ಸುವರ್ಣ ಕಾ[...] ಅರೆಹೊಟ್ಟೆಯಿಂದ ರಗಡಿಸುತ್ತಿರುವ ಊರಿಗೆ ಓಟು ಪಡೆದವರಾಗ[...] ತೆರಿಗೆ ಇಸ್ಕೊಂಡವರಾಗಲಿ ಬಂದಿಲ್ಲ. ಈ ಕಾರಣ ತೀರಾ ಸಿಟ್ಟುಗೊಂಡಿರು[...] ಊರಿನವರು ಅವರ ಮಾತೆತ್ತಿದರೆ ಸಾಕು ಲಟಿಗಿ ಮುರಿದು ಹಿಡಿಶಾ[...] ಹಾಕುತ್ತಾರೆ. ಸವೆಯುತ್ತಿರುವ ಅಳಿದುಳಿದ ಕಾಳುಕಡ್ಡಿ, ಏರುತ್ತಿರುವ ದಾ[...] ಸುಡುತ್ತಿರುವ ನೆಲ ಮತ್ತಷ್ಟು ಬೇಗುದಿಯನ್ನು ಇಮ್ಮಡಿಸಿದೆ. ಕಾದ ಜೀವಗ[...] ತತ್ತರಿಸುತ್ತಿವೆ.

****

ಥೇಕುತ್ತಿರುವ ಊರು ಬುಳುಬುಳು ಅಳುತ್ತಲೆ ತನ್ನ ಕತೆ ಬಿಚ್ಚಿಕೊಂ[...] ಹೋಯಿತು. ತನ್ನನ್ನು ಬಿಟ್ಟು ಬೆಂಗಳೂರಿನಲ್ಲಿ ಜೀವ ತೇಯುತ್ತಿರು[...] ಜನರನ್ನು ಅದು ನಮಗೆ ಕೇಳೇ ಕೇಳಿದಂತೆ ಭಾಸವಾಯಿತು. ಜನರ[...] ಕಳೆದುಕೊಂಡು ಸಪ್ಪೆ ಮುಖಮಾಡಿದ್ದ ಊರು ಬಿಟ್ಟು ಬರುವಾಗ ನಮ[...] ಹೆಜ್ಜೆಗಳನ್ನು ಇಡಲು ಭಾರವೆನಿಸಿತು. ಊರು ಉಸಿರುಗ[...] ತೇಲುಗಣ್ಣು-ಮೇಲುಗಣ್ಣು ಹಾಕುತ್ತಿರುವಾಗ ಚೂರು ಸಹಾಯಕ್ಕೆ ಬರ[...] ಪ್ರಭುತ್ವದ ಹೊಣೆಗೇಡಿತನಕ್ಕೆ ಮನಸುಗಳು ಕುದಿಯುತ್ತಿರುವಂತೆ; ಅದ[...] ತಾಪಕ್ಕೆ ಬಿಸಿಲ ಗುಳ್ಳೆಗಳು ಏಳುತ್ತಿರುವಂತೆ ನಮಗೆ ಕಂಡುಬಂದವು.

1933 ಮತ್ತು **1975**ರ ನಡುವೆ ಬದುಕಿದ್ದ ದುಷ್ಯಂತ್ ಕುಮಾರ್ ತನ್ನ ಕ್ರಾಂತಿಕಾರಿ ಗೀತೆಗಳಿಗಾಗಿ ಪ್ರಸಿದ್ಧ. ಆತನ ಕೆಲವು ಕವಿತೆಗಳು ಹೋರಾಟದ ಹಾಡುಗಳಾಗಿ ಜನಪದ ರೂಪ ಪಡೆದಿವೆ. ತನ್ನ ಹಿಂದಿ-ಉರ್ದು ಮಿಶ್ರಿತ ಕಾವ್ಯ ಬಾಷೆಯನ್ನು "ಇದೇ ಜನರ ಆಡು ಭಾಷೆ" ಎಂದು ತನ್ನ ಕವನಸಂಕಲನವೊಂದರಲ್ಲಿ ಬರೆದುಕೊಂಡ ಈತ ಗಾಲಿಬ್ ತನ್ನ ಕಷ್ಟಗಳನ್ನು ಹೇಳಿಕೊಳ್ಳಲು ಗಜಲ್ ಪ್ರಕಾರವನ್ನೇ ಆಯ್ಕೆ ಮಾಡಿಕೊಂಡದ್ದೇಕೆ ಎಂದು ಆಲೋಚಿಸುತ್ತ "ಆತ ತನ್ನ ವ್ಯಕ್ತಿಗತ ನೋವನ್ನೇ ಈ ಪ್ರಕಾರದ ಕೈಹಿಡಿದು ಸಾರ್ವಜನಿಕಗೊಳಿಸ ಬಲ್ಲನಾದರೆ ನಾನೇಕೆ ಸಾರ್ವಜನಿಕ ದುಃಖ-ಸಂಕಟಗಳನ್ನು ಈ ಕಾವ್ಯ ಪ್ರಕಾರದಲ್ಲಿ ಹೇಳಬಾರದು? ಇದರಿಂದ ನನ್ನ ಮಾತುಗಳು ಹೆಚ್ಚೆಚ್ಚು ಜನರನ್ನು ತಲಪಬಹುದು" ಎಂದುಕೊಳ್ಳುತ್ತಾ ಗಜಲ್ ಪ್ರಕಾರದಲ್ಲಿ ಕೈಯಾಡಿಸಿದವನು. ಆತನ ಒಂದು ಗಜಲನ್ನು ತರ್ಜುಮೆ ಮಾಡುವ ದುಸ್ಸಾಹಸವನ್ನು ಇಲ್ಲಿ ಮಾಡಿದ್ದೇನೆ.

ಎಂಥಾ ದೃಶ್ಯವು ಕಣ್ಣಿಗೀಗೀಗ ಗೋಚರಿಸುತ್ತಿದೆ,
ಹಾದಿನಲ್ಲಿ ಮೈಮರೆತ ತುಟಿಗಳು ಚೀರಾಡುತ್ತಿವೆ.

ಈ ಕೊಳದ ನೀರನ್ನು ಈಗಲಾದರೂ ಬದಲಿಸಿ,
ಕಮಲದ ಹೂವುಗಳಿಲ್ಲಿ ಬಾಡಿ ಹೋಗುತ್ತಿವೆ.

ಅವರು ಸಿಲುಬೆಗೆ ಹತ್ತಿರವಾದಂತೆ ಅವರ ಮಾತು,
ನಿಯಮ ಕಾನೂನುಗಳ ತಿಳಿ ಹೇಳುತ್ತಿದೆ.

ಸ್ಮಶಾನವೊಂದರೊಳಗೆ ದೊರಕಿರುವ ಮನೆಯಲ್ಲಿ,
ಕೋಣೆಯೊಂದಕ್ಕೆ ಕೋಣೆಯೊಂದು ಅಂಟಿಕೊಂಡಿದೆ.

ಮೀಸುಗಳಲ್ಲೀಗೀಗ ತಳಮಳ-ತಲ್ಲಣ,
ಹಡಗುಗಳು ಅತ್ತ ಸಾಗಲು ಹೆದರುತ್ತಿವೆ.

ಮೌಲ್ವಿಯ ಮಾತಿಗೆ ಜನರೆಲ್ಲಾ ಹೆದರಿರಲು,
ಮತ್ತದೇ ಮಂತ್ರದ ಪಠಣವಾಗುತ್ತಿದೆ.

ಹತ್ತಿರವಾದಂತಿದೆ ಹೊಸದೊಂದು ಸಂಸ್ಕೃತಿ,
ಮನುಷ್ಯರನ್ನೇ ಇಂದು ಬೇಯಿಸಿ ತಿನ್ನಲಾಗುತ್ತಿದೆ.

ಹಿಂದೂಸ್ತಾನಿ ಮೂಲ:
ದುಷ್ಯಂತ್ ಕುಮಾರ್



ಕನ್ನಡಕ್ಕೆ:
ಸಂವರ್ತ 'ಸಾಹಿಲ್'

ಅಪರೂಪದ ಫೋಟೋ



ಅಮಿತಾಬ್ ಬಚ್ಚನ್, ಜಯಬಾಧುರಿ, ಚಂಕಿ ಪಾಂ[...]

...ಂಬರೀಶ ರಿಯಲಿ ಜಂಟ್ಲುಮ್ಯಾನ್ ಕಂಣ್ರೋ

...ಬರೀಶ್‌ಗೆ ಅರವತ್ತು ವರ್ಷಗಳಾಗಿ - ಆ ...ವಾಗಿ ನಡೆದ ಕಾರ್ಯಕ್ರಮಗಳ ಬಗ್ಗೆ ಕೇಳಿದ ...ನ.

...ವುನಿಗಾಗ್ಲೆ ಅರವತ್ತೊರ್ಸಾಯ್ತೇನ್ಲ?" ಎಂದ.

... ಕಣಮಾವ, ಆಕಾರ ನೋಡಿದ್ರೆ ಯಪ್ಪತ್ತು ...ಕೇಳ್‌ಬವುದು" ಎಂದ ಉಗ್ರಿ.

...ಕಾಲ್ದಲ್ಲಿ ಎಷ್ಟು ಚನ್ನಾಗಿದ್ದುನ್ಲ ಅವುನು" ಎಂದಳು ...

...ಗಿರದ್ಕೆ ಅಲವೆ ನೀನು ಲವ್ವು ಮಾಡ್ತಿದ್ದುದ್ದು." ...ವುಳು ಅವುನ್ನ ಲವ್ವು ಮಾಡದ ಯಾವಾಗ ...' ಎಂದ ಸೀರ.

...ವಾಗ ಬುಟ್ಟಪ್ಪ? ಅಂತು ಯಾವಾಗ ನೋಡು ...ಶ್, ಅಂಬೀ ಅಂತ ಕನವರಸುತಿದ್ಲು, ಅಲವೇನೆ?"

...ದೇನೊ ನಿಜಬುಡು, ಅದ್ಯಾಕ್ ಸುಳ್ಳೇಳ್ಲಿ."

...ಬರೀಶ್ ಚಪಲ ಬುಟ್ಟಿದ್ಯಾವಾಗ ಅಂತ ಹೇಳಿ ...

...ಯಾಗಿ ಮಾತಾಡ್ಕ. ಚಪಲಗಿಪಲ ಅನ್ನಬ್ಯಾಡ. ... ಸಿನುಮಾ ಆಗುಟ್ತಾಗಿ ಅಂತ, ಒಂಟಿಸಲಗ, ...ರಳ್ಳಿ, ಪಾಂಡೋರು, ರಂಗನಾಯಕಿ ...ರಲ್ಲಿ ಮಾಡಿರದ ನೋಡಿ ನಾನೇ ಏನು, ... ಜನಗಳ್ಯಲ್ಲ ಮೆಚಗಂಡಿದ್ರು. ಅಂಗೆ ನಾನೂ ...ಅಷ್ಟಕ್ಕೇ ಗಂಡನ ಬಿಟ್ಟು ಅವುನ ಜೊತೆಲೆ ... ಅನ್ನಂಗೆ ಮಾತಾಡ್ತಿರಲ್ಲ ನೀವೂ."

...ಮಾ ಆಗುಟ್ಟ್ರು ಮೆಚ್ಚಿ ಮಾತಾಡದು ...ಮಾನ್ಯ ಕಂಡ್ಕೆ. ಆಗ ನಮ್ಮ ಕಾಲ್ದಲ್ಲಿ ..., ಪಂಢ್ರಿಬಾಯಿ, ಸರೋಜಾದೇವಿ ಸುದ್ದಿಯ ... ಮಾತಾಡತಿದ್ರೊ. ಅಗೊ ಅಂಗೇ ಅವ್ಯಲ್ಲ ... ಎಂದ ಕಾಳಮಾವ.

...ಸಾಮಾನ್ಯವಾಗಿ ರಾಜಕೀಯಕ್ಕೆ ಬಂದ ಸಿನಿಮ ..., ಹೆಸುರು ಕೆಡಿಸಿಗಂಡು ಹಾಳಾಯ್ತರೆ. ಆದ್ರೆ ...ಶ್ ಮಾತ್ರ ಅಂಗೇ ಅವುನೆ ಕಣಮಾವ."

...ಳ್ಳೆ ಮನುಸಾಗೊವತ್ತಿಗೆ ಅಂಗವುನೆ ಕಂಡ್ಕ."

...ಸಾರಿ ದಾನಧರ್ಮ ಮಾಡಿದ್ದನಂತೆ ಕಣ ...

... ಸುಮ್ಮಸುಮ್ಮನೆ ಸುದ್ದಿ ಹಬ್ಬುಸ್ತವೆ ಕಂಡ್ಕೆ. ...ನ್ ಟೇಮಲ್ಲಿ ನಾನೆ ನೋಡಿಲವೆ, ಯಲ್ಲಾ ...ಯೋರು ಬಾಡುಬಳ್ಳೆ ಶರಾಪು ಕೊಟ್ರೆ ಇವುನ ... ಏನೂ ಬರಲಿಲ್ಲ, ಸುಮ್ಮನೆ ಓಟಾಕಿದೊ. ...ಈ ಸತಿ ನಾನು ಚಲುವರಾಯಸ್ವಾಮಿಗೆ ... ಅತ್ತಗೆ" ಎಂದ ಸೀರ.

...ನ್ನಂತ ಓಟು ಮಾರಿಕಳೊ ಅಂತೋರಿಂದ್ಲೆ ...ಅಂಬರೀಶ ಸೋತಿದ್ದು."

...ದೆದ್ದೊಗಿ ಏನು ಮಾಡತಿದ್ದನ್ಲ ಅವುನು?"

...ನು ಮಾಡದು ಬ್ಯಾಡ. ಮಂಡ್ಯದ ಜನ ...ವುರೆ ಅನ್ನದ ತೋರಿಸ್ತಿದ್ದ ಅವನ ಹುಟ್ಟಿದಬ್ಬಕ್ಕೆ ...ದೇಶದಿಂದ ಜನಬತ್ತದೆ ಅಂದ್ರೆ ಸದರದ ...ನೂ ಸೀರ ಮಾವ."

...ತಮುಳನಾಡು, ಆಂಧ್ರ, ಬಂಬಾಯಿಂದ್ಲೂ -ಜನ ಬಂದಿದ್ರು ಕಣ ಮಾವ" ಎಂದಳು ಜುಮ್ಮಿ.

"ಜನಲ್ಲ ಕಣೆ, ಅವುನ ಫ್ರೆಂಡ್ಸ್ ಬಂದಿದ್ರು. ಬಂಬಾಯಿಂದ ಜಾಕಿಶರಾಫು, ಆಂಧ್ರದಿಂದ ಎನ್.ಟಿ.ಆರ್ ಮಗ, ತಮುಳುನಾಡಿನಿಂದ ರಜನಿಕಾಂತ, ಕಾಶ್ಮೀರದಿಂದ್ಲೂ ಪಾರಿನ್ನಿಂದ್ಲೂ ಬಂದಿದ್ರು" ಎಂದ ಉಗ್ರಿ.

"ಅವುನಿಂದ ನಮ್ಮ ಮಂಡ್ಯ ದೇಸಕೆ ಒಂದಿದು ಬತ್ತು ಬುಡು" ಎಂದ ಕಾಳಮಾವ.

"ಅಷ್ಟೇ ಅಲ್ಲ ಕಣಮಾವ, ದುಬಾಯಿ, ಕುವೈತು, ಮುಸಕಟ್ಟು ಅಲ್ಯಲ್ಲ ಹೋಟ್ಲು ಮಡಗಿರೊರ್ಯಲ್ಲ ಇವುನ ಪ್ರಂಡಂತೆ. ಅದ್ಯಾವಾಗ ಪ್ರೆಂಡ್ ಮಾಡಿಕಂಡನೋ ಏನೊ. ಅಂತೂ ಅವುರ್ಯಲ್ಲ ಬಂದಿದ್ರಂತೆ."

"ನೋಡ್ಕ, ಜೂಜಾಡೊ ಜನಕೆ ಅಂತೋರ್ಯಲ್ಲ ಫ್ರೆಂಡಾಯ್ತರೆ. ಅಂಬರೀಸು ಒಸಿ ಜೂಜಾಡ್ತನೇನ್ಲ, ಪ್ರಪಂಚದ ಸುಬೇರ್ಯಲ್ಲ ಜೂಜಾಡೊ ಜಾಗಕೆ ಬಂದಾಗ ಪ್ರೆಂಡಾಗೇ ಆಯ್ತರೆ" ಎಂದ ಸೀರ ತಾನು ಜೂಜಾಡಿ ಕೈಬಿಟ್ಟವನಂತೆ ಗತ್ತಿನಿಂದ ಕೂತ.

"ಸೀರ ಚಿಗಪ್ಪನ ಮಾತಿಗೆ ಎಗ್‌ಜಾಂಪಲ್ ಕೊಡ್ತಿನಿ" ಎಂದುಕೊಂಡು ವಾಟಿಸ್ಲೆ ಬಂದ.

"ಅದ್ಯಾವುದು ಕೊಡೊ ನೋಡನ."

"ಚನ್ನಾಪುರದ ಪಾಪಣ್ಣ, ಮಂಗರಳ್ಳಿ ರಾಮು, ಚಟ್ಟೆನಳ್ಳಿ ಮರಿಗೌಡ, ತುರುನಳ್ಳಿ ಕೆಂಪೇಗೌಡರ್ಯಲ್ಲ ನಮ್ಮ ಸೀರಚಿಗಪ್ಪನಿಗೆ ಫ್ರೆಂಡ್ಸ್. ಅವುರ್ಯಲ್ಲ ಯಂಗೆ ಫ್ರೆಂಡ್ಸಾದ್ರಪ್ಪ ಅಂದ್ರೆ ಒನ್ಸಪಾನೆ ಟೈಮ್ ಶರಾಪಿನಂಗಡಿಲಿ ಇವುರೆಲ್ಲ ಸೇರತಿದ್ರು. ಅದ್ರಿಂದ ಫ್ರೆಂಡಾದ್ರು. ಅದೇ ಮಾತನ ಅಂಬರೀಶ್‌ಗೂ ಹೇಳಿದಲವೆ ಚಿಗಪ್ಪ ನೀನು. ಅಂದ್ರೆ ನಿನ್ನ ಲೋಕಲ್ ಎಗ್‌ಜಾಂಪಲ್ಲ ಇಂಟರ್‌ನ್ಯಾಷನಲ್ ಮಾಡಿದೆ."

"ಅಂಗೆ ತಿಳಕಳ್ಳ."

"ತಿಳಕಳದಲ್ಲ ಇಟೀಸ್ ಫ್ಯಾಕ್ಟ್. ಯಾವತ್ಲೂ ನಮ್ಮ ಅಭಿರುಚಿಗೆ ತಕ್ಕಂತೆ ಫ್ರೆಂಡ್ಲೂ ಸಿಗತರೆ. ಅದೇತರ ಅಂಬರೀಶ್‌ಗೆ ಕಾರ್ಡ್ಸ್ ಫ್ರೆಂಡ್ಸವುರೆ, ಕುದುರೆ ಜೂಜಿನ ಫ್ರೆಂಡ್ಸವುರೆ, ಗಾಲಫ್ರೆಂಡ್ಸವುರೆ, ರಾಜಕಾರಣ ಸಿನಿಮಾ ಇಲ್ಯಲ್ಲ ಅವುರೆ. ಅದೇರೀತಿ, ನಮ್ಮ ಜುಮ್ಮಕ್ಕ ಉಗ್ರಿ, ಕಾಳದೊಡಪ್ಪನಂಥೊರೂ ಅವುರೆ. ಆದ್ರೆ ಸೀರಚಿಗಪ್ಪನಂಥೊರು ಕಡಮೆ."

"ಅದ್ಯಾಕ್ಲ ಕಡಮೆ?"

"ಯಾಕೆ ಅಂದ್ರೆ ಅಂಬರೀಶನಿಗೆ ಎಕ್ಸರೆ ಕಣ್ಣದೆ. ಅವುನು ದೃಷ್ಟಿಯಿಟ್ಟು ನೋಡಿದೇಟಿಗೆ, ಇವುನು ಒಳ್ಳೆ ಮನುಸ್ನೊ ಅಥವ ಕಳ್ಳಮುಂಡೆ ಮಗನೋ ಅನ್ನದ ಪತ್ತೆ ಹಚ್ಚಿ, ಅಂಥೊರ್ನ 'ಏನೊ ಲವುಡೋಕೆ ಬಾಲ್' ಅಂದುಬುಡ್ತಾನೆ. ನಮ್ಮ ಶಿವರಾಮೇಗೌಡುನ್ನ ಕರಿಯದೆ ಅಂಗವುನು. ಆದ್ರಿಂದ ಸೀರ ಚಿಗಪ್ಪ ನಂಥೋರು ಹೋದ್ರೆ ಬೈಸಿಗಂಡು ಬತ್ತಾರೆ. ಆದ್ರಿಂದ ಅವನತ್ರಕೋಗದ್ರಲ್ಲಿ ಇಂಥೊರು ಕಡಮೆ."

"ನಾವ್ಯಾಕ್ಲ ಅವುನತ್ರಕೋಗಬೇಕು. ಅವುನಿಂದ ನವುಗೇನಾಗಬೇಕು. ಇಲ್ಲಿ ರಾಜಕಾರಣಿಗಳ ಮಾತಾಡ್ಸಿಗಂಡು ಇದ್ರೆ ಸಾಕಾಗ್ಯದೆ. ಎಲ್ಲಿ ನಮಿಗೆ ಬ್ಯಲೆ ಇರದಿಲವೊ ಅಲ್ಲಿಗೆ ನಾವು ಹೋಗದಿಲ್ಲ ತಿಳಕೊ."

"ಒಳ್ಳೆ ತೀರ್ಮಾನ ಚಿಗಪ್ಪ. ಡೆಮಾಕ್ರಸಿ ಸಕ್ಸಸ್ ಆಗಬೇಕಾದ್ರೆ ನಿನ್ನಂಥ ಪ್ರಜೆಗಳ ಸಂಖ್ಯೆ ಜಾಸ್ತಿಯಾಗ ಬೇಕು. ಆಕ್ಟುವಲಿ ಮದ್ಲು ಇದ್ದಿದ್ದೇ ಅಂಗೆ. ಊರ ಮುಂದಕೊಬ್ಬ ರಾಜಕಾರಣಿ ಬಂದ ಅಂದ್ರೆ, ಹೊಲ ಉಳತಿದ್ದೊರು, ಗೊಬ್ಬರ ಹೊಡಿತಿದ್ದೊರು, ದನ ಮೇಸತಿದ್ದೊರು, ಯಾರೂ ತಮ್ಮ ಕೆಲಸ ಬಿಟ್ಟು ಬತ್ತಿರಲಿಲ್ಲ. ಈಗ ಯಲ್ಲಾ ದನಕರ ಮಾರಿ ರಾಜಕಾರಣಿ ಹಿಂದೆನೇ ಸುತ್ತುತ್ತಾ ಅವೆ. ಅವುಕೆ ಸ್ವಾಭಿಮಾನ ಅಂದ್ರೇನು ಅಂತ ಹೇಳಿಕೊಡಬೇಕಾಗ್ಯದೆ."

"ಮದ್ಲು ನೀನು ಸರಿ ಇರ್ಲಾ."

"ನಾನು ಸರಿಯಿರದ್ಕೆ ಕಣಕ್ಕ ಹಿಂಗಿರದು. ನಿನಿಗೆ ಆಶ್ಚರ್ಯ ಆಗಬವುದು. ನಾನು ಇಷ್ಟು ದಿನಾದ್ರು ಅಂಬರೀಸತ್ರಕೆ ಹೋಗಿಲ್ಲ, ಅವುನ ಸಿನಿಮಾ ನೋಡಿದೆ, ಭಾಷಣ ಕೇಳಿದೆ, ಅವುರಿವುರತ್ರ ಅವುನ ಕ್ಯಾರಕ್ಟರೇನು ಅಂತ ಕೇಳಿ ಸುಮ್ನಾದೆ ಅಷ್ಟೆ."

"ಅಂಬರೀಶ್ ಕಂಡು ನಿನಿಗೇನನ್ಸುಸ್ತೊ?" ಎಂದ ಉಗ್ರಿ.

"ರಿಯಲಿ ಅವುನು ಜಂಟ್ಲುಮ್ಯಾನ್. ಮಜ ಮಾಡಕ್ಕೆ ಅಂತ್ಲೆ ಹುಟ್ಟಿರೋನು. ಈ ಜೀವನನ ಕಂಪ್ಲೀಟ್ ಅನುಭವಿಸಿದೋನು. ಅವುನು ಒಳ್ಳೆ ಮನ್ಸ ಆಗೊವತ್ತಿಗೆ ಅರವತ್ತೊರಸನ ಅದ್ದೂರಿಯಾಗಿ ಮಾಡಿದ್ರು."

"ಅವುನನ್ನ ಟೀಕೆ ಮಾಡೋ ಅಂತದ್ದೇನಾರ ಇದ್ದತೇನೊ?"

"ಬೇಕಾದಷ್ಟಿದೆ ಕಣೊ ಉಗ್ರಿ. ಆದ್ರೆ ಈಗ ಅವ್ಕ ಕೊಚಗಂಡೋಯ್ತದೆ. ಉದಾಹರಣೆ ಕೊಡಬೇಕಾ...

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಅವುನನ್ನ ನಚ್ಚಿಗಂಡು ಯಾವ ಕಾರ್ಯಕ್ರಮನೂ ಮಾಡಬಾರ್ದು. ಮಾಡಿದ್ರು ಅದ್ಕೆ ಟೈಮಾಕಬಾರ್ದು. ಅಮ್ಯಾಲೆ ಅವ್ರುನ ಜೊತೆ ಇಸ್ಪೀಟಿಗೆ ಕುಂತು ಅವುನನ್ನೇನಾದ್ರು ಸೋಲಿಸಿದ್ರೆ, ತಿರುಗ ಅವುನು ಗೆಲ್ಲೊ ಗಂಟ ಬುಡದಿಲ್ಲ. ಅವುನ ಲೈಫ್‌ಲಿ ತಗಂಡಿರೊ ರಾಂಗ್ ಡಿಶಿಷನ್ ಯಾವ್ದಪ್ಪ ಅಂದ್ರೆ, ಎಂ.ಪಿ ಜಾಗಬುಟ್ಟು ಎಮ್ಮೆಲ್ಲೆ ಜಾಗಕ್ಕೆ ಸ್ಪರ್ಧೆ ಮಾಡಿದ್ದು."

"ಯಾಕೆ ಮಾಡಬಾರದಿತ್ತೆ?"

"ಎಂ.ಪಿ. ಯಾದ್ರೆ ಜನರಿಗೆ ಕಾಣದಂಗೆ ಜೂಜಾಡಿಗಂಡು ದೇಶತಿರಿಕಂಡು ಇರಬವುದು ಕಣೊ ಉಗ್ರಿ. ಅದೇ ಎಮ್ಮೆಲ್ಲೆಯಾದ್ರೆ ಇಲ್ಲೇ ಬದ್ದಿರಬೇಕಾಯ್ತದೆ. ಜನಗಳತ್ರ ಅರ್ಜಿ ತಗಬೇಕಾಯ್ತದೆ. ಪ್ರಾಬ್ಲಂ ಸಾಲೂ ಮಾಡಕ್ಕೆ ಫೋನ್ ಮಾಡಬೇಕಾಯ್ತದೆ. ಅದಿವುನ ಕೈಲಾಯ್ತದ? ಆಗದಿಲ್ಲ ಅಂತ ಗೊತ್ತಾಗಿ ಶ್ರೀರಂಗಪಟ್ಟಣದ ಜನ ಸೋಲಿಸಿ ಮನಿಗೆ ಕಳಿಸಿದ್ರು."

"ಅದಂಗಲ್ಲ ಕಣೊ, ಆ ಚುನಾವಣೆಲಿ ಜಾತ್ಯತೀತ ಮತ, ಜಾತಿಮತ ಅಂತ ನಡಿತು. ಕಮ್ಯುನಿಟಿ ಲೀಡ್ರು ಅಂತ ಕುಮಾರಸ್ವಾಮಿಯ ಆರಿಸಿಕಂಡ್ರು. ಅದೇ ಅಂಬರೀಶನಿಗೆ ಬಿದ್ದ ಹೊಡೆತ. ಎಂ.ಪಿ. ಯಲಕ್ಷನಲ್ಲೂ ಅಂಗೆ ಆಯ್ತು ಗೊತ್ತೆ."


"ನಿನ್ನ ಊಹೆ ಅರ್ಧ ಸತ್ಯ. ಆದ್ರೆ ಅಂಬರೀಶ್ ಕೇಂದ್ರದ ಮಂತ್ರಿಯಾದಾಗ ದೇಶದ ಮಂತ್ರಿಯಾಗಿ ನಡಕೊಬೇಕು. ಕಾವೇರಿ ಇಶ್ಯೂ ದ್ಯಾವೇಗೌಡನ ಇಶ್ಯೂ ಕಣೊ. ಸರಿಯಪ್ಪ ಮಂಡ್ಯ ಜಿಲ್ಲೆ ರೈತರಿಗಾಗಿ ಮಂತ್ರಿಗಿರಿನೆ ಬುಟ್ನಲ್ಲಾ ಜನ ಗೆಲ್ಲಿಸಿದ್ರೆ? ಅಷ್ಟಕ್ಕೂ ಅವುನಿಗೇ ಇಲ್ಲದ ಬೇಜಾರು ನಮಿಗ್ಯಾಕೆ ಬುಡು. ಅವುನು ಚುನಾವಣೆನ ರೇಸ್ ತರ ತಿಳಕಂಡವುನೆ. ಅವುನ ಜೀವನಾಸಕ್ತಿಯಲ್ಲ ಕೈಲಿರೊ ಯಲೆ ತರ. ಯಾವುದ ಬಿಸಾಕಿ ಯಾವುದ ತಗತನೊ ಆ ದೇವರಿಗೆ ಗೊತ್ತು, ಸರಿ ನಾನಿನ್ನ ಬತ್ತಿನಿ."



...ದ್ದ ಕೂದಲ ಸುಂದರಿ ▸▸▸

ಈಗ ನಮ್ಮ ಸಮಕಾಲೀನರಾಗಿ ಬದುಕಿರುವ ಸಾಹಿತಿಗಳಲ್ಲಿ ಅತ್ಯಂತ ಕ್ರಿಯಾಶೀಲನಾದವನು ಗೇಬ್ರಿಯಲ್ ...ಯಾ ಮಾರ್ಕ್ವೆಜ್. ಈತನ ಪುಸ್ತಕವೊಂದನ್ನು ಕೊಂಡು ತಂದಿಟ್ಟುಕೊಂಡು ಓದಲಾಗಿರಲೇ ಇಲ್ಲ. 'ಪ್ರೇಮ ... ಇತರ ಭೂತಗಳನ್ನು ಕುರಿತು' ಎಂಬ ಹೆಸರಿನ ಈ ಕತೆಯು ಹುಟ್ಟು ಮಾರ್ಕ್ವೆಜ್‌ಗೆ ಹೊಳೆದದ್ದು 1949 ರಲ್ಲಿ. ...ಆಗ ಹದಿನೈದು ವರ್ಷದ ವರದಿಗಾರ; ಅವನನ್ನು ಒಂದು ದಿನ ಅವನ ಸಂಪಾದಕ ಕರೆದು, 'ಇಲ್ಲಿಯ ಹಳೆಯ ...ವೊಂದನ್ನು ಬೀಳಿಸುತ್ತಿದ್ದಾರೆ. ಅಲ್ಲಿಯ ಸ್ಮಶಾನವನ್ನು ಕೂಡ ನೆಲಸಮ ಮಾಡಿ, ಅಲ್ಲಿದ್ದ ಕಲ್ಲುಗಳು ಮತ್ತು ...ಪೆಟ್ಟಿಗೆಗಳಲ್ಲಿನ ಹೆಣಗಳನ್ನು ಕೂಡ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ. ನೀನು ಅಲ್ಲಿಗೆ ಹೋಗಿ ನೋಡು. ಏನಾದರೂ ...ತೂಹಲಕರವಾದದ್ದು ಇದ್ದರೆ ವರದಿ ಮಾಡು' ಎಂದು ಹೇಳಿದ. ತರುಣ ಮಾರ್ಕ್ವೆಜ್ ...ಸದಿಂದ ಚರ್ಚನ್ನು ಬೀಳಿಸುತ್ತಿದ್ದಲ್ಲಿಗೆ ಹೋದ. ಅದು ಇನ್ನೂರು ವರ್ಷ ಹಳೆಯದು. ...ಮ ಸ್ಮಶಾನದಲ್ಲಿ ಹೂತಿದ್ದ ಶವಗಳು ಕೂಡಾ ಇನ್ನೂರು ವರ್ಷಕ್ಕಿಂತ ಹಳೆಯವಾಗಿದ್ದು ...ಧಿಯನ್ನು ಅಗೆದೊಡನೆ ಶವದ ಪೆಟ್ಟಿಗೆಗಳು ಮಣ್ಣಿನೊಂದಿಗೆ ಬೆರೆತುಹೋಗುತ್ತಿದ್ದವು. ...ಯುವವರು ಕಷ್ಟಪಟ್ಟು ಎಲುಬುಗಳನ್ನು ಮಣ್ಣಿನಿಂದ ಬೇರ್ಪಡಿಸಿ ಗುಡ್ಡೆ ಹಾಕುತ್ತಿದ್ದರು. ...ಬು ಕೂಡ ಜೀರ್ಣವಾಗಿದ್ದವು; ಕೂದಲು ಮಣ್ಣಿನೊಂದಿಗೆ ಬೆರೆತಿದ್ದವು. ಅದು ನೋಡಲು ... ಕುತೂಹಲಕರವಾಗಿತ್ತು, ಶವದ ಪೆಟ್ಟಿಗೆಗಳು ಸಾವಿರಾರು ವರ್ಷದಿಂದ ಮನುಷ್ಯನ ...ಥ ಆಸೆ, ಆತಂಕಗಳನ್ನು ಹೇಳುತ್ತವೆ. ಬದುಕಿದ್ದಾಗ ಅನೇಕರು ಇಷ್ಟಪಡುವ ವಸ್ತುಗಳನ್ನು ...ಯಲ್ಲಿಟ್ಟು ಹೂತಿರುತ್ತಾರೆ. ಆದರೆ ಮಾರ್ಕ್ವೆಜ್‌ಗೆ ಕುತೂಹಲಕರವಾಗಿ ಕಂಡದ್ದು ಒಬ್ಬ ...ವಸದ ಹುಡುಗಿಯ ಶವ. ಆಕೆಯ ದೇಹವೆಲ್ಲಾ ಮಣ್ಣಿನಲ್ಲಿ ಕರಗಿಹೋಗಿದ್ದರೂ ಆಕೆಯ ...ಲು ಮಾತ್ರ ಇಪ್ಪತ್ತೆರಡು ಮೀಟರ್ ಮತ್ತು ಹನ್ನೊಂದು ಸೆಂಟಿಮೀಟರ್ ಉದ್ದ ಇತ್ತು. ಅದನ್ನು ನೋಡಿ ...ದ ಮಾರ್ಕ್ವೆಜ್‌ಗೆ ಅಲ್ಲಿದ್ದವರು ವಿವರಿಸಿದ ಪ್ರಕಾರ, ವ್ಯಕ್ತಿ ಸತ್ತ ಮೇಲೂ ತಿಂಗಳಿಗೆ ಇಂತಿಷ್ಟು ಸೆಂಟಿಮೀಟರ್‌ನಂತೆ ...ಲು ಬೆಳೆಯುತ್ತವೆ. ಇನ್ನೂರು ವರ್ಷ ಬೆಳೆದದ್ದನ್ನು ಗಮನಿಸಿದರೆ ಇದು ಸರಿಯಾದ ವಿವರಣೆ ಅನ್ನಿಸುತ್ತದೆ. ...ಆದರೆ ಮಾರ್ಕ್ವೆಜ್ ಈ ಬಗ್ಗೆ ತನ್ನ ಸಂಪಾದಕನಿಗೆ ವರದಿ ಒಪ್ಪಿಸಿ ಪತ್ರಿಕೆಯಲ್ಲಿ ಬರೆದ ಮೇಲೆ ಆ ಹುಡುಗಿಯನ್ನು ... ಸಂಶೋಧನೆ ನಡೆಸಿದ. ಆಕೆ ಒಬ್ಬಳು ಸುಂದರ ಹುಡುಗಿ. ಅವಳಿಗೆ ಉದ್ದ ಕೂದಲು ಇದ್ದವು. ಒಂದು ದಿನ ...ನ್ನು ಒಂದು ಹುಚ್ಚು ನಾಯಿ ಕಚ್ಚಿತು. ಇದರಿಂದ ಐಲುಗೊಂಡ ಹುಡುಗಿಯನ್ನು ಅವಳ ಹೆತ್ತವರು ಒಂದು ...ಗೆ ಸೇರಿಸಿ, ಅಲ್ಲಿ ಒಂದು ಕೋಣೆಯಲ್ಲಿ ಕೂಡಿಹಾಕಿದರು. ಅವಳಿಗೆ ದೆವ್ವ ಹಿಡಿದಿದೆಯೆಂದು ಅದನ್ನು ... ಒಬ್ಬ ಪಾದ್ರಿಯನ್ನು ಗೊತ್ತು ಮಾಡಿದರು. ಆದರೆ ಆ ಪಾದ್ರಿ ಆ ಹುಡುಗಿಯ ಸೌಂದರ್ಯವನ್ನು ಮೆಚ್ಚಿ ಆಕೆಯನ್ನು ಪ್ರೀತಿಸತೊಡಗಿದ. ಅದು ಎಲ್ಲರಿಗೆ ಗೊತ್ತಾಗಿ ಪಾದ್ರಿಯನ್ನು ಅಲ್ಲಿಂದ ದೂರಕ್ಕೆ ಅಟ್ಟಿದರು. ಆದರೂ ಪಾದ್ರಿ ಆಕೆಯನ್ನು ಮರೆಯಲಿಲ್ಲ. ನಟ್ಟನಡು ರಾತ್ರಿಗಳಲ್ಲಿ ಚರ್ಚಿನ ಛಾವಣಿಯ ಮೂಲಕ ಬಂದು ಆ ಹುಡುಗಿಯನ್ನು ಪ್ರೇಮಿಸುತ್ತಿದ್ದ. ಈ ಪ್ರೇಮ ಬಹಳ ಕಾಲ ನಡೆಯಿತು. ಆದರೆ ಈ ಕಳ್ಳ ಪ್ರೇಮ ಕೂಡ ಬಯಲಾಗಿ ಆ ಹುಡುಗಿ ಮತ್ತು ಆ ಪಾದ್ರಿಯನ್ನು ನಾಶ ಮಾಡಲಾಯಿತು.

ಒಂದು ಉದ್ದನೆಯ ಕೂದಲಿನಿಂದ ಹೊರಟ ಮಾರ್ಕ್ವೆಜ್‌ನ ಕಲ್ಪನೆ ಹೇಗೆ ಬೆಳೆಯುತ್ತಾ ಹೋಗುತ್ತದೆ ಎನ್ನುವುದು ಅಚ್ಚರಿ ಹುಟ್ಟಿಸುತ್ತದೆ. ಅದೊಂದು ವಿಚಿತ್ರ ಕತೆ. ಒಂದು ಮಟ್ಟದಲ್ಲಿ ಹುಡುಗಿಯೊಬ್ಬಳ ವಿವಿಧ ಸ್ತರದ ಭಾವನೆಗಳನ್ನು ಮಂಡಿಸಿದರೆ ಇನ್ನೊಂದು ಮಟ್ಟದಲ್ಲಿ ಮಾರ್ಕ್ವೆಜ್‌ನ ದೇಶ ಕೊಲಂಬಿಯಾ ಸ್ಪೇನ್ ದೇಶಕ್ಕೆ ಅಧೀನವಾಗಿ ಬದುಕಿದ್ದನ್ನು ಪರೋಕ್ಷವಾಗಿ ಹೇಳುತ್ತದೆ. ಮುಖ್ಯವಾದದ್ದೇನೆಂದರೆ ಕ್ರಿಯಾಶೀಲ ಮನಸ್ಸು ಕತೆಯನ್ನು ವಾದಗಳ, ಅರ್ಥಗಳ ಭಾರದಿಂದ ಕುಸಿಯಲು ಬಿಡುವುದಿಲ್ಲ.



* * * * *

ಇದನ್ನು ಬರೆಯುತ್ತಿದ್ದಾಗಲೇ ಡಯಾನಾ ಮತ್ತು ಪಾಕಿಸ್ತಾನಿ ಡಾಕ್ಟರ್‌ನ ಪ್ರೇಮ ಪ್ರಕರಣ ನೆನಪಾಗುತ್ತಿದೆ. ಇಂಗ್ಲೆಂಡಿನ ಅಗ್ಗದ ವೃತ್ತಪತ್ರಿಕೆಗಳಿಗೆ ಗ್ರಾಸವಾಗಿದ್ದ ಈ ಡಯಾನಾ ಅನೇಕ ಪ್ರೇಮ ಪ್ರಕರಣಗಳಲ್ಲಿ ಮುಳುಗಿದ್ದಳು. ಆಗಾಗ ಸಮಾಜಸೇವೆ ಮಾಡುವ ಪ್ರದರ್ಶನ ನೀಡುತ್ತಿದ್ದಳು. ಎಲ್ಲರಿಂದ ಸುಂದರಿ ಎಂದು ಹೊಗಳಿಸಿಕೊಳ್ಳುತ್ತಿದ್ದಳು. ಸೌಂದರ್ಯ ಒಂದು ರೀತಿಯಲ್ಲಿ ಚರ್ಮದಷ್ಟು ಮಾತ್ರ ಆಳ. ಇನ್ನೊಂದು ರೀತಿಯಲ್ಲಿ ಇಡೀ ವ್ಯಕ್ತಿತ್ವಕ್ಕೆ ಸಂಬಂಧಿಸಿದ್ದು. ಈ ಚರ್ಮದ ಸೌಂದರ್ಯದ ಡಯಾನಾಗೆ ಕಾಮ, ಪ್ರೇಮದ ಪ್ರಥಮ ಪಾಠವೂ ಗೊತ್ತಿರುವಂತಿಲ್ಲ. ಅದಕ್ಕಾಗಿ ಹುಚ್ಚನ್ನು ಅರಸಿಕೊಂಡು ಹೋದವರೆಲ್ಲ ದುರಂತಮಯವಾಗಿ ಕೊನೆಗೊಂಡಿದ್ದಾರೆ. ಈಗ ಈ ಡಯಾನಾ ಸುದ್ದಿ ಮಾಡುತ್ತಿರುವುದು ನಿಜಕ್ಕೂ ಹಾಸ್ಯಾಸ್ಪದ ಮಟ್ಟ ತಲುಪಿದೆ.

ಮನುಷ್ಯರಿಗೆ ಕಾಮ ಎಷ್ಟು ಮುಖ್ಯ, ಕಾಮದೊಂದಿಗೆ ಸಂಯಮ ಎಷ್ಟು ಬೇಕು, ನಮ್ಮ ಪರಿಸರ ಮತ್ತು ವ್ಯವಸ್ಥೆ ನಮಗೆ ಎಷ್ಟು ಮುಖ್ಯ ಎಷ್ಟು ಅಮುಖ್ಯ? ಇಂಥಲ್ಲಿ ಲಾರೆನ್ಸ್ ಪರವಾಗಿ ವಾದಿಸಿದವರೂ ಎಲಿಯಟ್ ಪರವಾಗಿ ವಾದಿಸಿದವರೂ... ಸೋಲನ್ನೊಪ್ಪಬೇಕಾಗುತ್ತದೆ. ಏಟ್ಸ್‌ನ ನೋವು ನಿರಾಶೆಯೆಲ್ಲ ಅವನ ಕವನವಾದದ್ದು ನೆನಪಾಗುತ್ತಿದೆಯೆ?





ಎಚ್.ಎಲ್. ಕೇಶವಮೂರ್ತಿ

ಅಣಕ

ಸಾಂತ್ವನ ಮನೆ!

ಒಂದು ಊರು. ಅಲ್ಲಿ ಒಬ್ಬ ರೈತ. ಕಡುಬಡವ. ಬಡವನಿಗೆ ಮಕ್ಕಳು ಜಾಸ್ತಿ ಅಂತೆ. ಅವನಿಗೆ ಸಮೃದ್ಧವಾಗಿಯೇ ಇದ್ದುವು. ಏಳುಮಕ್ಕಳ ತಂದೆ ಆತ. ಇದು ಸಾಲದು ಎಂಬಂತೆ ಸದಾ ವಟಗುಟ್ಟುವ ಹೆಂಡತಿ; ಗೊಣಗಾಡುವ ತಾಯಿ. ಇವರೆಲ್ಲ ಇರಲು ಒಂದು ಅಂಕಣದ ಮನೆ. ಅದೇ ಅಡುಗೆ ಮನೆ, ಊಟದ ಮನೆ, ಮಲಗುವ ಕೋಣೆ ಎಲ್ಲ. ಬಲೇ ಇಕ್ಕಟ್ಟಾಗಿತ್ತು, ಸಲೀಸಾಗಿ ಕೈಕಾಲು ಆಡಿಸಲೂ ಸಾಧ್ಯ ಇಲ್ಲದಂತಾಗಿತ್ತು.

ಅದೇ ಊರಿನಲ್ಲಿ ಒಬ್ಬ ಸನ್ಯಾಸಿ. ಅವನ ಆಶ್ರಮ 'ಸಾಂತ್ವನ ಮನೆ'! ಕಷ್ಟದಲ್ಲಿರುವವರಿಗೆ ಅಲ್ಲಿ ಸಾಂತ್ವನ ದೆ ಸಿಯುತ್ತೆ ಎನ್ನುವ ನಂಬಿಕೆ.

ರೈತ 'ಸಾಂತ್ವನ ಮನೆ'ಗೆ ಹೋದ. ಸನ್ಯಾಸಿಯ ಬಳಿ ಕಷ್ಟ ತೋಡಿಕೊಂಡ. ಸನ್ಯಾಸಿ ರೈತನ ಮಾತುಗಳನ್ನು ಸಮಾಧಾನದಿಂದ ಕೇಳಿದ. ಅವನ ತೊಂದರೆಯ ಅರಿವಾಗಿರಬೇಕು.

'ನೀನು ಆಡು ಸಾಕಿದ್ದೀಯಾ?' ಕೇಳಿದ ಸನ್ಯಾಸಿ.

'ಸಾಕಿದ್ದೀನಿ ಸ್ವಾಮಿಗಳೆ' ಎಂದ ರೈತ.

'ಅದನ್ನು ಎಲ್ಲಿ ಕಟ್ಟುತ್ತಿ?'

ಮನೆಯ ಮುಂಭಾಗ. ಸೊಪ್ಪನ್ನು ನೇತು ಹಾಕುತ್ತಿದ್ದ. ಆಡು ಎಟಕುವಂತೆ ಆಡು ಕಟ್ಟುತ್ತಿದ್ದ. ಅದನ್ನೇ ತಿಳಿಸಿದ.

'ಅದನ್ನು ಮನೆಯ ಒಳಗೆ ಕಟ್ಟು' ಸನ್ಯಾಸಿ ಹೇಳಿದ.

'ಆದರೆ ಸ್ವಾಮಿಗಳೆ ನಮಗೇ ಇರಲು ಜಾಗ ಸಾಲದು' ಎಂದು ತಲೆ ಕೆರೆದುಕೊಂಡ ರೈತ.

'ನಾನು ಹೇಳಿದಂತೆ ಮಾಡು. ಮುಂದಿನ ವಾರ ಬಾ' ಎಂದು ಆಜ್ಞಾಪಿಸಿದ ಸನ್ಯಾಸಿ.

ಯಾರಿಗೆ ಗೊತ್ತು? ಸನ್ಯಾಸಿಯ ಮಹಿಮೆ. ಇಕ್ಕಟ್ಟಾದ ಮನೆ ವಿಶಾಲ ಆದರೂ ಆಗಬಹುದು ಎಂದು ಯೋಚಿಸಿದ ರೈತ. ಹಾಗೆಯೇ ಮಾಡಿದ. ಆದರೆ ಜಾಗ ಕಿರಿದಾಯಿತು. ಸಂಕಟ ಹೆಚ್ಚಾಯಿತು. ಒಂದು ವಾರ ಕಳೆಯುತ್ತಿದ್ದಂತೆಯೇ 'ಸಾಂತ್ವನ ಮನೆ'ಗೆ ಓಡಿದ.

'ಸ್ವಾಮಿಗಳೆ ನನಗೆ ಹುಚ್ಚು ಹಿಡಿಯೋದು ಒಂದು ಬಾಕಿ' ಎಂದು ತನ್ನ ಅಳಲು ತೋಡಿಕೊಂಡ.

ಸನ್ಯಾಸಿ ವಿಚಲಿತನಾಗಲಿಲ್ಲ.

'ನೀನು ಕೋಳಿ ಸಾಕಿದ್ದೀಯಾ?' ಕೇಳಿದ.

'ಸಾಕಿದ್ದೀನಿ ಸ್ವಾಮಿಗಳೆ.'

'ಎಲ್ಲಿ ಕೌಚಾಕುತ್ತಿ?'

'ಮನೆಯ ಹೊರಗೆ, ಜಗುಲಿಯ ಮೇಲೆ.'

'ಅವನ್ನು ಮನೆ ಒಳಗೆ ಕೌಚಾಕು.'

'ಅಲ್ಲಾ ಸ್ವಾಮಿಗಳೆ.....? '

'ನಾನು ಹೇಳಿದಷ್ಟು ಮಾಡು. ಒಂದು ವಾರ ಬಿಟ್ಟು ಬಾ' ಗದರಿಸಿದ ಸನ್ಯಾಸಿ.

ಸನ್ಯಾಸಿಯ ಮಹಿಮೆ. ಹಿಂದೆ ಮನೆ ಅಗಲ ಆಗಿರಲಿಲ್ಲ, ಈಗ ಆದರೂ ಆಗಬಹುದು ಎಂಬ ಆಸೆ. ಹಾಗೇ ಮಾಡಿದ. ಆಸೆ ಕೈಗೂಡಲಿಲ್ಲ, ಕಿರುಕುಳ ಹೆಚ್ಚಾಯ್ತು. ಒಂದು ವಾರ ಸಹಿಸಿಕೊಂಡಿದ್ದ. ನಂತರ 'ಸಾಂತ್ವನ ಮನೆ'ಗೆ ಬಂದ. ಅವನನ್ನು ಕಂಡ ಸನ್ಯಾಸಿ ಕೇಳಿದ-

'ನಿನ್ನ ಮನೇಲಿ ಕರಾವು ಆಗುತ್ತಾ?'

'ಆಯ್ತದೆ ಸ್ವಾಮಿಗಳೆ, ಹಸ ಸಾಕಿದ್ದೀನಿ.'

'ಎಲ್ಲಿ ಕಟ್ಟಾಕ್ತಿ?'

'ಮನೆ ಆಚೆ ಬಯಲಲ್ಲಿ ಸ್ವಾಮಿ.'

'ಅದನ್ನ ಮನೆ ಒಳಗೆ ಕಟ್ಟು.'

'ಅಲ್ಲಾ ಸ್ವಾಮಿಗಳೆ.....' ಎಂದು ಏನನ್ನೋ ಹೇಳಲು ಹೊರಟ ರೈತ.

'ಹೇಳಿದಷ್ಟು ಮಾಡು. ಒಂದು ವಾರ ಬಿಟ್ಟು ಬಾ.'

ಸ್ವಾಮಿಗಳ ಮಾತು ಮೀರುವಂತಿರಲಿಲ್ಲ, ಮೀರಿದರೆ ಇನ್ನೇನು ತರಲೆ ತಾಪತ್ರಯಗಳು ಬರುತ್ತಾವೊ ಎಂಬ ಭಯ ಒಂದು ಕಡೆ. ಈ ಸಲ ಪವಾಡ ನಡೆದರೂ ನಡೆಯಬಹುದು, ಮನೆ ಅಗಲ ಆದರೂ ಆಗಬಹುದು ಎನ್ನುವ ಆಸೆ ಇನ್ನೊಂದು ಕಡೆ. ಅವರು ಹೇಳಿದಂತೆಯೇ ಮಾಡಿದ.



ರಾತ್ರಿ ಆಯಿತು ಅಂದರೆ ಸಾಕು. ಹಸುವಿನ 'ಅಂಬಾ', ಆಡಿನ 'ಬ್ಯಾಬ್ಯಾ', ಕೋಳಿಗಳ 'ಕೊಕ್ಕೊ', ಹೆಂಡತಿಯ ಗೊಣಗಾಟ; ತಾಯಿಯ ವಟಗುಟ್ಟು; ಮಕ್ಕಳ ಚೀರಾಟ. ಇವುಗಳ ಮಿಶ್ರಿತ ಧ್ವನಿ ಚಿಟ್ಟು ಹಿಡಿಸುತ್ತಿತ್ತು. ... ಮುಗಿಯುತ್ತಿದ್ದಂತೆಯೇ 'ಸಾಂತ್ವನ ಮನೆ'ಗೆ ಓಡಿದ. ... ಕಷ್ಟವನ್ನ ವಿವರಿಸಿದ. 'ಮನೆಯಲ್ಲಿ ವಾಸಿಸಲು ಸಾಧ್ಯ ಇಲ್ಲ' ಅಂತಾನೂ ಹೇಳಿದ.

ಎಲ್ಲವನ್ನು ಶಾಂತಿಯಿಂದ ಕೇಳಿದ ಸನ್ಯಾಸಿ. ಸ... ಹೇಳಿದ 'ಅಲ್ಲಿರುವ ಪ್ರಾಣಿಗಳನ್ನೆಲ್ಲ ಮೊದಲಿನಂತೆ ... ಇರುವಂತೆ ಮಾಡು. ನಾಳೆ ಬೆಳಿಗ್ಗೆ ಬಾ'

ರೈತ ಬರಬರನೆ ಮನೆಗೆ ಹೋದ. ಪ್ರಾಣಿಗಳ... ಸ್ವಸ್ಥಾನಕ್ಕೆ ಸೇರಿಸಿದ. ಮಾರನೆ ಬೆಳಗ್ಗೆ 'ಸಾಂತ್ವನ ...' ಸೇರಿದ.

'ಈಗ ಹೇಗಿರುವೆ?' ಸನ್ಯಾಸಿ ಕೇಳಿದ.


'ಆರಾಮ ಇದೀನಿ ಸ್ವಾಮಿಗಳೆ. ನೆಮ್ಮದಿ ಇದೆ. ಮ... ಶಾಂತಿ ತುಂಬಿದೆ' ಅಂದ ರೈತ ಸ್ವಾಮಿಗಳಿಗೆ ಅಡ್ಡಬಿ...

ಇಂಗ್ಲಿಷಿನಲ್ಲಿ ಈ ಕತೆಯನ್ನು ಓದಿದ್ದೆ. ಈಗ ... ಯಾಕೆ ಇದನ್ನು ಹೇಳಬೇಕಾಯಿತು ಅಂದರೆ.....

ಪೆಟ್ರೋಲ್ ದರ ಲೀಟರಿಗೆ ಏಳೂವರೆ ರೂಪಾ... ಏಕ್‌ದಂ ಏರಿಸಿತಲ್ಲಾ ಸರ್ಕಾರ. ಆಗ ದೃಶ್ಯ ಮಾಧ್ಯಮದ... ತರಾವರಿ ಸುದ್ದಿ ಮಾಡಿದರು. ಸ್ವಲ್ಪಸ್ವಲ್ಪವೇ ಏರಿಸದೆ ಒ... ಸಾರಿಗೆ ಇಷ್ಟು ಏರಿಸಿದರೆ ಮಧ್ಯಮ ವರ್ಗದವರು ಬದು... ರೀತಿ ಹೇಗೆ ಅಂತೆಲ್ಲ ಸಂತಾಪ ಸೂಚಿಸಿದ್ದರು. Sude... poison ಗಿಂತ slow poison ವಾಸಿ ಅನ್ನೋ ... ಇದು. ದರ ಹೆಚ್ಚಿಸಿದಾಗ ಜನ ಒಂದಿನ ಕೂಗಾ... ಎರಡು ದಿನ ಹಾರಾಡ್ತಾರೆ. ಎಷ್ಟು ಏರಿಸಿದರೂ ಪರಿಣ... ಅಷ್ಟೇಯೆ! ಆಮೇಲೆ ಆ ದರಕ್ಕೇ ಹೊಂದಿಕೊಂಡು ಬಾ... ಅನ್ನುವ ಸತ್ಯ ಸರ್ಕಾರಕ್ಕೆ ತಿಳಿತು. ಕೇಂದ್ರ ಸರ್ಕಾರ ಪೆಟ್ರೋ...

ಪೇಜಾವರರಿಗೂ, ಭೈರಪ್ಪನಿಗೂ ಯಾವ ಫರಕ್ಕೂ ಇಲ್ಲ

"ಮಾಂಸ-ಮದ್ಯ ಸೇವಿಸೋರ ಜೊತೆ ಭೋಜನ ಮಾಡಿದರೆ ಅವರ ಜೊತೆ ಸ್ನೇಹ ಬೆಳೆದು ಸಾತ್ವಿಕ ಆಹಾರ ಸೇವಿಸುವವರೂ ನಂತರ ಮಾಂಸಮದ್ಯ ಸೇವನೆಗೆ ಇಳಿದುಬಿಡಬಹುದು. ಆದ್ದರಿಂದ ನಾನು ಅನ್ಯ ಜಾತಿಯವರೊಡನೆ ಸಹಪಂಕ್ತಿ ಭೋಜನವನ್ನು ವಿರೋಧಿಸುತ್ತೇನೆ" - ಇದು ಇತ್ತೀಚೆಗೆ ಉಡುಪಿಯ ಪೇಜಾವರ ಸ್ವಾಮಿಗಳು ಉದುರಿಸಿದ ಆಣಿಮುತ್ತುಗಳು! ಸಾರ್ವಜನಿಕವಾಗಿ ಹಿಂದೂ ಧರ್ಮದ ಸ್ವಾಮಿಯೊಬ್ಬರು ನೀಡಿದ ಇಂಥ ಹೇಳಿಕೆಯನ್ನು ವಿರೋಧಿಸದಿದ್ದರೆ ನಾವೆಲ್ಲ ಮಾನವ ವಿರೋಧಿಗಳಾಗಿಬಿಡುತ್ತೇವೆ.



ಮೊದಲನೆಯದಾಗಿ, ಯಾಕೆ ಇವರು ಮಾಂಸಾಹಾರದ ಬಗ್ಗೆ ಮಾತನಾಡುವಾಗಲೆಲ್ಲ ಮದ್ಯಪಾನದ ಬಗ್ಗೆ ಮಾತನಾಡುತ್ತಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇವರ ದೃಷ್ಟಿಯಲ್ಲಿ ಮಾಂಸ ಸೇವಿಸುವವರೆಲ್ಲ ಮದ್ಯ ಸೇವಿಸುತ್ತಾರೆಂದೆ? ಅಥವಾ ಸಸ್ಯಾಹಾರ ಸೇವಿಸುವವರ್‍ಯಾರು ಮದ್ಯ ಸೇವಿಸುವುದಿಲ್ಲ ಎಂದರ್ಥವೇ?

ಎರಡನೆಯದಾಗಿ, ಮಾಂಸಾಹಾರ ಮಾಡುವವರ ಪ್ರಭಾವ ಸಸ್ಯಾಹಾರದವರ ಮೇಲೆ ಆದ ರೀತಿಯಲ್ಲಿ ಸಸ್ಯಾಹಾರದವರ ಪ್ರಭಾವ ಮಾಂಸಾಹಾರದವರ ಮೇಲೆ ಆಗಲಾರದೆ?

ಮೂರನೆಯದಾಗಿ, ಪ್ರತಿಸಾರಿಯೂ ಇವರು ಸಸ್ಯಾಹಾರವನ್ನು ಸಾತ್ವಿಕ ಎಂದು ಕರೆಯುತ್ತಾರೆ, ಅಂದರೆ ಇವರ ದೃಷ್ಟಿಯಲ್ಲಿ ಮಾಂಸಾಹಾರವೇನು ದೆವ್ವಗಳ ಆಹಾರವೇ?


ನಾಲ್ಕನೆಯದಾಗಿ, ಮದ್ಯಪಾನ ಒಂದು ವ್ಯಸನ, ಆದರೆ ಮಾಂಸ ತಿನ್ನುವುದು ನಮ್ಮ ಬದುಕಿನ ರೀತಿ, ನಮ್ಮ ಆಹಾರ ಸಂಸ್ಕೃತಿ!

ಐದನೆಯದಾಗಿ, ಇನ್ನು ನಾವ್ಯಾರು ವೈಯಕ್ತಿಕ ನೆಲೆಯಲ್ಲಿ ಸಹಪಂಕ್ತಿ ಭೋಜನವನ್ನು ಕೇಳುತ್ತಿಲ್ಲ, ಬ್ರಾಹ್ಮಣರ ಮದುವೆಯಲ್ಲೋ, ಮುಂಜಿಯಲ್ಲೋ ನಮಗೆ ಸರಿಸಮಾನವಾಗಿ ಊಟ ಹಾಕಬೇಕೆಂದೇನೂ ಕೇಳುತ್ತಿಲ್ಲ, ನಾವು ಕೇಳುತ್ತಿರುವುದು: ಸಾರ್ವಜನಿಕ ಆಸ್ತಿಯಾದ ಮತ್ತು ಎಲ್ಲಾ ಜಾತಿಯವರು ಒಂದೇ ರೀತಿಯ ನಿಷ್ಠೆಯಿಂದ ನಡೆದುಕೊಳ್ಳುವ ಕೃಷ್ಣ ದೇವಸ್ಥಾನದಲ್ಲಿ ಭಕ್ತರಿಗೆ ಸಹಭೋಜನ ವ್ಯವಸ್ಥೆ ಇರಲೆಂದು!

ಇನ್ನು ಬಸವಣ್ಣನವರು ಮಾಂಸಾಹಾರಿಗಳಿಗೆ ಲಿಂಗಧಾರಣೆ ನಿರಾಕರಿಸಿದ್ದರ ಕಾರಣ ಮಾಂಸಾಹಾರದ ಬಗ್ಗೆ ಅವರಿಗಿದ್ದ ಅಸಹನೆಯಂತೂ ಅಲ್ಲ, ಬದಲಿಗೆ, ಪ್ರಾಣಿಹಿಂಸೆಯ ಬಗ್ಗೆ ಅವರಿಗಿದ್ದ ಖಚಿತ ನಿಲುವಿನ ಸಲುವಾಗಿ.

ಅಂತರ್‌ಜಾತಿ ವಿವಾಹದ ಬಗ್ಗೆ ಪೇಜಾವರರ ನಿಲುವು ನಮ್ಮ ಕಾದಂಬರಿ... ಎಸ್.ಎಲ್. ಭೈರಪ್ಪನವರ ನಿಲುವಿಗಿಂತ ಭಿನ್ನವಾಗೇನೂ ಇಲ್ಲ. ವಿಶ್ವ ಹಿಂ... ಪರಿಷತ್ತಿನ ಪ್ರಮುಖರಲ್ಲೊಬ್ಬರಾದ ಪೇಜಾವರ ಶ್ರೀ ಅಂಥವರು ಈ ... ಪ್ರತಿಗಾಮಿ ಹೇಳಿಕೆಗಳನ್ನು ನೀಡುವುದರ ಮೂಲಕ ಈಗಾಗಲೇ ಒಡೆ... ಹೋಗಿರುವ ಸಮಾಜವನ್ನು ಇನ್ನಷ್ಟು ಒಡೆಯುವ ಪ್ರಯತ್ನ ಮಾಡುತ್ತಿ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.



ಇನ್ನಾದರೂ ಪೇಜಾವರರು ಇಂಥ ಬಾಲಿಶ ಹೇಳಿಕೆಗಳನ್ನು ನೀಡುವು... ನಿಲ್ಲಿಸಬೇಕು.

- ಕು.ಸ. ಮಧುಸೂದನ, ರಂಗೇನ...

ಮೈಲಿಗೆ ಮನಸ್ಥಿತಿಯವರಿಗೆ ಧಿಕ್ಕಾರವಿರಲಿ

'ಥೂತ್ತೇರಿ' ಅಂಕಣದಲ್ಲಿ ಯಾಹೂ ಅವರು ಬರೆದ 'ಭೂಸುರೋತ್ತಮ... ತ್ರಿಮತಸ್ಥರು ಒಂದಾದರಂತಲ್ಲಾ?' ಮತ್ತು ಪಾರ್ವತೀಶ ಅವರು ಬ...

ಮಗಳಿಗೆ ಸರಳ ಮದುವೆ ಮಾಡಿಸುತ್ತೇನೆ

ಕ್ಯಾಪ್ಟನ್,

'ಕಂಡಹಾಗೆ' ಅಂಕಣದಲ್ಲಿ ಪ್ರಕಟಗೊಂಡ 'ಹೀಗೊಂದು ಮದುವೆ' ತುಂಬಾ ಇಷ್ಟವಾಯಿತು. ಯಾಕೆಂದರೆ ಇತ್ತೀಚೆಗೆ ಸಂಬಂಧಿಕರೊಬ್ಬರ ಮಗಳ ಆಡಂಬರದ ಮದುವೆ ಮಾಡಿಸಿರುವ ನನಗೆ ಈಗ ಎಷ್ಟು ಸುಸ್ತಾಗಿದೆ ಎಂದರೆ, ನನಗೀಗ **48** ವರ್ಷ ವಯಸ್ಸಾಗಿದ್ದರೂ ನನಗೆ **58** ಎಂಬಂತೆ ಭಾಸವಾಗುತ್ತಿದೆ.

ಮದುವೆಗೆ ಗಂಡು ಹುಡುಕುವುದರಿಂದ ಶುರುವಾಗಿ ಹುಡುಗನ ಮನೆಯವರು ಕೇಳುವ ವರದಕ್ಷಿಣೆ, ಕಾರು-ಚಿನ್ನ ತರಹದ ಬೇಡಿಕೆಗಳನ್ನು ಕೇಳಿ ಬೆಚ್ಚಿ ಬಿದ್ದಿದ್ದೆ. ಮದುವೆಗೆ ಛತ್ರ ಹುಡುಕಿ, ಅಡುಗೆಯವರನ್ನು ಗೊತ್ತು ಮಾಡಿದರೆ ಎಲ್ಲವೂ ಮುಗಿದಂತಲ್ಲ, ಅಡುಗೆಯವರು ಕೊಡುವ ಉದ್ದನೆ ಪಟ್ಟಿಯೊಂದಿಗೆ ಬ್ಯಾಂಡ್‌ಸೆಟ್, ಶಾಮಿಯಾನ, ಡೆಕೋರೇಷನ್, ಅದ್ದೂರಿ ಫೋಟೋ-ವೀಡಿಯೋ ವ್ಯವಸ್ಥೆಗಳು, ಬಂದವರಿಗೆ ಉಳಿದುಕೊಳ್ಳಲು ಲಾಡ್ಜ್ ಅವರ ಮನ ತಣಿಸಲು ಸುತ್ತಮುತ್ತಲ ಪ್ರೇಕ್ಷಣೀಯ ಸ್ಥಳಗಳ ವೀಕ್ಷಣೆಗೆ ವ್ಯವಸ್ಥೆ, ಐಸ್‌ಕ್ರೀಂ, ಬೀಡಾ, ಕುಡಿಯಲು ಬಿಸ್ಲೇರಿ... ಸಾಕಪ್ಪಾ... ಸಾಕು.....

ಇಷ್ಟೆಲ್ಲಾ ಮಾಡುವ ಹೊತ್ತಿಗೆ ನನ್ನ ಅರ್ಧ ಜೀವವೇ ಹೋಗಿತ್ತು, ಆದರೂ 'ಅದು ಸರಿಯಾಗಿಲ್ಲ', 'ಇದು ಸರಿಯಾಗಿಲ್ಲ' ಎಂಬ ಕೊಂಕು ಮಾತುಗಳನ್ನೂ ಕೇಳಬೇಕು.

ಹಿಂದೆ ಸರಳ ಮದುವೆ ಆಗುವ ಮೂಲಕ ಆದರ್ಶ ತೋರಿದ್ದ ನಮ್ಮ 'ಕಟ್ಟೆಪುರಾಣ' ಖ್ಯಾತಿಯ ಬಿ.ಚಂದ್ರೇಗೌಡರು ತಮ್ಮ ಮಗಳ ಮದುವೆಯನ್ನೂ ಅತ್ಯಂತ ಸರಳವಾಗಿ ಮಾಡಿದ್ದರು. ಅಷ್ಟೇ ಅಲ್ಲ, ಅವರ ಮಡದಿ ಗೌರಕ್ಕ "ನಮ್ಮ ಸಂಧ್ಯಾಗೆ ಬಂಗಾರದಂತಹ ಗಂಡ ಸಿಕ್ಕಿದ್ದಾನೆ ಕಣಲೇ. ನಮ್ಮ ಜಾತಿಲಿ ಹುಡುಕಿದ್ರೂ ಇಂತಹ ಹುಡುಗ ಸಿಕ್ಕುತ್ತಿರಲಿಲ್ಲ" ಎಂದು ಇವತ್ತಿಗೂ ಸಂತೋಷ ವ್ಯಕ್ತಪಡಿಸುತ್ತಾರೆ.

ಹಾಗೆಯೇ ಮಳವಳ್ಳಿಯ ಉಪನ್ಯಾಸಕ ಮಿತ್ರ ಎಂ.ವಿ.ಕೃಷ್ಣ ಅವರು ಕೂಡ ತಮ್ಮ ಅಕ್ಕನ ಮಗಳು ರಾಧಾಳ... ಮಂತ್ರಮಾಂಗಲ್ಯ ಮದುವೆ ಮಾಡಿಸಿ ಆದರ್ಶತೆ ತೋರಿದ್ದಾರೆ. ಹೀಗೆ ಮದುವೆಯಾದ ಎಲ್ಲ ದಂಪತಿಗ... ಇವತ್ತಿಗೂ ಸಮಾಜದಲ್ಲಿ ಆರೋಗ್ಯಕರವಾಗಿ ಬಾಳುತ್ತಿದ್ದಾರೆ.

ಇತ್ತೀಚೆಗೆ ಆಡಂಬರದ ಮದುವೆಗಳನ್ನು ನೋಡಿ ನನಗೆ ಅಲರ್ಜಿ ಶುರುವಾಗಿದೆ. ಅಂತಹ ಮದುವೆಗಳ... ಹೆಂಗಸರ ಮೈಮೇಲಿನ ಮಣಭಾರದ ಬಂಗಾರ, ರೇಷ್ಮೆ ಸೀರೆ, ಸೆಂಟು, ಒಣದರ್ಪ ಎಲ್ಲವೂ ನನ್ನಲ್ಲಿ ರೇಜಿ... ಹುಟ್ಟಿಸುತ್ತಿವೆ.

ನನ್ನ ಮಗಳು ವರ್ಷಾ ಎಂಥ ಪ್ರತಿಭಾವಂತೆ ಎಂದರೆ ಆಕೆ ಮೊನ್ನೆ ಎಸ್‌ಎಸ್‌ಎಲ್‌ಸಿಯಲ್ಲಿ **93.4** ಪರ್ಸೆಂಟ್... ಅಂಕಗಳನ್ನು ಗಳಿಸಿದ್ದಾಳೆ. ಈಗ ಅವಳು ಪಿಯುಸಿ ಓದಲು ಬೆಂಗಳೂರಿಗೆ ಹೊರಟಿದ್ದಾಳೆ. ಅವಳನ್ನು ಡಾಕ್ಟ... ಮಾಡಿಸಿ, ಯಾವುದೇ ವರದಕ್ಷಿಣೆ ನೀಡದೆ ಸರಳವಾಗಿ ಮದುವೆ ಮಾಡುವುದಾಗಿ ನಿಮ್ಮ ಮುಂದೆ ಪ್ರಮಾ... ಮಾಡುತ್ತೇನೆ.

ನನ್ನ ಜೊತೆಗೆ ನೀವಿದ್ದರೆ ಸಾಕು!

ಅಂದಹಾಗೆ, ಕಡೇನಂದಿಹಳ್ಳಿಯಲ್ಲಿ ಗೀತಾಳನ್ನು ಸರಳ ಮದುವೆಯಾದ ಸ್ನೇಹಿತ ಕುಮಾರ್ ಬುರುಡಿಕ... ಸೌಜನ್ಯಕ್ಕೂ ನನಗೊಂದು ಮದುವೆ ಇನ್ವಿಟೇಷನ್ ಕಳಿಸಲಿಲ್ಲ, ಆಹ್ವಾನ ಪತ್ರಿಕೆ ಬೇಡ, ಕಡೇಪಕ್ಷ ಒಂದ... ಎಸ್‌ಎಮ್‌ಎಸ್ ಅನ್ನಾದರೂ ಕಳುಹಿಸಬಹುದಿತ್ತು.

ಇದರಲ್ಲೂ ಸರಳತನವಾ?

- ಶೂದ್ರ ಸಂತೋಷ್, ಅಬ್ಬಂಪ...

...ೀಟರಿಗೆ ಎರಡು ರೂಪಾಯಿ ಇಳಿಸಿತು ನೋಡಿ. ...ವಾಹಿನಿಯವರು ನಿಮಗೊಂದು 'ಸಿಹಿ ಸುದ್ದಿ' ...ವಿಷಯಾನ ಬಿತ್ತರಿಸ್ತಾ ಕನ್ತವೆ! ಇದನ್ನ ...ುತ್ತಿದ್ದಾಗ ಈ ಕತೆ ನೆನಪಿಗೆ ಬಂತು....

******

...ವ್ ಡೆತ್ತು ಸ್ಲೋ ಡೆತ್ತು ಅಂದಾಗ ರಾಜಕೀಯದಲ್ಲಿ ...ಿದು ಸಡೆನ್ನು, ಯಾವುದು ಸ್ಲೋ ಅಂತ ತಿಳಿಯೋಕೆ ...ಯ ವೈದ್ಯರನ್ನು ಕಾಣಬೇಕು. ..... ಏನು...... ...ಯ ಪಂಡಿತರು ಅಂತ ಕೇಳಿದ್ದೀವಿ. ಇದ್ದಾರು ...ಯ ವೈದ್ಯರು ಅಂತೀರಾ... ಇದಾರೆ ಕಣ್ರಿ. ಇದಾರೆ. ... ಕೆ.ಎಸ್. ಈಶ್ವರಪ್ಪನವರು. ಅವರು ಎಲ್ಲಾ ಪಕ್ಷಗಳನ್ನು ...ೆ ಮಾಡಿರಬೇಕು. ಇಂತಿಂತಹ ಪಕ್ಷಗಳಿಗೆ ಇಂತಿಂತಹ ... ಬಂದಿದೆ ಅಂತ ಹೇಳವ್ರೆ. ಜೆಡಿಎಸ್ನ್ನು, ಕಾಂಗ್ರೆಸ್‌ಗೆ ...ಕ ರೋಗ ಅಂದರೆ... ಹೃದ್ರೋಗವಂತೆ ಕಣ್ರಿ. ಅವು ...ಕೇಳದೆ ಇಹಲೋಕದಿಂದ ಪರಲೋಕಕ್ಕೆ ಟಿಕೆಟ್ ...ವಂತೆ. ಭಾಜಪಗೆ ಯಾವ ರೋಗವೂ ಇಲ್ಲವಾ ... ಅದ್ಕೂ ಬಡಿದದಂತೆ ಕಣ್ರಿ. ಅದಕ್ಕೆ ಕ್ಯಾನ್ಸರ್ ... ಅಂದರೆ ಅದು ಸಾಯೋದೂ ಇಲ್ಲ, ಸುತ್ತಮುತ್ತಲಿ ... ನೆಮ್ಮದಿಯಾಗಿರೋಕೆ ಬಿಡುವುದೂ ಇಲ್ಲ ಅಂದ ...ಯಿತಾ....!

ಸಂಪಂಗಿ ತಂದ ಸಮಸ್ಯೆ


...ಾಸಕ ಸಂಪಂಗಿ ಜೈಲು ಸೇರಿದರು. ಅವರು ಏನು ...ಾಗಲೂ ಮಾಡದ್ದನ್ನ ಈಗ ಮಾಡಿರಲಿಲ್ಲ, ಅಥವಾ ...ೂ ಮಾಡಬಾರದ್ದನ್ನ ಮಾಡಿರಲಿಲ್ಲ, ಏನೋ ಗ್ರಹಚಾರ ...ು. ಹಿಂದೆಲ್ಲ ಸಿಕ್ಕಿಹಾಕಿಕೊಂಡಿರಲಿಲ್ಲ. ಈಗ ...ಾಕಿಕೊಂಡರು. ಸಮಾಜಸೇವೆ ಮಾಡಿದ್ದಕ್ಕೆ ಶಿಕ್ಷೆ ಆದದ್ದು ... ಒಬ್ಬರಿಗೆ ಮಾತ್ರ! ಅದರ ಫಲ 'ಉಣ್ಣುವ ...ರಿಗಲ್ಲ! ಯಾಕೆಂದರೆ ಅವರು ನೇರವಾಗಿ ...ವಹಿಸಿರಲಿಲ್ಲ!

...ಲವರು ಪುಣ್ಯಾತ್ಮರಿದ್ದಾರೆ. ಸಮಾಜಸೇವೆ ಎನ್ನುವುದು ...ೊಬ್ಬರಿಗೇ ಮೀಸಲಾಗಿದ್ದರೆ ಸಾಲದು ಎಂದು ...ಣಿಸುವವರು. ಅಂತಹವರು ತಮ್ಮ ಇಡೀ ಕುಟುಂಬವನ್ನೇ ಇದಕ್ಕೆ ಒಪ್ಪಿಸಿಕೊಂಡಿರುತ್ತಾರೆ. ಆ ಮಹಾನುಭಾವ, ಮಹಾನುಭಾವಿಯವರೆಲ್ಲ ನಿಶ್ಚಿಂತೆಯಿಂದ ತಮ್ಮ 'ಸಮಾಜ ಸೇವೆ' ನಿರ್ವಹಿಸುತ್ತಿದ್ದರು. ಮಂತ್ರಿ, ಶಾಸಕರುಗಳಾದ; ಅವರ ಸಂಬಂಧಿಗಳಾದ ತಮ್ಮ ತಂಟೆಗೆ ಯಾರೂ ಬರಲಾರರು ಎಂದೇ ಬಲವಾಗಿ ನಂಬಿದ್ದರು. ಆದರೆ ಲೋಕಾಯುಕ್ತ, ನ್ಯಾಯಾಲಯ ತೆಗೆದುಕೊಂಡ ಕಠಿಣ ನಿಲುವು ಅವರಿಗೆ ಬೆವರು ಬರಿಸುತ್ತಿದೆಯಂತೆ. ಆದರೂ ಒಂದು ಮೊಂಡು ಧೈರ್ಯ! ಸಂಪಂಗಿಗೇನೋ ಹಾಗಾಯಿತು. ನಮಗೆ ಹಾಗೆ ಆಗುವುದಿಲ್ಲ, ಪ್ರಖ್ಯಾತ ಲಾಯರುಗಳು ಇರುವುದೇ ಅಪರಾಧಿಗಳನ್ನು ನಿರಪರಾಧಿಗಳು ಎಂದು ತೋರಿಸುವುದಕ್ಕೆ, ಅಲ್ಲವೆ? ಅವರು ಹಾಗೆ ಮಾಡಿಯೇ ಮಾಡುತ್ತಾರೆ ಎಂಬ ಭಂಡತನ. ಆದರೆ ಏನೊ ಅಳುಕು. ಅಕಸ್ಮಾತ್ತಾಗಿ ತಮಗೂ ಶಿಕ್ಷೆ ಆಗಿಯೇ ಬಿಟ್ಟರೆ... ಆದರೆ ತಾನೆ ಏನಂತೆ ಎಂಬ ಮೊಂಡುತನ. ತಾವು ವಿವಿಐಪಿಗಳು. ಆನೆ ಇದ್ದಂಗೆ. ಸತ್ತರೂ ಸಾವಿರ, ಇದ್ದರೂ ಸಾವಿರ. ಅದರ ಬೆಲೆ ಅದಕ್ಕೆ ಇದ್ದೇ ಇರುತ್ತೆ. ವಿವಿಐಪಿ ಜೈಲಿನಲ್ಲಿದ್ದರೂ ವಿವಿಐಪಿನೇ. ಬೇಕಾದ- ಸೌಲಭ್ಯ ಪಡೆಯಬಹುದು. ಅವರಿಗೆ ತಕ್ಕಂತಹ ಕೊಠಡಿ ಕೊಡ್ತಾರೆ. ಟಿವಿ, ಫ್ರಿಡ್ಜ್ ಎಲ್ಲ ಇರುತ್ತೆ. ಮನೆಯಿಂದಲೇ ಬೇಕುಬೇಕಾದ ತಿಂಡಿತೀರ್ಥ ತರಿಸಬಹುದು ಎಂದೆಲ್ಲ ತಿಳಿದುಕೊಂಡಿದ್ದರಂತೆ. ಆದರೆ ಯಾವಾಗ ಸಂಪಂಗಿ ಒಳಕ್ಕೆ ಹೋದರು ನೋಡಿ. ಆಗ ಭ್ರಮೆ ಎಲ್ಲ ಕಳಚಿಬೀಳುತ್ತೆ. ಈ ಭಾಗ್ಯ ಇರೋದು ವಿಚಾರಣಾಧೀನ ವಿವಿಐಪಿ ಕೈದಿಗಳಿಗೆ ಮಾತ್ರ. ಶಿಕ್ಷೆಯಾದ ಕೈದಿಗಳಿಗಲ್ಲ. ಇತರೆ ಕೈದಿಗಳಂತೆಯೇ ತಾವೂ ಇರಬೇಕು ಅನ್ನುವುದು ಮನದಟ್ಟಾಯಿತಂತೆ. ಇದು ಆದನಂತರ ಅವರನ್ನು ಇನ್ನೊಂದು ಸಮಸ್ಯೆ ಕಾಡುತ್ತಿದೆಯಂತೆ. ಇವತ್ತೋ ನಾಳೆಯೋ ಜೈಲಿಗೆ ಹೋಗುವುದು ಖಾತರಿ. ಏನೇನೋ ಉಣ್ಣೋದು ಉಡೋದು ಮಾಡ್ಬೇಕು ಅನ್ನೊ ಆಸೆ ಇತ್ತು. ಈಗಲೇ ಅದನ್ನೆಲ್ಲ ಪೂರೈಸಿಕೊಳ್ಳಬೇಕೋ ಅಥವಾ ಜೈಲಿನ ಜೀವನಕ್ಕೆ ಈಗಿನಿಂದಲೇ ಹೊಂದಿಕೊಳ್ಳುವಂತೆ ಜೀವನಶೈಲಿಯನ್ನ ಬದಲಾಯಿಸಿಕೊಳ್ಳಬೇಕೋ ಅನ್ನುವುದೇ ಈ ಸಮಸ್ಯೆಯಂತೆ. ಪರಿಹಾರ ಸೂಚಿಸುವುದು ಕಷ್ಟವೇ ಅಲ್ಲವಾ....

ಜನಪದದ 'ಭಾಗೀರತಿ'

ಬರಗೂರು ರಾಮಚಂದ್ರಪ್ಪ ಅವರು ನಿರ್ದೇಶಿಸಿರುವ ಹದಿಮೂರನೆ ಸಿನಿಮಾ 'ಭಾಗೀರಥಿ' ಈ ವಾರ ತೆರೆ ಕಾಣುತ್ತಿದೆ. ಬರಗೂರರ ಹದಿಮೂರು ಸಿನಿಮಾಗಳಲ್ಲಿ ಈ ಚಿತ್ರವೇ ಅತ್ಯಂತ ಶ್ರೀಮಂತವಾಗಿ ಮೂಡಿಬಂದಿದೆ ಎನ್ನಬಹುದು. ಬರಗೂರರ ಹಿಂದಿನ ಚಿತ್ರಗಳಲ್ಲಿ ಕಾಣಿಸುತ್ತಿದ್ದ ಬಡತನ ಅಥವಾ ಸೊರಗಿದ ತಾಂತ್ರಿಕತೆ 'ಭಾಗೀರಥಿ'ಯಲ್ಲಿ ಮಾಯವಾಗಿದೆ. ಇದಕ್ಕೆ ನಿರ್ಮಾಪಕ ಶ್ರೀನಿವಾಸ್ ಉದಾರವಾಗಿ ಹಣ ಚೆಲ್ಲಿದ್ದೇ ಮುಖ್ಯ ಕಾರಣ ಎಂದು ಹೇಳಬಹುದು.

ಈ ಹಿಂದೆ 'ಭಾಗೀರಥಿ' ಚಿತ್ರವನ್ನು ಮಾಡಬೇಕೆಂದು ಅನೇಕ ನಿರ್ದೇಶಕರು ಕನಸು ಕಂಡಿದ್ದರು. ಅದರಲ್ಲೂ ಎಸ್.ಮಹೇಂದರ್ ಮತ್ತು ನಾಗಾಭರಣ ಎರಡು-ಮೂರು ಬಾರಿ ಈ ಚಿತ್ರವನ್ನು ಮಾಡಲು ತಯಾರಿ ನಡೆಸಿದ್ದರು. ಆದರೆ ಯಾಕೋ, ಏನೋ ಆ ಚಿತ್ರ ಆರಂಭವೇ ಆಗಿರಲಿಲ್ಲ, ಅದೇರೀತಿ ನಿರ್ಮಾಪಕ ಧನರಾಜ್ ಕೂಡ ಒಮ್ಮೆ ಈ ಚಿತ್ರವನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಲು ಯತ್ನಿಸಿದ್ದರು. ಅವರ ಪ್ರಯತ್ನವೂ ವಿಫಲಗೊಂಡಿತು. ಆದರೆ ಇವರೆಲ್ಲರಿಗಿಂತ ವಿಭಿನ್ನವಾಗಿ ಬರಗೂರು ರಾಮಚಂದ್ರಪ್ಪನವರು ಸದ್ದುಗದ್ದಲವಿಲ್ಲದೆ ಈ ಚಿತ್ರವನ್ನು ಆರಂಭಿಸಿ, ಮುಗಿಸಿ ಈಗ ಬಿಡುಗಡೆಯನ್ನೂ



ಮಾಡುತ್ತಿದ್ದಾರೆ. ಆ ಮಟ್ಟಿಗೆ ಬರಗೂರು ಅವರ ಸಾಧನೆಯನ್ನು ಅಭಿನಂದಿಸಲೇಬೇಕು.

ಈ ಚಿತ್ರದ ಕಥೆ ಜನಪದವನ್ನು ಆಧರಿಸಿದೆ. ಈ ಕಥೆಯನ್ನು ಕೇಳದ ಕನ್ನಡಿಗರೇ ಇಲ್ಲವಾದ್ದರಿಂದ ಕರ್ನಾಟಕದ ಜನತೆಗಂತೂ ಈ ಕಥೆ ಹೊಸತೇನಲ್ಲ, ಇಂತಹ ಜನಪ್ರಿಯ ಕಥೆಯನ್ನು ಸಿನಿಮಾಗೆ ಪರಿವರ್ತಿಸುವುದು ಒಂದು ರೀತಿಯಲ್ಲಿ ದೊಡ್ಡ ರಿಸ್ಕ್ ತೆಗೆದುಕೊಂಡಂತೆ. ಯಾಕೆಂದರೆ ಜನರ ನಿರೀಕ್ಷೆ ತುಂಬಾ ಹೆಚ್ಚಿದ್ದು ಅದನ್ನು ನಿರ್ದೇಶಕ ಪೂರೈಸಬೇಕಾಗುತ್ತದೆ. ಆ ನಿಟ್ಟಿನಲ್ಲಿ 'ಭಾಗೀರಥಿ' ಚಿತ್ರವನ್ನು ನೋಡಿದಾಗ ಇದು ಬರಗೂರರ ಇತರೆ ಚಿತ್ರಗಳಿಗಿಂತ ಉತ್ತಮವಾಗಿ ಮೂಡಿಬಂದಿದ್ದರೂ, ಅಲ್ಲಲ್ಲಿ ಕೆಲವು ಕೊರತೆಗಳು ಕಾಣಿಸುತ್ತವೆ ಎನಿಸುತ್ತದೆ.

ಮುಖ್ಯವಾಗಿ ಈ ಚಿತ್ರದ ಕಥಾವಸ್ತು ಒಂದು ಕಮರ್ಷಿಯಲ್ ಚಿತ್ರಕ್ಕೆ ಹೇಳಿಮಾಡಿಸಿದಂತಹ ಮಸಾಲೆ ಅಂಶಗಳನ್ನು ಹೊಂದಿದೆ. ಆದರಲ್ಲೂ ಅನೇಕ ಭಾವನಾತ್ಮಕ ಭಾಗಗಳನ್ನು ಈ ಕತೆ ಹೊಂದಿದ್ದು ಕೇಳುಗರು ಕಣ್ಣೀರನ್ನು ಸುರಿಸುವಷ್ಟು ಪ್ರಬಲವಾಗಿವೆ. ಆದರೆ 'ಭಾಗೀರಥಿ'ಯನ್ನು ನೋಡಿದಾಗ ಅಂತಹ ದೃಶ್ಯಗಳು ಪರಿಣಾಮಕಾರಿಯಾಗಿ ಮೂಡಿಬಂದಿಲ್ಲವೆನಿಸಿತು. ಮುಖ್ಯಪಾತ್ರಗಳಲ್ಲಿ ನಾಯಕಿಯಾಗಿ ಭಾವನಾ ಮತ್ತು ನಾಯಕನಾಗಿ ಕಿಶೋರ್ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದರೂ ಚಿತ್ರದ ಸಂಭಾಷಣೆ ಚುರುಕಾಗಿಲ್ಲವಾದ್ದರಿಂದ ಅವರ ನಟನೆ ನೆನಪಿನಲ್ಲಿ ಉಳಿಯುವಂತೆ ಮೂಡಿಬಂದಿಲ್ಲ.

ಒಂದೇಮಾತಿನಲ್ಲಿ ಹೇಳುವುದಾದರೆ ಈ ಚಿತ್ರಕ್ಕೆ ಇನ್ನಷ್ಟು ಚುರುಕಾದ ಚಿತ್ರಕಥೆಯನ್ನು ಹೆಣೆದು, ಇನ್ನೂ ಒಳ್ಳೆಯ ತಾಂತ್ರಿಕ ಮೆರುಗನ್ನು ನೀಡಿದ್ದರೆ ಇದು ಕನ್ನಡದ ಒಂದು ಉತ್ತಮ ಚಿತ್ರವಾಗಿರುತ್ತಿತ್ತು. ಅಂತಹ ಸುವರ್ಣಾವಕಾಶವನ್ನು ಸಾಹಿತಿ- ನಿರ್ದೇಶಕ ಬರಗೂರು ರಾಮಚಂದ್ರಪ್ಪ ಕಳೆದುಕೊಂಡಿದ್ದಾರೆ.

ಲಾಂಗು ಮಚ್ಚು ಸಿನಿಮಾಗಳನ್ನು ನೋಡಿ ನೋಡಿ ಬೇಸತ್ತಿರುವ ಕನ್ನಡದ ಪ್ರೇಕ್ಷಕರಿಗೆ ಅಪ್ಪಟ ಕನ್ನಡ ಜನಪದ ಕಥಾವಸ್ತುವಿನ ಈ ಚಿತ್ರ ಮನಸ್ಸಿಗೆ ಮುದ ನೀಡಿದರೂ ಆಶ್ಚರ್ಯವಿಲ್ಲ.

– ಶೆಣೈ

...ಜಾವರರ ಮಾನಸಿಕ ರೋಗ' ಕುರಿತು ನನ್ನ ಪ್ರತಿಕ್ರಿಯೆ

...ಮದ್ಯಪಾನ-ಮಾಂಸಾಹಾರ ಸೇವಿಸುವವರ ಬಗ್ಗೆ ಮತ್ತು ಅಂತರಜಾತಿ ...ಹಗಳ ಬಗ್ಗೆ ಪೇಜಾವರ ಶ್ರೀಗಳು ನೀಡಿರುವ ಹೇಳಿಕೆಗಳಿಗೆ ಪ್ರಾಮುಖ್ಯತೆ ...ಟ್ಟು ವಾದ-ಸಂವಾದ ಮಾಡುವುದು ಸರಿಯಲ್ಲ. ಇಂತಹ ರೋಗಗ್ರಸ್ತ ...ಸ್ಥಿತಿ ಹೊಂದಿರುವವರ ಮಾತಿಗೆ ಮನ್ನಣೆಯಾಗಲಿ, ಬೆಲೆಯಾಗಲೀ ...ಬಾರದು. ಬದಲಾಗಿ ಅವರ ಮಾತುಗಳನ್ನು ಸಂಪೂರ್ಣವಾಗಿ ...ರಿಸಬೇಕು.

...ಮಹಾನ್ ಭಕ್ತೆ ಶಬರಿ ತಾನು ತಿಂದ ಬಾಳೆಹಣ್ಣಿನ ಉಳಿದ ಭಾಗವನ್ನು ...ನಿಗೆ ಕೊಡುತ್ತಾಳೆ. ಬೇಡರ ಕಣ್ಣಪ್ಪ ...ಶಿವನಿಗೆ ಮಾಂಸಾಹಾರವನ್ನು ನೈವೇದ್ಯ ...ಸುತ್ತಾನೆ. ಇದನ್ನು ಅಪವಿತ್ರ ಎಂದು ...ಬಲಾದೀತೆ? ನಿಜವಾಗಲೂ ಭಕ್ತಿ, ..., ಸಮಾನತೆ ಬಗ್ಗೆ ಅರಿವಿಲ್ಲದ ...ಾವರ ಶ್ರೀಗಳಂಥವರಿಗೆ ಮಠಾಧೀಶರ ...ಬೇಕೆ?

...ಶ್ರೀಕೃಷ್ಣ ಬ್ರಾಹ್ಮಣನಲ್ಲ, ಆದರೂ ಆತ ... ಮಠಗಳ ಯತಿಗಳಿಗೆ ಆರಾಧ್ಯ ...ನಾಗಿದ್ದಾನೆ. ಯಾಕೆ? ಕೃಷ್ಣನ ಹುಂಡಿಗೆ ...ು ಹಾಕುವ ಭಿಕ್ಷೆಯ ಆಸೆಗಲ್ಲವೇ? ...ಗೆ ಹೊಟ್ಟೆ ತುಂಬಿಸಿಕೊಳ್ಳಲು ಕೃಷ್ಣ ... ಹೊರತು ಆತನ ಬಗ್ಗೆ ಅವರಲ್ಲಿ ..., ಭಕ್ತಿ ಇದೆ ಎಂಬ ಕಾರಣಕ್ಕಲ್ಲ. ...ದರ ಕೃಷ್ಣ ತನ್ನ ಭಕ್ತ ಕನಕದಾಸನಿಗೆ ...ನ ನೀಡಿದ ಕಾರಣಕ್ಕೇ ಉಡುಪಿಯ ... ದೇವಸ್ಥಾನದಲ್ಲಿ ಪೂಜೆ ...ಯುತ್ತಿದೆಯೇ ವಿನಃ ಆತ ಅಲ್ಲಿರುವ ...ಹ್ಮಣರಿಗೆ ಒಲಿದ ಎಂದಲ್ಲ.

...ಮದ್ಯ-ಮಾಂಸಾಹಾರ ಸೇವಿಸುವವರು ...ಸುವ ಕಾಣಿಕೆ-ಕಾಸು ಯಾಕೆ ಅವರಿಗೆ ...ಗೆ ಆಗುವುದಿಲ್ಲ? ಉಡುಪಿಯ ಯತಿಗಳು ತಿನ್ನುವ ಆಹಾರ ಧಾನ್ಯಗಳನ್ನು ...ಯುವವರು ಯಾರು? ಇವರು ಮೆಟ್ಟುವ ಪಾದರಕ್ಷೆಗಳನ್ನು ತಯಾರಿಸುವವರು ...ರು? ಇವರು ಧರಿಸುವ ವಸ್ತ್ರಗಳನ್ನು ನೇಯ್ದವರು ಯಾರು? ಅವರು ...ಿಸುವ ಕೃಷ್ಣನ ಮೂರ್ತಿಯನ್ನು ಕೆತ್ತಿದವರು ಯಾರು? ಜಾತಿಯನ್ನೇ ...ದಲ್ಲಿ ತುಂಬಿಕೊಂಡು ಪ್ರತಿಯೊಂದಕ್ಕೂ, 'ಮೈಲಿಗೆ, ಮೈಲಿಗೆ' ಎಂದು ...ು ಬಡಿದುಕೊಳ್ಳುವ ಇಂತಹ ಸ್ವಾಮಿಗಳಿಗೆ 'ಭೂಸ್ಪೇರಿ' ಎನ್ನದೆ ...ನ್ನಬೇಕು?!

- ದಿ.ಎಲ್. ನಾಗರಾಜ್, ಚೆನ್ನಗಿರಿ

...ಪೇಜಾವರ ಸ್ವಾಮಿಯು ತಾಯಿಯ ಗರ್ಭದಲ್ಲಿ ತುಂಬಿದ್ದ ಮಾಂಸದಿಂದಲೇ ...ು ಹುಟ್ಟಿದ್ದು ಎಂದು ಅವರಿಗೆ ಅರ್ಥ ಮಾಡಿಸುವ ತಾಕತ್ತು ಯಾವ ...ಕ್ಷದ ಗಂಡಸಿಗೆ ಇದೆ ಈ ಕರ್ನಾಟಕದಲ್ಲಿ?

- ರವಿಕುಮಾರ್, ಹಾಸನ

ಸರಳ ಮದುವೆ ಕುರಿತು

ಜೂನ್ 6, 2012ರ ಸಂಚಿಕೆಯ ಕಂಡಹಾಗೆ ಅಂಕಣದಲ್ಲಿ ಪ್ರಕಟಗೊಂಡ 'ಹೀಗೊಂದು ಮದುವೆ' ಓದಿದೆ. ಈ ರೀತಿಯ ಸರಳ ಮದುವೆಗಳು ಪ್ರತಿ ಗ್ರಾಮದಲ್ಲೂ ನಡೆದರೆ ಭ್ರಷ್ಟಾಚಾರ ಮತ್ತು ನಮ್ಮ ಸಮಾಜದ ಹಲವಾರು ಸಮಸ್ಯೆಗಳನ್ನು ತಡೆಯಬಹುದು ಅನ್ನಿಸಿತು.

- ಬಿ.ಬಿ.ರಾಜ್ ಹಂಪಾಪಟ್ಟಣ, ಎಚ್.ಬಿ.ಹಳ್ಳಿ

'ಹೀಗೊಂದು ಮದುವೆ' ಎಂಬ 'ಕಂಡಹಾಗೆ' ಓದುತ್ತಾ ಓದುತ್ತಾ ಯಾವುದೋ ಜನಪದದ ಅಜ್ಜಿ ಕಥೆ ಹೇಳುತ್ತಾ ಇದ್ದೇನೆ ಎಂಬ ಅನುಭವ ನನಗಾಯಿತು. ಪ್ಯಾಟೆಯಲ್ಲಿ ಬೆಳೆದ ಗೌರಿ ಒಂದು ಭಾರತೀಯ ಹಳ್ಳಿಯ ರೂಪವನ್ನು ಅದೆಷ್ಟು ಚಂದವಾಗಿ ಕಟ್ಟಿ ಕೊಟ್ಟಿದ್ದಾರೆ ಎಂದರೆ ನಮ್ಮ ಹಳ್ಳಿ ನನ್ನ ಕಣ್ಣುಮುಂದೆ ನಿಂತಂತಾಯಿತು.



ಇವತ್ತಿಗೂ ಆಸ್ಪತ್ರೆ ಕಾಣದಿರುವ, ಸುಣ್ಣಬಣ್ಣ ಇಲ್ಲದ ಇಸ್ಕೂಲು, ಸುತ್ತಲೂ ಕೆರೆಕಾನೆಗಳನ್ನು ಹೊಂದಿರುವ ಕಡೇನಂದಿಹಳ್ಳಿ ನಮ್ಮ ಹಳ್ಳಿಯಂತೆಯೇ ಇದೆ ಅನ್ನಿಸಿತು. ಅಂದಹಾಗೆ, ಆಗಿನ ಕೆರೆ ಕುಂಟೆಗಳ ತಾಂತ್ರಿಕತೆ ಈಗಿನ ಡ್ಯಾಮ್‌ಗಳಿಗೂ ಬರುವುದಿಲ್ಲವೇನೋ. ದಿನ್ನೆ ಮೇಲಿನ ಕೆರೆ ತುಂಬಿದ ನಂತರವೇ ಕೆಳಗಿನ ಕೆರೆಗಳಿಗೆ ನೀರು ಹರಿದು ಬರುವುದು. ಹೀಗೆ ಅವುಗಳಲ್ಲಿ ನೀರು ತುಂಬಿದರೆ ಮಾತ್ರ ಸುತ್ತಲ ಹಳ್ಳಿಗಳು ಬೆಳೆ ಕಾಣುವುದು.


ನನಗೆ ನೆನಪಿರುವಂತೆ ನಮ್ಮ ಉತ್ತನೂರಿನ ಕೆರೆ ಏಳೂ ಊರುಗಳ ಕಣಜ ತುಂಬುತ್ತಿತ್ತು. ಅದಕ್ಕೆಂದೇ ನಮ್ಮ ಊರಿನ ರೈತರು ರಾತ್ರೋರಾತ್ರಿ ಮೇಲಿನ ವಾಟ ಸಡಲಿಸಿ ಮುಡಿಯನೂರು, ಗಡ್ಡೂರಿನಲ್ಲಿ ಸಣ್ಣ ಕೆರೆ ಕಟ್ಟಿ, ಅದನ್ನು ಸಣ್ಣದಾಗಿ ಪಳಗಿಸಿ ತಮ್ಮ ಕೆರೆ ತುಂಬಿಸಿಕೊಂಡು ಬಿಡುತ್ತಿದ್ದರು.

ಕುಮಾರ್ ಬುರಡಿಕಟ್ಟಿ ಮತ್ತು ಗೀತಾ ಅವರ ಸರಳ ಮದುವೆ ಈ ಹಿಂದೆ ನಮ್ಮ ಪತ್ರಿಕೆಯಲ್ಲಿದ್ದ ಬಸವರಾಜು ಅವರ ಸರಳ ಮದುವೆಯನ್ನು ನೆನಪಿಸಿತು. ಪಿ.ಲಂಕೇಶ್ ಮೇಷ್ಟ್ರು ಅಂತಹ ಬಹಳಷ್ಟು ಸರಳ ಮದುವೆಗಳನ್ನು ಮಾಡಿಸಿದ್ದರು. ಹಾಗೆಯೇ ಕುಂ.ವೀರಭದ್ರಪ್ಪ, ಡಾ. ವಿ.ಎಸ್. ಶ್ರೀಧರ, ಶಿವಸುಂದರ್, ಪಾರ್ವತೀಶ ಮತ್ತು ನೀವು ಈ ಸರಳ ಮದುವೆಗೆ ಹಾಜರಿದ್ದು ಸಂತೋಷ ತಂದಿತು. ಇಂತಹ ಸರಳ ಮದುವೆ ಇತರರಿಗೆ ಮೇಲ್ಪಂಕ್ತಿಯಾಗಲಿ ಎಂದು ಹಾರೈಸುತ್ತೇನೆ.

- ಉತ್ತನೂರು ರಾಜಮ್ಮ ವಿ ಶೆಟ್ಟಿ, ಚಿಂತಾಮಣಿ

'ಬೆಳಕು' ಇರುವಲ್ಲಿ 'ಕೊಳಕು' ಇರುವುದಿಲ್ಲ

ಸುವರ್ಣ ವಾಹಿನಿಯ ರಿಯಾಲಿಟಿ ಶೋನ 'ಕೊಳಕು ಬೆಳಕು' ಎಂಬ ಪೂರ್ವಗ್ರಹ ಪೀಡಿತ ಹೆಸರಿನ ಬಗ್ಗೆ ಈಶ ಅವರ ತರ್ಕ ಅತ್ಯಂತ ಸಮಂಜಸವಾಗಿದೆ. ಈ ಶೀರ್ಷಿಕೆಯನ್ನು ವಾಹಿನಿಯಲ್ಲಿ ನೋಡಿದ ತಕ್ಷಣ ನನ್ನಲ್ಲೂ ಇಂಥದೇ ಪ್ರಶ್ನೆ ಮೂಡಿ ನನ್ನ ಸಂಗಾತಿಯ ಜತೆಯಲ್ಲಿ ಈ ಬಗ್ಗೆ ಸಾಕಷ್ಟು ಚರ್ಚೆಯನ್ನೂ ನಡೆಸಿದ್ದೆ.




ಸದರಿ ಶೀರ್ಷಿಕೆ ಸರಿಯಾಗಿಲ್ಲ ಎಂದು ವಾದಿಸುವುದಕ್ಕೆ ವಿಶೇಷ ಪಾಂಡಿತ್ಯವೇನೂ ಬೇಕಾಗಿಲ್ಲ. ಆ ಪದವನ್ನು ಕೇಳಿದ ತಕ್ಷಣ ಅಲ್ಲಿ ಒಪ್ಪಿತವಾಗದ, ಹೊಂದಿಕೆಯಾಗದ ಏನೋ ಒಂದು ಅಂಶ ಇದೆ ಎಂಬುದು ಪಾಮರರಿಗೂ ವೇದ್ಯವಾಗುತ್ತದೆ. ಮೊದಲನೆಯದಾಗಿ, ಕೊಳಗೇರಿ ಎಂದಾಕ್ಷಣ ಅದು ಕೊಳಕು ಎಂದು ಭಾವಿಸುವುದು ಎಷ್ಟರಮಟ್ಟಿಗೆ ಸರಿ? ಹಾಗೆ ಮಾಡುವುದು ಕೊಳಗೇರಿವಾಸಿಗಳಿಗೆ ಮಾಡುವ ಅವಮಾನವಲ್ಲವೇ? ಎರಡನೆಯದಾಗಿ, 'ಬೆಳಕು' ಎಂಬುದರ ಜತೆಗೆ 'ಕೊಳಕು' ಎಂಬ ಪದವನ್ನು ತಳುಕುಹಾಕುವುದೇ ತಪ್ಪು. 'ಬೆಳಕು' ಇರುವಲ್ಲಿ 'ಕೊಳಕು' ಇರುವುದು ಸಾಧ್ಯವಿಲ್ಲ.

ಯಾವುದೇ ಕಾರ್ಯಕ್ರಮಗಳಿಗೆ ಹೆಸರುಗಳನ್ನು ಇರಿಸುವಾಗ ಅದು ಹೊರಡಿಸುವ ಧ್ವನಿಯನ್ನು, ಆ ಧ್ವನಿ ಉಂಟುಮಾಡುವ ಪರಿಣಾಮವನ್ನು ಗಮನದಲ್ಲಿರಿಸಿಕೊಳ್ಳುವುದು ಅತ್ಯಗತ್ಯ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಇಂದಿರಾ ಲಂಕೇಶ್‌ರವರಿಗೆ,

ನಾನು ಹಾಗೂ ಶಿವಮೊಗ್ಗೆಯ ಅಹರ್ನಿಶಿ ಅಕ್ಷತಾ ನಿಮ್ಮ 'ಹುಳಿಮಾವು ಮತ್ತು ನಾನು' ಬರಲಾರಂಭಿಸಿದಾಗ ತಮಾಷೆ ಮಾಡಿಕೊಂಡೆವು ಪರಸ್ಪರ. ಏನಪ್ಪಾ ಎಲ್ಲ ಸುಪ್ರಸಿದ್ಧರ ಹೆಂಡತಿಯರು ಆತ್ಮಕತೆ ಬರೆಯಲಾರಂಭಿಸಿದರಲ್ಲ, ಸದ್ಯ ನಾವಂತೂ ಸುಪ್ರಸಿದ್ಧರ ಹೆಂಡತಿಯರಲ್ಲವಾದ್ದರಿಂದ ಬರೆಯುವ ಗೋಜಿಲ್ಲ ಎಂದು. ದಯವಿಟ್ಟು ಕ್ಷಮಿಸಿ.



ನಂತರ ಕುತೂಹಲಕ್ಕೆ ಓದಲಾರಂಭಿಸಿದೆ. ಎಷ್ಟೊಂದು ಚೆನ್ನಾಗಿ ಮೂಡಿಬಂತು ಇಂದಿರಾವರೆ. ಚೆನ್ನಾಗಿ ಅಂದರೆ ಸೀದಾ, ಸಾದಾ, ನೇರ. ಯಾವ ಪೋಜುಗಳಿಲ್ಲ, ಲಂಕೇಶರ ಬಗ್ಗೆ ಆರಾಧನೆಯಿಲ್ಲ, ಪಾಂಡಿತ್ಯ ಪ್ರದರ್ಶನವಿಲ್ಲ, ನಿಮ್ಮಿಬ್ಬರ ಅಷ್ಟು ವರ್ಷಗಳ ಒಡನಾಟದಲ್ಲಿ ರಾಗ, ದ್ವೇಷ, ಭಿನ್ನಾಭಿಪ್ರಾಯಗಳ ಬಗ್ಗೆ ಮುಚ್ಚು-ಮರೆಯಿಲ್ಲದೆ ನೇರ ಬರೆದಿರುವಿರಿ.

ಹ್ಯಾಟ್ಸಾಫ್ ನಿಮಗೆ. ಅಭಿನಂದನೆಗಳು.

-ಶಾಂತ, ಮೈಸೂರು

ಇಂದಿರಾ ಲಂಕೇಶ್ ಅವರು ಬರೆಯುತ್ತಿದ್ದ 'ಹುಳಿಮಾವು ಮತ್ತು ನಾನು' ಅಂಕಣ ಇಷ್ಟು ಬೇಗ ಮುಗಿಯುತ್ತದೆ ಎಂದು ಅಂದುಕೊಂಡಿರಲಿಲ್ಲ. ಪ್ರತಿ ವಾರ ಆ ಅಂಕಣವನ್ನು ಓದಿದಾಗ ಲಂಕೇಶರು ಇನ್ನೂ ಇಲ್ಲೇ ನಮ್ಮೊಂದಿಗೆ ಇದ್ದಾರೆ ಎಂದು ಅನ್ನಿಸುತ್ತಿತ್ತು. ಆದರೆ ಆ ಅಂಕಣದ ಕೊನೆಯ ಕಂತನ್ನು ಓದುವುದಕ್ಕೆ ತೀರಾ ಕಷ್ಟವಾಯಿತು.

- ಆರ್. ಸುಧೀಂದ್ರಕುಮಾರ್, ಎಸ್‌ಎಮ್‌ಎಸ್ ಮೂಲಕ

ಪ್ರಸಾದ್ ಈಸ್ ಅ ಫೂಲ್: ಪುನೀತ್



ಮೊನ್ನೆ ಏಕಾಏಕಿ ಪುನೀತ್ ರಾಜ್‌ಕುಮಾರ್ ತನ್ನ 'ಆ್ಯಂಗ್ರಿ ಯಂಗ್ ಮ್ಯಾನ್' ರೂಪವನ್ನು ಪತ್ರಕರ್ತರ ಮುಂದೆ ಪ್ರದರ್ಶಿಸಿದರು. ಇತ್ತೀಚಿನ ದಿನಗಳಲ್ಲಿ ಯಾವತ್ತೂ ತನ್ನ ಕೋಪವನ್ನು ಪ್ರದರ್ಶಿಸದ ಪುನೀತ್ ಹೀಗಾಗಲು ಒಂದು ಕಾರಣವೂ ಇತ್ತು.

ಕಳೆದ ವಾರ ಕನ್ನಡ ಚಿತ್ರರಂಗದಲ್ಲಿ ಸಣ್ಣದೊಂದು ವಿವಾದ ಹುಟ್ಟಿಕೊಂಡಿದೆ. ಮುಂಬರುವ ದಿನಗಳಲ್ಲಿ ಇದು ಬೃಹದಾಕಾರವಾಗಿ ಬೆಳೆಯುವ ಸೂಚನೆಯೂ ಕಾಣಿಸುತ್ತಿದೆ. ಈ ವಿವಾದದ ಕೇಂದ್ರಬಿಂದು ಮೊನ್ನೆ ಮೊನ್ನೆ ಗಾಂಧಿನಗರಕ್ಕೆ ಕಾಲಿಟ್ಟಿರುವ 'ಸಮರ್ಥ್ ವೆಂಚರ್ಸ್'ನ ಪ್ರಸಾದ್ ಎಂಬ ಹಂಚಿಕೆದಾರ.

ವೇಣುಗೋಪಾಲ್ ಎಂಬ ಹೊಸ ಯುವಕ ನಿರ್ದೇಶಿಸಿರುವ 'ಈ ಭೂಮಿ ಆ ಬಾನು' ಎಂಬ ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿದ್ದ ಪ್ರಸಾದ್ "ಈ ಚಿತ್ರ ಒಳ್ಳೆಯ ಕಥೆಯನ್ನು ಹೊಂದಿದೆ. ಇತ್ತೀಚೆಗೆ ಕನ್ನಡದಲ್ಲಿ ಕಥೆಯೇ ಇಲ್ಲದ


ಪ್ರಸಾದ್

ಚಿತ್ರಗಳು ಬರುತ್ತಿವೆ. ಮುಖ್ಯವಾಗಿ 50-60 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿರುವ ನಿರ್ಮಾಣ ಸಂಸ್ಥೆಗಳು ಇಂತಹ ಕಥಾವಸ್ತು ಇರುವ ಚಿತ್ರವನ್ನು ಮಾಡಬೇಕು. ಆದರೆ ಅವರು ಕಥೆಯೇ ಇಲ್ಲದ ಚಿತ್ರ ಮಾಡುವುದರಿಂದ ಎಲ್ಲರಿಗೆ ತೊಂದರೆಯಾಗುತ್ತಿದೆಯೇ ವಿನಃ ಯಾರಿಗೂ ಲಾಭವಾಗುವುದಿಲ್ಲ" ಎಂದು ಹೇಳುವ ಮೂಲಕ ತಾನು ಕನ್ನಡ ಚಿತ್ರೋದ್ಯಮದ ದೊಡ್ಡಣ್ಣ ಎಂಬಂತೆ ನಿರ್ಮಾಪಕರಿಗೆ ಕಿವಿಮಾತು ಹೇಳಿದ್ದರು.

ಆದರೆ ವಾಸ್ತವವಾಗಿ ಈ ಪ್ರಸಾದ್ ಎಂಬಾತ ಚಿತ್ರರಂಗಕ್ಕೆ ಕಾಲಿಟ್ಟು ಇನ್ನೂ ಒಂದು ವರ್ಷವೂ ಆಗಿಲ್ಲ. ಇಲ್ಲಿಯತನಕ ಈತ ಒಂದೇ ಒಂದು ಚಿತ್ರವನ್ನೂ ನಿರ್ಮಿಸಿಲ್ಲ. ಈತ ಇಲ್ಲಿಯತನಕ ಒಂದೆರಡು ಚಿತ್ರಗಳ ವಿತರಣಾ ಹಕ್ಕುಗಳನ್ನು ಖರೀದಿಸಿದ್ದು ಅವು ಕೂಡ ಬಾಕ್ಸ್ ಆಫೀಸಿನಲ್ಲಿ ಅಂತಹ ಯಶಸ್ಸನ್ನೂ ಕಂಡಿಲ್ಲ. ಅಂದರೆ ಈತ ಕಳೆದ 50-60 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿರುವ ನಿರ್ಮಾಪಕರಿಗೆ ಬುದ್ಧಿ ಹೇಳುವಷ್ಟು ಬೆಳೆದಿಲ್ಲವೆಂಬುದು ನಿರ್ವಿವಾದ.

ಅವತ್ತು ಎಂತಹ ಚಿತ್ರಗಳನ್ನು ನಿರ್ಮಿಸಬೇಕೆಂದು ಈ ಪ್ರಸಾದ್ ಆಡಿದ ಮಾತಿನಲ್ಲಿ ಯಾವುದೇ ಸಂಸ್ಥೆಯ ಹೆಸರು ಪ್ರಸ್ತಾಪವಾಗದಿದ್ದರೂ ಆತ ಪರೋಕ್ಷವಾಗಿ ರಾಜ್‌ಕುಮಾರ್ ಸಂಸ್ಥೆಯನ್ನು ಗುರಿಯಾಗಿಸಿದ್ದು ಎಲ್ಲರ ಅರಿವಿಗೂ ಬಂದಿತು. ಇದಕ್ಕೆ ಕಾರಣವೂ ಇತ್ತು. ಪುನೀತ್ ರಾಜ್‌ಕುಮಾರ್ ಅಭಿನಯದ 'ಅಣ್ಣಾ ಬಾಂಡ್' ಚಿತ್ರ ಪ್ರಾರಂಭವಾದಾಗ ಅದರ ಕರ್ನಾಟಕದ ಹಂಚಿಕೆಯನ್ನು 16 ಕೋಟಿ ರೂ.ಗಳಿಗೆ ಈ ಪ್ರಸಾದ್ ಖರೀದಿಸಿದ್ದರು. ಆದರೆ ಕೊನೆ ಗಳಿಗೆಯಲ್ಲಿ ಪ್ರಸಾದ್ ಮತ್ತು ನಿರ್ಮಾಪಕ ರಾಘವೇಂದ್ರ ರಾಜ್‌ಕುಮಾರ್ ನಡುವೆ ಏನೋ ಭಿನ್ನಾಭಿಪ್ರಾಯ ಮೂಡಿದ್ದರಿಂದ ಪ್ರಸಾದ್ ಆ ಚಿತ್ರದ ಹಂಚಿಕೆಯ ಜವಾಬ್ದಾರಿಯಿಂದ ಹಿಂದೆ ಸರಿದಿದ್ದರು. ಇದರಿಂದ ವಿಚಲಿತರಾಗದ ರಾಘವೇಂದ್ರ ರಾಜ್‌ಕುಮಾರ್ ತನ್ನದೇ ಶೈಲಿಯಲ್ಲಿ ಚಿತ್ರವನ್ನು ಮಾರಾಟ ಮಾಡಿ ಲಾಭ ಮಾಡಿಕೊಂಡರು. 'ಅಣ್ಣಾ ಬಾಂಡ್' ಬಿಡುಗಡೆಯಾದ ನಂತರ ಅದರಲ್ಲಿ ಹೇಳಿಕೊಳ್ಳುವಂತಹ ಕಥೆ ಇಲ್ಲ ಎಂಬುದೇ ಹೆಚ್ಚು ಜನರ ಅಭಿಪ್ರಾಯವಾಗಿತ್ತು. ಬಾಕ್ಸ್ ಆಫೀಸ್‌ನಲ್ಲಿ ಆ ಚಿತ್ರ ಸುಮಾರಾಗಿಯೇ ನಡೆಯಿತು. ಈ ಹಿನ್ನೆಲೆಯಲ್ಲೇ ಪ್ರಸಾದ್ ಅವತ್ತು ತಮ್ಮ 'ಅಮೂಲ್ಯವಾದ ಉಪದೇಶವನ್ನು' ಪುಕ್ಕಟೆಯಾಗಿ ನೀಡಿದ್ದು ಎಂಬುದು ಎಲ್ಲರಿಗೂ ಅರ್ಥವಾಯಿತು.

ಪ್ರಸಾದ್ ಮಾತಿಗೆ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಶಿವರಾಜ್‌ಕುಮಾರ್ "ನಾವು 80ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದೇವೆ. ನಮ್ಮ ಸಂಸ್ಥೆ ಯಾವ್ಯಾವ ರೀತಿಯ ಚಿತ್ರ ಮಾಡಬೇಕು ಎಂಬುದನ್ನು ನಮಗೆ ಯಾರೂ ಹೇಳಿಕೊಡುವ ಅಗತ್ಯವಿಲ್ಲ" ಎಂದು ಗುಡುಗಿದರು.

ಆದರೆ ಅವರ ಕಿರಿಯ ಸಹೋದರ ಪುನೀತ್ ರಾಜ್‌ಕುಮಾರ್ ಮುಂದೆ ಮೊನ್ನೆ ಪತ್ರಕರ್ತರು ಪ್ರಸಾದ್ ಬಗ್ಗೆ ಪ್ರಸ್ತಾಪಿಸಿದ ಕೂಡಲೇ ತನ್ನ ಆ್ಯಂಗ್ರಿ ಯಂಗ್ ಮ್ಯಾನ್ ರೂಪವನ್ನು ಪುನೀತ್ ಪ್ರದರ್ಶಿಸಿದರು.

"ಹೂ ಈಸ್ ದಟ್ ಪರ್ಸನ್? ಐ ಥಿಂಕ್ ಹಿ ಈಸ್ ಅ ಫೂಲ್. ಆತ ಕನ್ನಡ ಚಿತ್ರರಂಗಕ್ಕೆ ಐರನ್ ಲೆಗ್ ಇದ್ದಂತೆ. ಲಾಟರಿ ಮಾರಾಟ ಮಾಡುತ್ತಿದ್ದವರು ಚಿತ್ರರಂಗಕ್ಕೆ ಬಂದು ನಮಗೆ ಬುದ್ಧಿ ಹೇಳುತ್ತಿದ್ದಾರೆ. ಒಂದು ಚಿತ್ರವನ್ನೂ ಮಾಡಿದ ಅನುಭವವಿಲ್ಲದ ಆ ವ್ಯಕ್ತಿಯಿಂದ ನಾವು ಕಲಿಯಬೇಕಾದದ್ದು ಏನೂ ಇಲ್ಲ. ಇದನ್ನು ಮನಗೊಂಡು ಆತ ತನ್ನ ವರ್ತನೆಯನ್ನು ಬದಲಿಸಿದರೆ ಒಳ್ಳೆಯದು. ಇಲ್ಲದಿದ್ದರೆ ನಾವು ಕೂಡ ನಮ್ಮದೇ ಶೈಲಿಯಲ್ಲಿ ಮಾತನಾಡ ಬೇಕಾಗುತ್ತದೆ. ನಮ್ಮ ಸಂಸ್ಥೆ 50 ವರ್ಷಗಳಿಂದ 80 ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದು ಅವು ಕನ್ನಡಿಗರ ಮನಸ್ಸನ್ನು ಗೆದ್ದಿರುವುದು ಸಮಸ್ತ ಕನ್ನಡಿಗರಿಗೆ ಗೊತ್ತು" ಎಂದು ಪುನೀತ್ ಅವರು ಪ್ರಸಾದ್ ... ತನ್ನ ಕೋಪವನ್ನು ಪ್ರದರ್ಶಿಸಿದರು.

ಮಾತಿನ ಮಲ್ಲ ಪ್ರಸಾದ್ ಇಲ್ಲಿಯತನ... ಪುತ್ರರಿಬ್ಬರ ಅಬ್ಬರಕ್ಕೆ ಪ್ರತಿಕ್ರಿಯಿಸದೇ ... ಶರಣಾಗಿದ್ದಾರೆ. ಇದೇ ಕೆಲಸವನ್ನು ... ಆರಂಭದಲ್ಲೇ ಮಾಡಿದ್ದರೆ ಬಹುಶಃ ಇಷ್ಟು... ವಿವಾದ ಹುಟ್ಟುತ್ತಿರಲಿಲ್ಲವೋ ಏನೋ?

ಅಪರೂಪ-ಅದ್ದೂರಿ-ದುಬಾರಿ

ಕನ್ನಡ ಸಾಹಿತ್ಯ ಲೋಕದ ಅತ್ಯಂತ ದುಬಾರಿ ಪುಸ್ತಕ ಈಗ ಮಾರುಕಟ್ಟೆಗೆ ಬಂದಿದೆ. ಡಾ. ರಾಜ್‌ಕುಮಾರ್ ಅವರ ಬಗ್ಗೆ ಅವರ ಮಗ ಪುನೀತ್ ರಾಜ್‌ಕುಮಾರ್ ಬರೆದಿರುವ ... ಇಂಗ್ಲಿಷ್ ಮತ್ತು ಕನ್ನಡ ಎರಡು ಭಾಷೆಗಳಲ್ಲೂ ಮುದ್ರಣಗೊಂಡಿರುವ ಈ ಪುಸ್ತಕದ ... ಆವೃತ್ತಿಗೆ 'ಡಾ. ರಾಜ್‌ಕುಮಾರ್ - ವ್ಯಕ್ತಿತ್ವದ ಹಿಂದಿನ ವ್ಯಕ್ತಿ' ಎಂದು ಶೀರ್ಷಿಕೆ ಇಟ್ಟಿದ್ದರೆ ಇಂ... ಆವೃತ್ತಿಗೆ 'Dr. Rajkumar - the personality behind the person' ... ಹೆಸರಿಡಲಾಗಿದೆ. 280 ಪುಟಗಳನ್ನು ಹೊಂದಿರುವ ಈ ಪುಸ್ತಕದ ಇಂಗ್ಲಿಷ್ ಆವೃತ್ತಿಯ ಬೆಲೆ ... 2250 ಆದರೆ ಕನ್ನಡ ಪುಸ್ತಕವನ್ನು ರೂ.1900 ಗಳಿಗೆ ಖರೀದಿಸಬಹುದು. ಈ ಪುಸ್ತಕದಲ್ಲಿ ... ಅಣ್ಣಾವ್ರ ಸುಮಾರು 1750 ಫೋಟೋಗಳಿವೆ. ಅವುಗಳಲ್ಲಿ ಅನೇಕ ಫೋಟೋಗಳು ಅಪರೂಪದ...

ಕನ್ನಡ ಚಿತ್ರರಂಗದ ಕಲಾವಿದರ ಬಗ್ಗೆ ಅವರ ಮಕ್ಕಳು ಪುಸ್ತಕ ಬರೆದಿರುವುದು ... ಮೊದಲು. ಅದರಲ್ಲೂ ಅಪ್ಪ-ಮಗ ಇಬ್ಬರೂ ನಟರಾಗಿರುವುದು ಅಪರೂಪವೇ ಸರಿ. ಆ ನಿಟ... ಈ ಪುಸ್ತಕ ವಿಶೇಷ ಎಂದೇ ಹೇಳಬಹುದು.



ಈ ಪುಸ್ತಕದ ಮತ್ತೊಂದು ವಿಶೇಷತೆಯೆಂದರೆ ರಾಜ್‌ಕುಮಾರ್ ಕುಟುಂಬದ ಸದಸ್ಯರು ಅವರನ್ನು ಯಾವ ದೃಷ್ಟಿಕೋನದಿಂದ ನೋಡಿದರು ಎಂಬುದು. ಹೀಗಾಗಿ ಅಣ್ಣಾವ್ರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ದೂರದ ಸಂಬಂಧಿಗಳು, ಯೋಗ ಗುರು, ಸೊಸೆಯಂದಿರು...... ಹೀಗೆ ಅಣ್ಣಾವ್ರ ಕುಟುಂಬದ ಸದಸ್ಯರು ಅವರವರ ಅನಿಸಿಕೆಗಳನ್ನು ಈ ಪುಸ್ತಕದಲ್ಲಿ ವ್ಯಕ್ತಪಡಿಸಿ... ಈ ನಿಟ್ಟಿನಲ್ಲಿ ರಾಜ್‌ಕುಮಾರ್ ಅವರನ್ನು ಕುರಿತು ಈ ಹಿಂದೆ ಬಂದಿರುವ ಎಲ್ಲಾ ಪುಸ್ತಕಗಳಿ... ಇದು ವಿಭಿನ್ನವಾಗಿದೆ ಎಂದು ಹೇಳಬಹುದು.

ಈ ಪುಸ್ತಕವನ್ನು ಬರೆದಿರುವ ಪುನೀತ್ ರಾಜ್‌ಕುಮಾರ್ ಅವರ ಹೆಗಲಿಗೆ ಹೆಗಲು ಕೊ... ಕೆಲಸ ಮಾಡಿರುವವರು ಅವರ ಗೆಳೆಯ ಪ್ರಕೃತಿ ಬನವಾಸಿ. ಈ ಪುಸ್ತಕದ ಡಿಸೈನ್, ಫೋಟೋ... ಸಣ್ಣಸಣ್ಣ ಲೇಖನಗಳು ಎಲ್ಲವೂ ಚೆನ್ನಾಗಿದ್ದು ಇದರ ಒಟ್ಟಾರೆ ಗುಣಮಟ್ಟ ಅತ್ಯುತ್ತಮವಾ... ಸಂಗ್ರಹಯೋಗ್ಯವಾದ ಈ ಪುಸ್ತಕ ಅಣ್ಣಾವ್ರ ಅಭಿಮಾನಿಗಳ ಪಾಲಿಗೆ ದುಬಾರಿಯಾಗಿದ್ದು ... ಕೈಗೆಟುಕದ ದ್ರಾಕ್ಷಿಯಾಗುತ್ತದೆ ಎಂಬುದಷ್ಟೇ ಬೇಸರದ ವಿಷಯ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764...
Fax : 26604536, E-mail :lankesh70@rediffmail...